ಸಂಪುಟ: 06 ಸಂಚಿಕೆ: 219 ಪುಟಗಳು: 08 ಭಾನುವಾರ 25 ಅಕ್ಟೋಬರ್ 2026 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035621249 ₹5

ಮುಂಜಾನೆ ಮಾತು

ತಪ್ಪುಗಳನ್ನು ಮಾಡುತ್ತಿರುತ್ತೇವೆ ಎಂದು ಗೊತ್ತಿದ್ದೂ ನಮ್ಮೊಡನೆ ಪ್ರೀತಿಯಿಂದ ಇರಬಯಸುವವರನ್ನು ಗೌರವಿಸೋಣ, ಯಾರೂ ಪರಿಪೂರ್ಣರಲ್ಲವಲ್ಲ!

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಬಿಜೆಪಿಯಲ್ಲೂ ಇದೆ ಸಿಡಿ ಫ್ಯಾಕ್ಟರಿ, ಸದ್ಯದಲ್ಲೇ ಹೊರ ಬರುತ್ತೆ: ಬಸನಗೌಡ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜಕೀಯದಲ್ಲಿ ಸಿಡಿ ಮತ್ತು ಸ್ಟಿಂಗ್ ಆಪರೇಷನ್ ಸಂಬಂಧಿತ ಚರ್ಚೆ ಜೋರಾಗಿರುವ ಸಂದರ್ಭದಲ್ಲೇ ಮತ್ತೊಂದು ಸ್ಫೋಟಕ ಆರೋಪ ಕೇಳಿಬಂದಿದೆ. ಬಿಜೆಪಿಯಲ್ಲೂ ಸಿಡಿ ಫ್ಯಾಕ್ಟರಿ ಇದೆ. ಅಲ್ಲಿಯೂ ಕೆಲವು ಸ್ಟಿಂಗ್ ಆಪರೇಷನ್‌ಗಳು ನಡೆದಿವೆ. ಆ ಸಿಡಿಗಳು ಯಾವಾಗ ಹೊರಬರುತ್ತವೆ ಎಂಬುದನ್ನು ನೋಡಬೇಕು' ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸ್ಫೋಟಕ ಹೇಳಿಕೆ ನೀಡಿದ್ದಾರೆ. ನವದೆಹಲಿಯಲ್ಲಿ ಮಾತನಾಡಿದ ಯತ್ನಾಳ್, ಕರ್ನಾಟಕದಲ್ಲಿ ಎರಡು ಸಿಡಿ ಫ್ಯಾಕ್ಟರಿಗಳಿವೆ ಎಂದು ತಾವು ಬಹಳ ಹಿಂದೆಯೇ ಹೇಳಿದ್ದಾಗಿ ತಿಳಿಸಿದರು. ಒಂದು ಸಿಡಿ ಫ್ಯಾಕ್ಟರಿ ಯಾವುದು ಎಂಬುದು ಎಲ್ಲರಿಗೂ ಗೊತ್ತಾಗಿದೆ ಎಂದ ಅವರು, ಮತ್ತೊಂದು ಫ್ಯಾಕ್ಟರಿ ಬಿಜೆಪಿಯಲ್ಲೂ ಇದೆ ಎಂದು ಆರೋಪಿಸಿದರು.

ರಾಜಕೀಯ ಎದುರಾಳಿಗಳು ಹಾಗೂ ಭವಿಷ್ಯದಲ್ಲಿ ತಮಗೆ ಅಡ್ಡಿಯಾಗಬಹುದು ಎಂದು ಭಾವಿಸುವವರನ್ನು ಬ್ಲ್ಯಾಕ್‌ಮೇಲ್ ಮಾಡಲು ಇಂತಹ ವಿಡಿಯೋಗಳನ್ನು ಬಳಸಲಾಗುತ್ತಿದೆ ಎಂಬ ಗಂಭೀರ ಆರೋಪವನ್ನೂ ಮಾಡಿದರು. ಕರ್ನಾಟಕದಲ್ಲಿ ಸಿಡಿ ಮತ್ತು ಸ್ಟಿಂಗ್ ಆಪರೇಷನ್‌ಗಳನ್ನು ಬಳಸಿಕೊಂಡು ಬ್ಲ್ಯಾಕ್ ಮೇಲ್ ಮಾಡುವುದು ಒಂದು ವ್ಯವಹಾರವಾಗಿ ಬೆಳೆದಿದೆ.

ಆಸ್ಪತ್ರೆಗಳು-ಇನ್ಶೂರೆನ್ಸ್ ಕಂಪನಿಗಳ ಕಳ್ಳಾಟಕ್ಕೆ ಬ್ರೇಕ್ ಹಾಕಲು ಮಹತ್ವದ ಹೆಜ್ಜೆಯಿಟ್ಟ ಆರೋಗ್ಯ ಇಲಾಖೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಆರೋಗ್ಯ ಇನ್ಶೂರೆನ್ಸ್ ಹೊಂದಿರುವ ರೋಗಿಗಳು ಸಹ ಚಿಕಿತ್ಸಾ ವೆಚ್ಚಕ್ಕಾಗಿ ಕೈಯಿಂದ ಹಣ ಪಾವತಿಸುವಂತಹ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಆಸ್ಪತ್ರೆಗಳು ಒಂದು ಲಕ್ಷ ರೂಪಾಯಿ ಸರ್ಜರಿಗೆ ಎರಡು ಅಥವಾ ಮೂರು ಲಕ್ಷ ರೂಪಾಯಿ ಬಿಲ್ ಮಾಡುವ ಮೂಲಕ ಇನ್ಶೂರೆನ್ಸ್ ಇದ್ದರೂ ರೋಗಿಗಳಿಗೆ ಸಂಕಷ್ಟ ತಪ್ಪುತ್ತಿಲ್ಲ.

ಒಂದು ಲಕ್ಷದ ಬಿಲ್‌ಗೆ ಕೇವಲ 50 ಸಾವಿರ ರೂಪಾಯಿ ಮಾತ್ರ ಕ್ಲೈಮ್ ಆಗುವ ಉದಾಹರಣೆಗಳಿದ್ದು, ಉಳಿದ ಹಣವನ್ನು ರೋಗಿಗಳೇ ಭರಿಸಬೇಕಾಗಿದೆ. ಇನ್ಶೂರೆನ್ಸ್ ಕಂಪನಿಗಳು ಮತ್ತು ಆಸ್ಪತ್ರೆಗಳ ನಡುವಿನ 'ಕಳ್ಳಾಟ''ದಿಂದಾಗಿ ಲಕ್ಷಾಂತರ ಹಣ ಕಟ್ಟಿ ಪ್ರೀಮಿಯಂ ಹೊಂದಿರುವ ರೋಗಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಆರೋಗ್ಯ ಸಚಿವ ಯು.ಟಿ. ಖಾದರ್ ಅವರ ಸೂಚನೆಯಂತೆ ಇನ್ಶೂರೆನ್ಸ್ ಕಂಪನಿಗಳ ಜೊತೆ ಸಭೆ ನಡೆಸಲು ಮುಂದಾಗಿದ್ದು, ಇನ್ಶೂರೆನ್ಸ್ ಪಾಲಿಸಿ ಹೊಂದಿರುವ ರೋಗಿಗಳಿಗೆ ಸಂಪೂರ್ಣ ಚಿಕಿತ್ಸಾ ವೆಚ್ಚ ಲಭಿಸುವಂತೆ ಮಾಡುವುದು ಮತ್ತು ಆಸ್ಪತ್ರೆಗಳ ಅತಿಯಾದ ಬಿಲ್ಲಿಂಗ್ ತಡೆಯುವುದು ಈ ಕ್ರಮದ ಮುಖ್ಯ ಉದ್ದೇಶವಾಗಿದೆ.

ಆರ್‌ಟಿಓ ಸಾರಿಗೆ ಇಲಾಖೆಯಲ್ಲಿ ಬಡ್ತಿ ಅಕ್ರಮ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ಮೋಟಾರು ವಾಹನ ತನಿಖಾಧಿಕಾರಿ' ಹುದ್ದೆಗಳ ಬಡ್ತಿ ಪ್ರಕ್ರಿಯೆಯಲ್ಲಿ ಭಾರೀ ಅಕ್ರಮ ನಡೆದಿದ್ದು, ನಿಯಮಗಳನ್ನು ಗಾಳಿಗೆ ತೂರಿ ನಕಲಿ ದಾಖಲೆಗಳ ಮೂಲಕ ಕೆಲಸ ಗಿಟ್ಟಿಸಿಕೊಳ್ಳಲು ನೌಕರರು ಮುಂದಾಗಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಸಾಮಾಜಿಕ ಹೋರಾಟಗಾರ ಪರಶುರಾಮ ನೀಲ್ ನಾಯಕ್ ಅವರು ರಾಜ್ಯಪಾಲರು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಸಾರಿಗೆ ಇಲಾಖೆಯ ಆಯುಕ್ತರಿಗೆ ಸಂಪೂರ್ಣ ದಾಖಲೆಗಳ ಸಮೇತ ದೂರು ನೀಡಿದ್ದಾರೆ. ಸಾರಿಗೆ ಇಲಾಖೆಯಲ್ಲಿ ಇನ್-ಸರ್ವಿಸ್ ಕೋಟಾದಡಿ 12 ಐಎಂವಿ ಹುದ್ದೆಗಳು ಖಾಲಿಯಿದ್ದು, ಇವುಗಳನ್ನು ಪಡೆಯಲು 46 ಹಾಲಿ ನೌಕರರು ಅರ್ಜಿ ಸಲ್ಲಿಸಿದ್ದಾರೆ. ನಿಯಮಾವಳಿಗಳ ಪ್ರಕಾರ, ಪ್ರಮೋಷನ್ ಪಡೆಯಲು ಅಭ್ಯರ್ಥಿಗಳು ಕೆಲಸಕ್ಕೆ ಸೇರುವ ಮುನ್ನವೇ ಮೆಕಾನಿಕಲ್ ಅಥವಾ ಆಟೋಮೊಬೈಲ್ ವಿಭಾಗದಲ್ಲಿ ರೆಗ್ಯುಲರ್ ಡಿಪ್ಲೊಮಾ/ಬಿ.ಇ ಮಾಡಿರಬೇಕು. ಇಲ್ಲವೇ ಉದ್ಯೋಗದಲ್ಲಿದ್ದಾಗ ಮೂರು ವರ್ಷ ರಜೆ ಪಡೆದು ವಿದ್ಯಾಭ್ಯಾಸ ಮುಗಿಸಿರಬೇಕು. ನೀಡಿ ಬಡ್ತಿ ಪಡೆಯಲು ಯತ್ನಿಸುತ್ತಿದ್ದಾರೆ.

ಜೆಡಿಎಸ್ ಕಾರ್ಯಕರ್ತರಿಗೆ ಕಿರುಕುಳ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ಸಂಚಲನ ಸೃಷ್ಟಿಸಿರುವ ಸ್ಟಿಂಗ್ ಆಪರೇಷನ್ ವಿವಾದಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಯತೀಂದ್ರ ಸಿದ್ದರಾಮಯ್ಯ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿರುವುದಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ಗ್ರಾಮದ ರಂಗನಾಥಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮಾತನಾಡಿ, ಕೆಪಿಎಸ್ಸಿ ಹಗರಣ ಮುಚ್ಚಿಕೊಳ್ಳಲು ಸರ್ಕಾರವು ಕೆಲ ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ತೀವ್ರವಾಗಿ ಕಿಡಿಕಾರಿದ್ದಾರೆ. ಸಚಿವ ಡಾ.ಯತೀಂದ್ರ ಅವರು ಪಕ್ಷದ ಕಾರ್ಯಕರ್ತರು ಹಾಗೂ ಖಾಸಗಿ ವಾಹಿನಿಯೊಬ್ಬರು ಸೇರಿ ಈ ಪಿತೂರಿ ನಡೆಸಿರುವುದನ್ನು ತಾತ್ಕಾಲಿಕವಾಗಿ ಒಪ್ಪಿಕೊಂಡಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದರು.

ನೀವು ಕ್ರೈಂ ಚಟುವಟಿಕೆಗಳಲ್ಲಿದ್ದೀರಾ ಎಂದು ಪೊಲೀಸರ ಮೂಲಕ ಬೆದರಿಕೆ ಹಾಗೂ ಕಿರುಕುಳ ನೀಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭಾರತ ಮತ್ತು ಚೀನಾ ನಡುವಿನ ಸಂಬಂಧವನ್ನು ಪರಸ್ಪರ ವಿಶ್ವಾಸ, ಗೌರವ ಮತ್ತು ಸಂವೇದನಾಶೀಲತೆಯ ಆಧಾರದಲ್ಲಿ ಮುಂದಕ್ಕೆ ಕೊಂಡೊಯ್ಯಲು ಭಾರತ ಬದ್ಧವಾಗಿದೆ ಎಂದು ಮೋದಿ ಆ ಸಂದರ್ಭದಲ್ಲಿ ತಿಳಿಸಿದ್ದರು. ಕಳೆದ ತಿಂಗಳು ನವದೆಹಲಿಯಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯ ಸಂದರ್ಭದಲ್ಲಿ ಮೋದಿ ಮತ್ತು ಷಿ ಜಿನ್‌ಪಿಂಗ್ ದ್ವಿಪಕ್ಷೀಯ ಮಾತುಕತೆ ನಡೆಸಿದ್ದರು. ಪರಸ್ಪರರ ಪ್ರಮುಖ ಹಿತಾಸಕ್ತಿಯ ವಿಚಾರಗಳ ಬಗ್ಗೆ ಎರಡೂ ದೇಶಗಳು ಸಂವೇದನಾಶೀಲತೆ ತೋರಬೇಕು ಮತ್ತು ಸಂಬಂಧಗಳು 'ಮೂರು ಪರಸ್ಪರ' ತತ್ವಗಳಾದ ಪರಸ್ಪರ ಗೌರವ, ಪರಸ್ಪರ ಸಂವೇದನಾಶೀಲತೆ ಹಾಗೂ ಪರಸ್ಪರ ಹಿತಾಸಕ್ತಿಗಳ ಆಧಾರದಲ್ಲಿ ಸಾಗಬೇಕು ಎಂದು ಮೋದಿ ಒತ್ತಿಹೇಳಿದ್ದರು. ಕಳೆದ ಕೆಲವು ವಾರಗಳಿಂದ, ಅರುಣಾಚಲ ಪ್ರದೇಶದ ಅನೇಕ ಸ್ಥಳಗಳಲ್ಲಿ ಚೀನಾದ ಸೈನಿಕರು ಮತ್ತು ಭಾರತೀಯ ಪಡೆಗಳ ನಡುವೆ ಘರ್ಷಣೆಗಳು ನಡೆದಿವೆ ಮತ್ತು ಅವು ಇನ್ನೂ ಮುಂದುವರೆದಿವೆ. ಈ ವರ್ಷದ ಜುಲೈನಿಂದ, ಚೀನಾದ ಸೈನಿಕರೊಂದಿಗೆ ಘರ್ಷಣೆಗಳ ವರದಿಗಳು ಬರುತ್ತಿವೆ. ಮೋದಿ ಸರ್ಕಾರ ಈ ವರದಿಗಳನ್ನು ನಿಗ್ರಹಿಸುವಲ್ಲಿ ನಿರತವಾಗಿದೆ. ಚೀನಾ ವಿರುದ್ಧ ಆಕ್ರೋಶ ವ್ಯಕ್ತಪಡಿಸುವ ಬದಲು ನರೇಂದ್ರ ಮೋದಿ ಅವರು ಬ್ರಿಕ್ಸ್ ಶೃಂಗಸಭೆಯಲ್ಲಿ ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ತಮಾಷೆ ಮಾಡುತ್ತಿರುವುದು ಕಂಡುಬಂದಿದೆ ಎಂದು ಕಿಡಿಕಾರಿದ್ದಾರೆ.

ಚೀನಾ ನಡೆಗೆ ಭಾರತ ಆಕ್ಷೇಪ

ಭಾರತ ಮತ್ತು ಚೀನಾ ನಡುವಿನ ಗಡಿ ಪ್ರದೇಶಗಳಲ್ಲಿ ಉಂಟಾಗಿರುವ ಗೊಂದಲಕ್ಕೆ ಚೀನಾ ಪಡೆಗಳು ನಿಗದಿತ ಗಸ್ತು ಮಾದರಿಗಳನ್ನು ಬದಲಿಸುವುದೇ ಮುಖ್ಯ ಕಾರಣ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವಾಸ್ತವಿಕ ನಿಯಂತ್ರಣ ರೇಖೆಯ (ಎಲ್‌ಎಸಿ) ಉದ್ದಕ್ಕೂ ಯಾವುದೇ ರೀತಿಯ ತಪ್ಪುಗ್ರಹಿಕೆಗಳು ಹಾಗೂ ತಪ್ಪು ಲೆಕ್ಕಾಚಾರಗಳು ಸಂಭವಿಸದಂತೆ ತಡೆಯಲು ಮತ್ತು ಬಾಕಿ ಉಳಿದಿರುವ ವಿವಾದಗಳನ್ನು ಪರಿಹರಿಸಲು ಉಭಯ ದೇಶಗಳು ಹಾಲಿ ಇರುವ ರಾಜತಾಂತ್ರಿಕ ಹಾಗೂ ಸೇನಾ ಮಟ್ಟದ ಮಾತುಕತೆಗಳನ್ನು ಮುಂದುವರಿಸಿವೆ ಎಂದು ತಿಳಿಸಿದರು. ನಾವು ಈ ಹಿಂದೆಯೂ ಸ್ಪಷ್ಟಪಡಿಸಿರುವಂತೆ, ಚೀನಾ ಪಡೆಗಳು ನಿಗದಿತ ಗಸ್ತು ನಿಯಮಗಳನ್ನು ಮೀರಿದಾಗ ಅಥವಾ ಬದಲಾಯಿಸಿದಾಗ ಮಾತ್ರ ಭಾರತ-ಚೀನಾ ಗಡಿಯಲ್ಲಿ ವಾತಾವರಣ ಹಾಳಾಗುತ್ತದೆ ಎಂದು ರಣಧೀರ್ ಜೈಸ್ವಾಲ್ ಪ್ರತಿಪಾದಿಸಿದ್ದಾರೆ. ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವುದು ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಬಾಂಧವ್ಯ ಹಾಗೂ ಒಟ್ಟಾರೆ ಪ್ರಗತಿಯ ವಿಕಾಸಕ್ಕೆ ತೀರಾ ಅತ್ಯಗತ್ಯ, ಸಂಭವಿಸದಂತೆ ತಡೆಯಲು ಮತ್ತು ಬಾಕಿ ಉಳಿದಿರುವ ವಿವಾದಗಳನ್ನು ಪರಿಹರಿಸಲು ಚೀನಾ ಪಡೆಗಳು ನಿಗದಿತ ಗಸ್ತು ನಿಯಮಗಳನ್ನು ಮೀರಿದಾಗ ಎಂದು ವಿದೇಶಾಂಗ ಸಚಿವಾಲಯದ ವಕ್ತಾರರು ಒತ್ತಿ ಹೇಳಿದ್ದಾರೆ.

ಮತ್ತೆ ಗಲ್ವಾನ್ ಚೀನಾ ಗಾಂಚಲಿ

ಮಲ್ಲಿಕಾರ್ಜುನ ಖರ್ಗೆ ಪೋಸ್ಟ್

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಖರ್ಗೆ, ಅರುಣಾಚಲ ಪ್ರದೇಶದಲ್ಲಿ ಚೀನಿ ಸೇನೆ ನಡೆಸುತ್ತಿರುವ ಮುಖಾಮುಖಿ ಘಟನೆಗಳು ಮುಂದುವರಿದಿವೆ ಎಂದು ಐಟಿಬಿಪಿ ಮಹಾನಿರ್ದೇಶಕರು ದೃಢಪಡಿಸಿರುವುದು ಅತ್ಯಂತ ಆತಂಕಕಾರಿ ವಿಷಯವಾಗಿದೆ. ಡೋಕ್ಲಾಂ ಮತ್ತು ಗಲ್ವಾನ್ ನಂತರ, ಈಗ ಮತ್ತೊಂದು ಗಂಭೀರ ಸಂಘರ್ಷ ನಡೆಯುತ್ತಿದೆಯೇ ಆಗಸ್ಟ್ ತಿಂಗಳಿನಲ್ಲಿ ಟಾಕ್ಸಿಂಗ್ ಬಳಿ ಚೀನಿ ಪಡೆಗಳು ಒಳನುಸುಳಿರುವ ಬಗ್ಗೆ ವರದಿಗಳು ಬಂದಿದ್ದವು, ಎಂದು ಬರೆದುಕೊಂಡಿದ್ದಾರೆ. ಗಾಲ್ವಾನ್‌ನಲ್ಲಿ 20 ಭಾರತೀಯ ಸೇನಾ ಯೋಧರ ಬಲಿದಾನದ ನಂತರ , ಚೀನಾದ ಆಮದು ಶೇ.102 ರಷ್ಟು ಹೆಚ್ಚಾಗಿದೆ. ಆದರೆ ಚೀನಾದೊಂದಿಗಿನ ಭಾರತದ ವ್ಯಾಪಾರ ಕೊರತೆಯು ಶೇ.155 ರಷ್ಟು ಹೆಚ್ಚಾಗಿ 112.16 ಬಿಲಿಯನ್‌ಗೆ ತಲುಪಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕೂಡ ಭಾರತೀಯ ರಫ್ತಿಗೆ ಚೀನಾ ಅಡ್ಡಿಪಡಿಸುತ್ತಿದೆ ಎಂದು ಒಪ್ಪಿಕೊಳ್ಳುತ್ತಾರೆ.

ಆದರೂ, ಸರ್ಕಾರವು ಚೀನಾದ ಹೂಡಿಕೆ ನಿರ್ಬಂಧಗಳನ್ನು ಸಡಿಲಿಸುತ್ತಿದೆ ಮತ್ತು ಅರ್ಹ ಚೀನಾ-ಸಂಬಂಧಿತ ಉದ್ಯಮಗಳನ್ನು ಪ್ರಯೋಜನಗಳಿಗೆ ಪರಿಗಣಿಸುತ್ತಿದೆ. ಮೇಕ್ ಇನ್ ಇಂಡಿಯಾ ಚೀನಾದಿಂದ ಆಮದು ಆಗಿದೆಯೇ? ಎಂದು ಖರ್ಗೆ ಪ್ರಶ್ನಿಸಿದ್ದಾರೆ. ಮೋದಿ-ಕ್ಸಿ ಸಭೆಗಳು, ಅಜಿತ್ ದೋವಲ್ ಒಳಗೊಂಡ 25 ವಿಶೇಷ ಪ್ರತಿನಿಧಿಗಳ ಸಭೆ, ಸಭೆಗಳು ಮತ್ತು ಶೃಂಗಸಭೆಗಳಿಂದ ಯಾವ ಸ್ಪಷ್ಟ ಫಲಿತಾಂಶ ನೀಡಿದೆ? ಭಾರತದ 2020 ರ ಮೇ ತಿಂಗಳ ಪೂರ್ವದ ಗಸ್ತು ಹಕ್ಕುಗಳನ್ನು ಸಂಪೂರ್ಣವಾಗಿ ಪುನಃಸ್ಥಾಪಿಸಲಾಗಿದೆಯೇ?. ನಮ್ಮ ಸಶಸ್ತ್ರ ಪಡೆಗಳ ಮೇಲೆ ನಮಗೆ ಸಂಪೂರ್ಣ ವಿಶ್ವಾಸವಿದೆ. ಆದರೆ ರಾಷ್ಟ್ರೀಯ ಭದ್ರತೆಗೆ ಹೊಣೆಗಾರಿಕೆ ಮುಖ್ಯವೇ ಹೊರತು ರಾಜತಾಂತ್ರಿಕ ಫೋಟೋ ಅವಕಾಶಗಳು ಮತ್ತು ಅಪ್ಪುಗೆಗಳು ಅಲ್ಲ. ವಿರೋಧ ಪಕ್ಷದ ಮೇಲೆ ದಾಳಿ ಮಾಡುವ ಬದಲು, ಪ್ರಧಾನಿ ಮೋದಿ ಸಂಸತ್ತು ಮತ್ತು ರಾಷ್ಟ್ರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದು ಖರ್ಗೆ ಆಗ್ರಹಿಸಿದ್ದಾರೆ.

ದ್ವಿಪಕ್ಷೀಯ ಬಾಂಧವ್ಯಕ್ಕೆ ಅತ್ಯಗತ್ಯ

ಜೈಸ್ವಾಲ್, ಚೀನೀ ಪಡೆಗಳು ತಾವು ಗಸ್ತು ತಿರುಗುವ ನಿಗದಿತ ಮಾರ್ಗ ಬದಲಿಸಿದಾಗ ಗಡಿಯಲ್ಲಿ ಆಗಾಗ ಪರಿಸ್ಥಿತಿ ಹದಗೆಡುತ್ತಿರುವುದನ್ನು ಗಮನಿಸಿದ್ದೇವೆ ಎಂದು ಹೇಳಿದ್ದಾರೆ. ಎರಡೂ ಕಡೆಯವರು ಬಾಕಿ ಉಳಿದಿರುವ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಉದ್ದಕ್ಕೂ ತಪ್ಪು ತಿಳುವಳಿಕೆಗಳು ಮತ್ತು ತಪ್ಪು ಲೆಕ್ಕಾಚಾರಗಳನ್ನು ನಿವಾರಿಸಲು ಅಸ್ತಿತ್ವದಲ್ಲಿರುವ ರಾಜತಾಂತ್ರಿಕ ಮತ್ತು ಮಿಲಿಟರಿ ಕಾರ್ಯವಿಧಾನಗಳನ್ನು ಬಳಸುತ್ತಿದ್ದಾರೆ. ಉತ್ತಮ ಗಡಿ ನಿರ್ವಹಣೆಗಾಗಿ, ನಿರ್ದಿಷ್ಟ ಪ್ರದೇಶಗಳಲ್ಲಿ ಕುರಿತ ತಮ್ಮ ತಿಳುವಳಿಕೆಯನ್ನು ಸುಧಾರಿಸಿಕೊಳ್ಳುವ ಮಾರ್ಗಗಳ ಬಗ್ಗೆ ಚರ್ಚಿಸಲು ಎರಡೂ ಕಡೆಯವರು ಒಪ್ಪಿಕೊಂಡಿದ್ದಾರೆ ಎಂದು ಜೈಸ್ವಾಲ್ ಮಾಹಿತಿ ನೀಡಿದ್ದಾರೆ.

• ಉದಯವಾಹಿನಿ, ದೆಹಲಿ

ಭಾರತ ಮತ್ತು ಚೀನಾ ಗಡಿಯಲ್ಲಿ ಉಭಯ ದೇಶಗಳ ಸೇನೆಗಳ ನಡುವಿನ ಮುಖಾಮುಖಿ ಘಟನೆಗಳು ಅರುಣಾಚಲ ಪ್ರದೇಶದ ಹಲವು ಭಾಗಗಳಲ್ಲಿ ಈಗಲೂ ಮುಂದುವರಿದಿವೆ ಎಂದು ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್ ಮಹಾನಿರ್ದೇಶಕ ಶತ್ರುಜೀತ್ ಕಪೂರ್ ಹೇಳಿದ್ದಾರೆ.ರಾಜಸ್ಥಾನದ ಅಲ್ವಾರ್‌ನಲ್ಲಿ 'ಹಿಮವೀರ್ ಸಮ್ಮಾನ್ ಸಮಾರೋಹ'ದಲ್ಲಿ ಯೋಧರು ಮತ್ತು ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಚೀನಾ ಸೈನಿಕರೊಂದಿಗಿನ ಇಂತಹ ಸಂಘರ್ಷದ ಸನ್ನಿವೇಶಗಳಲ್ಲಿ ಐಟಿಬಿಪಿಯ ನೂತನ ಶೌರ್ಯ ಪ್ಲಟೂನ್‌ಗಳು ಅಸಾಧಾರಣ ಕಾರ್ಯಾಚರಣೆ ನಡೆಸಿವೆ ಎಂದು ಶ್ಲಾಘಿಸಿದರು. ಕಳೆದ ತಿಂಗಳು ನವದೆಹಲಿಯಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಗೆ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಆಗಮಿಸಿದ್ದ ಸಂದರ್ಭದಲ್ಲೂ ಅರುಣಾಚಲ ಪ್ರದೇಶದ ಗಡಿಯಲ್ಲಿ ಇಂತಹ ಮುಖಾಮುಖಿ ನಡೆದಿತ್ತು ಎಂಬುದನ್ನು ಐಟಿಬಿಪಿ ಮುಖ್ಯಸ್ಥರ ಹೇಳಿಕೆ ಇದೇ ಮೊದಲ ಬಾರಿಗೆ ದೃಢಪಡಿಸಿದೆ. 2020ರಲ್ಲಿ 20 ಮಂದಿ ಭಾರತೀಯ ಸೈನಿಕರ ಹುತಾತ್ಮತೆಗೆ ಕಾರಣವಾಗಿದ್ದ ಗಲ್ವಾನ್ ಕಣಿವೆಯಂತಹ ಸಂಘರ್ಷದ ಸನ್ನಿವೇಶಗಳು ಮರುಕಳಿಸದಂತೆ ತಡೆಯಲು ಐಟಿಬಿಪಿಯ ತರಬೇತಿ ವಿಭಾಗವು ಯೋಧರಿಗೆ ಸ್ಟ್ರೈಕ್ ಎಂಬ ಹೊಸ ಯುದ್ಧತಂತ್ರದ ಕೋರ್ಸ್ ರೂಪಿಸಿದೆ. ಗಡಿ ಮುಂಚೂಣಿಯಲ್ಲಿ ಎದುರಾಗುವ ಸವಾಲುಗಳನ್ನು ಹೊಸ ತಂತ್ರಜ್ಞಾನ ಹಾಗೂ ಸಮರ ಕಲೆಗಳ ಮೂಲಕ ಹಿಮ್ಮೆಟ್ಟಿಸಲು ಈ ತರಬೇತಿ ನೀಡಲಾಗುತ್ತಿದೆ ಎಂದು ಕಪೂರ್ ವಿವರಿಸಿದರು. ಸಾಂಪ್ರದಾಯಿಕ ಯುದ್ಧ ಮಾರ್ಗಗಳ ಮೂಲಕ ಚೀನಾದ 'ಪಿಎಲ್‌ಎ' ಪಡೆಯನ್ನು ಎದುರಿಸುವುದು ಕಷ್ಟಕರ, ಏಕೆಂದರೆ ಅವರು ತಂತ್ರಜ್ಞಾನ ಮತ್ತು ಆಧುನೀಕರಣದಲ್ಲಿ ಭಾರೀ ಹೂಡಿಕೆ ಮಾಡಿದ್ದಾರೆ.

ಆದರೆ ಡ್ರೋನ್ ತಂತ್ರಜ್ಞಾನದಲ್ಲಿ ಚಿಕ್ಕ ದೇಶಗಳೂ ಬಲಿಷ್ಠ ರಾಷ್ಟ್ರಗಳಿಗೆ ಪ್ರಬಲ ಸವಾಲೊಡ್ಡಬಲ್ಲವು ಎಂದು ಅವರು ಉಕ್ರೇನ್‌ರಷ್ಯಾ ಯುದ್ಧದ ಉದಾಹರಣೆ ನೀಡಿದರು. ಗಡಿ ಕಾಯುವ ಪ್ರತಿಯೊಂದು ಬೆಟಾಲಿಯನ್‌ಗೂ ಒಂದೊಂದು 'ಡ್ರೋನ್ ಪ್ಲಟೂನ್' ನಿಯೋಜಿಸಲು ನಿರ್ಧರಿಸಲಾಗಿದೆ. ಡ್ರೋನ್‌ಗಳ ಸ್ವದೇಶಿ ತಯಾರಿಕೆ ಹಾಗೂ ಪೈಲಟ್‌ಗಳಿಗೆ ತರಬೇತಿ ನೀಡುವ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಡ್ರೋನ್ ಹಾಗೂ ಆಂಟಿ-ಡ್ರೋನ್ ವ್ಯವಸ್ಥೆಗಳ ಖರೀದಿಗಾಗಿ ಕೇಂದ್ರ ಗೃಹ ಸಚಿವಾಲಯವು 3,000 ಕೋಟಿಗೂ ಅಧಿಕ ಅನುದಾನಕ್ಕೆ ತಾತ್ವಿಕ ಅನುಮೋದನೆ ನೀಡಿದ್ದು, 2030ರ ವೇಳೆಗೆ ಈ ಹಣ ಸಂಪೂರ್ಣವಾಗಿ ಬಳಕೆಯಾಗಲಿದೆ.

ಅರುಣಾಚಲ ಪ್ರದೇಶದಲ್ಲಿ ಮುಂದುವರಿದ ಮುಖಾಮುಖಿ

ರಾಜಸ್ಥಾನದ ಅಲ್ವಾರ್‌ನಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಐಟಿಬಿಪಿ ಸಿಬ್ಬಂದಿಯನ್ನು ಉದ್ದೇಶಿಸಿ ಮಾತನಾಡಿದ್ದ ಶತ್ರುಜೀತ್ ಕಪೂರ್, ಅರುಣಾಚಲ ಪ್ರದೇಶದ ಹಲವು ಸ್ಥಳಗಳಲ್ಲಿ ಇತ್ತೀಚೆಗೆ ಮುಖಾಮುಖಿ ಸಂಭವಿಸಿದ್ದು, ಅದು ಇನ್ನೂ ಮುಂದುವರಿದಿದೆ ಎಂದು ಹೇಳಿದ್ದರು ಎನ್ನಲಾಗಿದೆ. ''ಇತ್ತೀಚಿನ ದಿನಗಳಲ್ಲಿ ಅರುಣಾಚಲ ಪ್ರದೇಶದ ವಿವಿಧ ಸ್ಥಳಗಳಲ್ಲಿ ಮುಖಾಮುಖಿ ಪರಿಸ್ಥಿತಿ ನಿರ್ಮಾಣವಾಗಿದ್ದು, ಅದು ಇನ್ನೂ ಮುಂದುವರಿದಿದೆ. ಅಲ್ಲಿ ನಮ್ಮ ಶೌರ್ಯ ಕಮಾಂಡೊ ತಂಡಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿವೆ'' ಎಂದು ಕಪೂರ್ ಹೇಳಿದ್ದಾಗಿ ವರದಿಯಾಗಿದೆ. ಐಟಿಬಿಪಿಯ ವಿಶೇಷ ಶೌರ್ಯ ತುಕಡಿಯ ಕಾರ್ಯಕ್ಷಮತೆಯನ್ನು ಅವರು ಇದೇ ವೇಳೆ ಶ್ಲಾಘಿಸಿದ್ದರು.

ಕಪೂರ್ ಅವರ ಈ ಹೇಳಿಕೆ ರಾಜಕೀಯ ವಲಯದಲ್ಲಿ ವಿವಾದಕ್ಕೆ ಕಾರಣವಾಗಿದ್ದು, ಭಾರತ-ಚೀನಾ ಗಡಿಯಲ್ಲಿನ ಪರಿಸ್ಥಿತಿಯ ಬಗ್ಗೆ ಮತ್ತೆ ಚರ್ಚೆ ಆರಂಭವಾಗಿದೆ. ಆದರೆ, ಮುಖಾಮುಖಿ ನಡೆದಿರುವ ಸ್ಥಳಗಳು, ಸಂಘರ್ಷದ ಸ್ವರೂಪ ಅಥವಾ ಪರಿಸ್ಥಿತಿ ಈಗಲೂ ಮುಂದುವರಿದಿದೆಯೇ ಎಂಬುದರ ಕುರಿತು ವಿದೇಶಾಂಗ ಸಚಿವಾಲಯ ಹೆಚ್ಚಿನ ವಿವರಗಳನ್ನು ನೀಡಿಲ್ಲ.

ಸಂಬಂಧ ಸುಧಾರಣೆಗೆ ಉಭಯ ದೇಶಗಳ ಪ್ರಯತ್ನ

ಪೂರ್ವ ಲಡಾಖ್‌ನ ಉಳಿದಿದ್ದ ಸಂಘರ್ಷದ ಸ್ಥಳಗಳಿಂದ ಸೇನೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಕುರಿತು 2024ರ ಅಕ್ಟೋಬರ್‌ನಲ್ಲಿ ಭಾರತ ಮತ್ತು ಚೀನಾ ಒಪ್ಪಂದಕ್ಕೆ ಬಂದಿದ್ದವು. ಇದರಿಂದ ಉಭಯ ದೇಶಗಳ ನಡುವಿನ ಸಂಬಂಧವನ್ನು ತೀವ್ರವಾಗಿ ಹದಗೆಡಿಸಿದ್ದ ದೀರ್ಘಕಾಲದ ಸೇನಾ ಬಿಕ್ಕಟ್ಟಿಗೆ ತೆರೆ ಎಳೆಯುವ ಪ್ರಯತ್ನ ನಡೆದಿತ್ತು. ಅದಾದ ಬಳಿಕ ಉಭಯ ದೇಶಗಳು ಪರಸ್ಪರ ವಿಶ್ವಾಸವನ್ನು ಮರುಸ್ಥಾಪಿಸಲು ಮತ್ತು ಸಂವಹನವನ್ನು ಸುಧಾರಿಸಲು ರಾಜತಾಂತ್ರಿಕ ಮಾತುಕತೆಗಳನ್ನು ಮುಂದುವರಿಸಿವೆ.

ಚೀನಾದೊಂದಿಗಿನ ಒಟ್ಟಾರೆ ಸಂಬಂಧದಲ್ಲಿ ಪ್ರಗತಿ ಸಾಧಿಸಲು ಗಡಿಯಲ್ಲಿ ಶಾಂತಿ ಮತ್ತು ನೆಮ್ಮದಿ ಕಾಪಾಡುವುದು ಅಗತ್ಯ ಎಂಬ ನಿಲುವನ್ನು ಭಾರತ ನಿರಂತರವಾಗಿ ಪ್ರತಿಪಾದಿಸುತ್ತಿದೆ.ಕಳೆದ ವರ್ಷದ ಆಗಸ್ಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಚೀನಾದ ಟಿಯಾಂಜಿನ್‌ಗೆ ಭೇಟಿ ನೀಡಿ, ವಾರ್ಷಿಕ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದರು. ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ವಿಸ್ತೃತ ಮಾತುಕತೆ ನಡೆಸಿದ್ದರು.

ಕಸದ ಟೆಂಡರ್‌ನಲ್ಲಿ ಗೋಲ್ಮಾಲ್, ಅಸ್ತಿತ್ವದಲ್ಲೇ ಇಲ್ಲದ ಕಂಪನಿಗೆ 133 ಕೋಟಿ ಟೆಂಡರ್: ಆರ್.ಅಶೋಕ್ ಬಾಂಬ್

ಕಸದ ಟೆಂಡರ್ ಹಿಂದೆ ಬೆಂಗಳೂರಿನ ಮಂತ್ರಿ ಕೈವಾಡ .. ? 3 ಕೋಟಿ ಟರ್ನ್ ಓವರ್ ಮಾಡೋ ಮುನಿಯಪ್ಪ ಕಂಪನಿಗೆ ಯಾಕೆ ಟೆಂಡರ್?

• ಉದಯವಾಹಿನಿ, ಬೆಂಗಳೂರು

ಸರ್ಕಾರ ಬೆಂಗಳೂರಿನ ಕಸದ ಟೆಂಡರ್ ನಲ್ಲಿ ದೊಡ್ಡ ಅಕ್ರಮ ಮಾಡಿದೆ. ಅಸ್ತಿತ್ವದಲ್ಲೇ ಇಲ್ಲದ ಕಂಪನಿಗೆ ನಿಯಮ ಮೀರಿ ಟೆಂಡರ್ ಕೊಡಲಾಗಿದ್ದು, ಇದರ ಹಿಂದೆ ಬೆಂಗಳೂರಿನ ಮಂತ್ರಿ ಕೈವಾಡ ಇದೆ ಅಂತ ವಿಪಕ್ಷ ನಾಯಕ ಅಶೋಕ್ ದಾಖಲಾತಿ ಸಮೇತ ಗಂಭೀರ ಆರೋಪ ಮಾಡಿದರು.

ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಅದರಲ್ಲೂ ರಿಯಲ್ ಎಸ್ಟೇಟ್ ಸಿಎಂ ಡಿಕೆ ಶಿವಕುಮಾರ್ ಬಂದ ಮೇಲೆ ಅಕ್ರಮಗಳ ಮೇಲೆ ಅಕ್ರಮ ಆಗ್ತಿದೆ. ಕಸದಿಂದ ರಸ ಮಾಡೋಕೆ ಕಾಂಗ್ರೆಸ್ ಹೊರಟಿದೆ. ಕಸದಲ್ಲಿ ಅಕ್ರಮ ಮಾಡೋಕೆ ಮುಂದಾಗಿದೆ ಅಂತ ಆರೋಪ ಮಾಡಿದ್ರು. ಕೃಷ್ಣಭೈರೇಗೌಡ ಹೊಸದಾಗಿ ಮಂತ್ರಿ ಆದಾಗ ಏನೇನೋ ಮಾತಾಡಿದ್ರು. ಫ್ರೀಡಂ ಫರ್ಮ್ ವೇಸ್ಟ್ ಅಂತ ತೆಗೆದು ಹಾಕಿ ಈಗ ವೇಸ್ಟ್ ಇಂದ ಮನಿ. ಹೌಟು ಮೇಕ್ ಮನಿ ಕಸದಿಂದ ಅಂತ ಮಾಡಿದ್ದಾರೆ. 133 ಕೋಟಿ ಟೆಂಡರ್ ಮುನಿಯಪ್ಪ ಎಂಟರ್ ಪ್ರೈಸಸ್ ಅವರಿಗೆ ಕೊಡಲಾಗಿದೆ. ಆ ಕಂಪನಿಯೇ ಬೇನಾಮಿ. ಯಾವುದು ಇಲ್ಲ ಇಂತಹವರಿಗೆ ಟೆಂಡರ್ ಕೊಡಲಾಗಿದೆ ಅಂತ ಆರೋಪ ಮಾಡಿದ್ರು. 2018 ರಲ್ಲಿ ಸರ್ಕಾರ ಒಂದು ರೂಲ್ ಮಾಡುತ್ತದೆ. 10 ಕೋಟಿ ವ್ಯವಹಾರ ಮಾಡೋನು ಟೆಂಡರ್ ನಲ್ಲಿ ಭಾಗವಹಿಸಬೇಕು ಅಂತ ಮಾಡ್ತಾರೆ. ಇಲ್ಲಿ ಮ್ಯಾಜಿಕ್ ಮಾಡಿದ್ದಾರೆ. ಹೆಚ್ಚುವರಿ ಭದ್ರತಾ ಠೇವಣಿ ಆ ಕಂಪನಿಯಿಂದ ಪಡೆದಿಲ್ಲ. ಹಣಕಾಸು ಇಲಾಖೆ ಹೀಗೆ ಟೆಂಡರ್ ಮಾಡಬಾರದು ಅಂತ ಎಚ್ಚರಿಕೆ ಕೊಟ್ಟ ಮೇಲೂ ಒಪ್ಪಿಗೆ ಪತ್ರ ಸರ್ಕಾರ ಕೊಟ್ಟಿದೆ. ಪ್ಯಾಕೇಜ್ 2 ಮತ್ತು 5ನಲ್ಲಿ ಹೆಚ್ಚುವರಿ ಭದ್ರತಾ

ಠೇವಣಿ ಕೊಡದೇ ಮುನಿಯಪ್ಪ ಎಂಟರ್ಪ್ರೈಸ್ ಗೆ ಕಾರ್ಯಾದೇಶದ ಅನುಮತಿ ಕೊಡಲಾಗಿದೆ ಅಂತ ದಾಖಲಾತಿ ಬಿಡುಗಡೆ ಮಾಡಿದರು. ಪ್ಯಾಕೇಜ್ 2ನಲ್ಲಿ ಸುಮಾರು 6.5 ಕೋಟಿ ಠೇವಣಿ ಕೊಟ್ಟಬೇಕಿತ್ತು. ಪ್ಯಾಕೇಜ್ 5 ರಲ್ಲಿ 5.99 ಕೋಟಿ ಠೇವಣಿ ಕಟ್ಟಿಲ್ಲ. ಒಟ್ಟು 12.99 ಕೋಟಿ ಭದ್ರತಾ ಠೇವಣಿ ಕಟ್ಟಿಲ್ಲ ಆ ಕಂಪನಿ. ನಿಯಮ ಗಾಳಿಗೆ ತೂರಿ ಕಿಕ್‌ಬ್ಯಾಕ್ ಪಡೆಯಲು ಟೆಂಡರ್ ಕೊಡಲಾಗಿದೆ. ಮುನಿಯಪ್ಪ ಎಂಟರ್ ಪ್ರೈಸಸ್‌ನಿಂದ ಕಿಕ್ ಬ್ಯಾಕ್ ಪಡೆಯಲು ನಿಯಮ ಗಾಳಿಗೆ ತೂರಲಾಗಿದೆ. ಮಿಸ್ಟರ್ ಡಿಕೆ ಶಿವಕುಮಾರ್ ಇದು ಅಕ್ರಮದ ಲೈನ್ ಅಂತ ಆರೋಪ ಮಾಡಿದ್ರು. 3 ಕೋಟಿ ಮಾತ್ರ ಅ ಕಂಪನಿ ಟರ್ನ್ ಓವರ್ ಮಾಡಿದೆ. ಟೆಂಡರ್ ಕೊಡಲು 10 ಕೋಟಿ ಇರಬೇಕು ಅಂತ ಸರ್ಕಾರದ ನಿಯಮ ಇದೆ. 3 ಕೋಟಿ ಟರ್ನ್ ಓವರ್ ಮಾಡೋ ಮುನಿಯಪ್ಪ ಕಂಪನಿಗೆ ಯಾಕೆ ಟೆಂಡರ್ ಕೊಟ್ರಿ ಅಂತ ಪ್ರಶ್ನೆ ಮಾಡಿದ್ರು. ಮುನಿಯಪ್ಪ ಕಂಪನಿಗೆ ನೀಡಿರುವ ಟೆಂಡರ್‌ನಲ್ಲಿ ಅರ್ಹತಾ ಷರತ್ತು ಉಲ್ಲಂಘನೆ ಆಗಿದೆ. ಅವನ ಬಳಿ ದುಡ್ಡು ತಗೊಂಡು ಟೆಂಡರ್ ಕೊಡಲಾಗಿದೆ. 40% ಕಮೀಷನ್ ಪಡೆಯಲು ಈ ವಿನಾಯಿತಿ ಅ ಕಂಪನಿಗೆ ಕೊಡಲಾಗಿದೆ ಅಂತ ಅಶೋಕ್ ಗಂಭೀರ ಆರೋಪ ಮಾಡಿದ್ರು. ಜಾಗ ಗುರುತು ಮಾಡದೇ ಕಮೀಷನ್ ಪಡೆಯಲು ತರಾತುರಿಯಲ್ಲಿ ಟೆಂಡರ್ ಕೊಡಲಾಗಿದೆ.

ರಿಯಲ್ ಎಸ್ಟೇಟ್ ಸಿಎಂ ಅವರು ಯಾರಾದ್ರು ಕಾಸು ಕೇಳಿದ್ರೆ ಫೋನ್ ಮಾಡಿ ಅಂದರು. ಸಿಎಂ ಅವರೇ ಡೂಪ್ಲಿಕೇಟ್, ಇದೂವರೆಗೂ ನಂಬರ್ ಕೊಟ್ಟಿಲ್ಲ. ಯಾವ ನಂಬರ್‌ಗೆ ದೂರು ಕೊಡೋದು. ಕಾಸಿಗಾಗಿ ಕಸ ಇದು. ಈ ಸರ್ಕಾರ ಪಾರದರ್ಶಕನಾ ಲೂಟಿ ಮಾಡೋದೇ ಇವರ ಪಾರದರ್ಶಕನಾ ಅಂತ ಪ್ರಶ್ನೆ ಮಾಡಿದ್ರು. ಟೆಂಡರ್ ರದ್ದು ಮಾಡಿ ಅಂತ ನಾಳೆ ಸಿಎಂಗೆ ಪತ್ರ ಬರೆಯುತ್ತೇನೆ. ಸಿಎಂ ಮಾತಿಗೆ ಮೂರು ಕಾಸು ಬೆಲೆ ಕೊಟ್ಟಿಲ್ಲ.

ಇದು ಬೋಗಸ್ ಅಂತ ಸಿಎಂ ಹೇಳಿದ್ದಾರೆ. ತನಿಖೆ ಮಾಡಿ ಅಂತ ಹೇಳಿದ್ರು.ಹೀಗಿದ್ರು ಟೆಂಡರ್ ಕೊಡಲಾಗಿದೆ. ಯಾರು ಒತ್ತಡ ಹಾಕಿದ್ರು ಸಿಎಂ ಹೇಳಲಿ.ಹೈಕಮಾಂಡ್‌ಗೆ ಅವರು ಹತ್ತಿರ ಇರೋ ಮಂತ್ರಿ ಅಂತ ಆರೋಪ ಮಾಡಿದ್ರು.

ಅಶೋಕ್ ಆಗ್ರಹ

ತ್ಯಾಜ್ಯ ವರ್ಗಾವಣೆ ಸ್ಟೇಷನ್ ಗಳ ಎಲ್ಲಾ ಪ್ಯಾಕೇಜ್‌ಗಳನ್ನ ಉನ್ನತ ಮಟ್ಟದ ತನಿಖೆ ಮಾಡಬೇಕು. ಲೋಕಾಯುಕ್ತ ತನಿಖೆಗೆ ಕೊಡಬೇಕು. 21 ಪ್ಯಾಕೇಜ್ ನಲ್ಲೂ ಅಕ್ರಮ ಆಗಿದೆ. ಪ್ಯಾಕೇಜ್ 2 ಮತ್ತು 5 ರ ಕಡತ ಕೂಡಲೇ ಸೀಜ್ ಮಾಡಬೇಕು. ಗುತ್ತಿಗೆದಾರನ ಅರ್ಹತೆ, ಸಾಮರ್ಥ್ಯ, ಅನುಭವ ಇದೆಯಾ ಸರ್ಕಾರ ತಿಳಿಸಬೇಕು. ಇಲ್ಲ ಅಂದರೆ ಕಾಸು ಕೊಟ್ಟವರಿಗೆ ಕೊಟ್ಟಂತೆ ಆಗುತ್ತದೆ. ಕಸ ಹಾಕೋಕೆ ಜಾಗ ಎಲ್ಲಿ ಗುರುತಿಸಿದ್ದೀರಾ? ಮಾಹಿತಿ ಕೊಡಬೇಕು ಅಂತ ಆಗ್ರಹ ಮಾಡಿದ್ರು. ನಿಯಮ ಉಲ್ಲಂಘನೆ ಮಾಡಲಾಗಿದೆ. ಇದರ ಹಿಂದೆ ಒಬ್ಬ ಮಂತ್ರಿ ಕೈವಾಡ ಇದೆ. ಬೆಂಗಳೂರು ಮಂತ್ರಿ ಅವರು. ಯಾರು ಅಂತ ಮುಂದೆ ಹೇಳ್ತೀನಿ ಎಂದರು ಆಕ್ರೋಶ ಹೊರಹಾಕಿದರು.

ಈ ದಿನದ ದರ ಪೆಟ್ರೋಲ್: 111.68 ₹/L | ಡೀಸೆಲ್ : 99.56 ₹/L | ಬಂಗಾರ: ₹14,258/Gram24ct ₹13,070/Gram22ct | ಬೆಳ್ಳಿ: ₹245.00/Gram

ಫೋನ್‌ಪೇ ಮೂಲಕ ವಾಹನ ವಿಮೆ: ಶೇ.90ರವರೆಗೆ ಉಳಿತಾಯ

• ಉದಯವಾಹಿನಿ, ಬೆಂಗಳೂರು

ಹಬ್ಬದ ಸಂದರ್ಭದಲ್ಲಿ ಹೊಸ ಕಾರು ಅಥವಾ ಬೈಕ್ ಖರೀದಿಸುವ ಗ್ರಾಹಕರಿಗೆ ಸುಲಭ, ಪಾರದರ್ಶಕ ಮತ್ತು ಕೈಗೆಟುಕುವ ವಿಮಾ ಆಯ್ಕೆಗಳನ್ನು ಒದಗಿಸಲು ಫೋನ್‌ಪೇ ಅವಕಾಶ ಕಲ್ಪಿಸಿದೆ. ಆಪ್ ಮೂಲಕ ವಿವಿಧ ವಿಮಾ ಕಂಪನಿಗಳ ಪಾಲಿಸಿಗಳನ್ನು ಹೋಲಿಕೆ ಮಾಡಿ, ತಮ್ಮ ಅಗತ್ಯ ಮತ್ತು ಬಜೆಟ್‌ಗೆ ತಕ್ಕ ವಿಮೆ ಆಯ್ಕೆ ಮಾಡಿಕೊಳ್ಳಬಹುದು. ಫೋನ್‌ಪೇನಲ್ಲಿ ಹೊಸ ಬೈಕ್ ವಿಮೆ 2,700ರಿಂದ ಹಾಗೂ ಕಾರು ವಿಮೆ 7,200ರಿಂದ ಆರಂಭವಾಗುತ್ತದೆ. ಗ್ರಾಹಕರು ಕಾರು ವಿಮೆಯಲ್ಲಿ 40,000ರವರೆಗೆ ಮತ್ತು ಬೈಕ್ ವಿಮೆಯಲ್ಲಿ 4,000ರವರೆಗೆ ಉಳಿತಾಯ ಮಾಡಬಹುದು ಎಂದು ಕಂಪನಿ ತಿಳಿಸಿದೆ. ಗರಿಷ್ಠ ಉಳಿತಾಯ ಶೇ.90ರವರೆಗೆ ಇರಬಹುದು. ಝೀರೋ ಡಿಪ್ರಿಸಿಯೇಶನ್, ಎಂಜಿನ್ ಪ್ರೊಟೆಕ್ಟ್ ಮತ್ತು ಕನ್ಸ್ಯೂಮಬಲ್ ಕವರ್‌ನಂತಹ ಹೆಚ್ಚುವರಿ ಸೌಲಭ್ಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ವಿಮೆಯ ಮೊತ್ತವನ್ನು ನಿರ್ಧರಿಸುವ ಐಡಿವಿ ಬದಲಾಯಿಸುವ ಅವಕಾಶವೂ ಇದೆ. ಬಹು-ವರ್ಷದ ವಿಮಾ ಯೋಜನೆಗಳ ಮೂಲಕ ನವೀಕರಣದ ಜಂಜಾಟವನ್ನೂ ಕಡಿಮೆ ಮಾಡಬಹುದು.ಆನ್‌ಲೈನ್‌ನಲ್ಲಿ ವಿಮೆ ಖರೀದಿಸುವುದರಿಂದ ವಾಹನ ನೋಂದಣಿಗೆ ತೊಂದರೆಯಾಗುವುದಿಲ್ಲ.

ಭಜನೆ - ಪ್ರವಚನ - ಸಂಕೀರ್ತನ

• ಉದಯವಾಹಿನಿ, ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಸರಸ್ವತಿನಗರದ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಅಕ್ಟೋಬರ್ 27 ರಿಂದ 30ರ ವರೆಗೆ ಜರುಗುವ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಈ ರೀತಿ ಇವೆ .

ಭಜನಾ ಕಾರ್ಯಕ್ರಮ : (ಪ್ರತಿದಿನ ಸಂಜೆ 6 ರಿಂದ 7). ಅಕ್ಟೋಬರ್ 27-ವಿಜಯನಗರದ ಶ್ರೀ ಶ್ರೀಪಾದರಾಜ ಭಜನಾ ಮಂಡಳಿ, ಅಕ್ಟೋಬರ್ 28-ಪ್ರಶಾಂತನಗರದ ಶ್ರೀ ಗುರು ರಾಘವೇಂದ್ರ ಭಜನಾ ಮಂಡಳಿ ಮತ್ತು ಅಕ್ಟೋಬರ್ 29-ವಿಜಯನಗರದ ಶ್ರೀಕಾಂತ ಭಜನಾ ಮಂಡಳಿಯ ಸದಸ್ಯರುಗಳಿಂದ ಭಜನಾಮೃತ ಜರುಗಲಿದೆ.

ಪ್ರವಚನ ಕಾರ್ಯಕ್ರಮ : ಅಕ್ಟೋಬರ್ 27 ರಿಂದ 29ರ ವರೆಗೆ (ಪ್ರತಿದಿನ ಸಂಜೆ 7 ರಿಂದ 8). ಶ್ರೀ ಹೃಷಿಕೇಶಾಚಾರ್ಯರು ಶ್ರೀಮದ್ಭಾಗವತ ಧಾರ್ಮಿಕ ಪ್ರವಚನ ನಡೆಸಿಕೊಡಲಿದ್ದಾರೆ. **ಗಾಯನ ಕಾರ್ಯಕ್ರಮ :** ಅಕ್ಟೋಬರ್ 30, ಶುಕ್ರವಾರ ಸಂಜೆ 6-30ಕ್ಕೆ ಹರಿನಾಮ ಸಂಕೀರ್ತನೆ. ಶ್ರೀಮತಿ ಅನುರಾಧ ಎಸ್. ಪಾಟೀಲ್ ಅವರ ಗಾಯನಕ್ಕೆ ಹಾರ್ಮೋನಿಯಂ ವಾದನದಲ್ಲಿ ಕು|| ಸೃಷ್ಟಿ ದೇಸಾಯಿ ಮತ್ತು ತಬಲಾ ವಾದನದಲ್ಲಿ ಶ್ರೀ ಋತುಪರ್ಣ ದೇಸಾಯಿ ಸಹಕರಿಸಲಿದ್ದಾರೆ ಎಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮ ನಡೆಯುವ ಸ್ಥಳ : ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ, ಗೋವಿಂದರಾಜನಗರ ಪೋಲೀಸ್ ಸ್ಟೇಷನ್ ಹತ್ತಿರ, ಸರಸ್ವತಿನಗರ, ಬೆಂಗಳೂರು-560040

ಉದಯವಾಹಿನಿ ಚಿತ್ರ

1.8 ಲಕ್ಷ ಸ್ಥಳೀಯ ಮರಗಳ ನೆಡಲು ಅರಣ್ಯ ಇಲಾಖೆ ಸಿದ್ಧತೆ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ದೀರ್ಘಕಾಲದ ಮಳೆ ಕೊರತೆ, ಕುಸಿಯುತ್ತಿರುವ ಅಂತರ್ಜಲ ಮಟ್ಟ ಹಾಗೂ ಹೆಚ್ಚುತ್ತಿರುವ ತಾಪಮಾನದಿಂದಾಗಿ ಜಲಮೂಲಗಳ ಸಂರಕ್ಷಣೆಯ ಹಿನ್ನೆಲ್ಲೆ, ನಂದಿಬೆಟ್ಟದ ಜಲಾನಯನ ಪ್ರದೇಶವನ್ನು ಪುನರುಜ್ಜೀವನಗೊಳಿಸಲು ಅರಣ್ಯ ಇಲಾಖೆ ಮುಂದಾಗಿದೆ. ಅರಣ್ಯ ಇಲಾಖೆ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಜಲಾನಯನಕ್ಕಾಗಿ ಅರಣ್ಯಗಳು ನಂದಿಬೆಟ್ಟ ಯೋಜನೆ'ಯನ್ನು ಘೋಷಿಸಲಾಗಿದೆ.

ಈ ಯೋಜನೆಯಡಿ ಮಣ್ಣಿನ ಗುಣಮಟ್ಟ ಸುಧಾರಿಸುವುದು, ಜೀವವೈವಿಧ್ಯವನ್ನು ಪುನಃಸ್ಥಾಪಿಸುವುದು, ಜಲಾನಯನ ಪ್ರದೇಶವನ್ನು ಸಂರಕ್ಷಿಸುವುದು ಹಾಗೂ ಸ್ಥಳೀಯ ಸಮುದಾಯಗಳಿಗೆ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ.

ಜಲಾನಯನ ಪ್ರದೇಶ ಮತ್ತು ಅದರ ಜಲಮೂಲಗಳನ್ನು ರಕ್ಷಿಸಿ ಸಂರಕ್ಷಿಸುವುದು, ಮಣ್ಣಿನ ಗುಣಮಟ್ಟ ಸುಧಾರಿಸುವುದು, ಜೀವವೈವಿಧ್ಯವನ್ನು ಪುನಃಸ್ಥಾಪಿಸುವುದು ,ಸ್ಥಳೀಯ ಸಮುದಾಯಗಳಿಗೆ ಜೀವನೋಪಾಯ ಕಲ್ಪಿಸುವ ಉದ್ದೇಶದೊಂದಿಗೆ ಕೈಗೊಳ್ಳಲಾಗುತ್ತಿರುವ ಮೊದಲ ಯೋಜನೆ ಇದಾಗಿದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ ತಿಳಿಸಿದ್ದಾರೆ.

ಪಥಸಂಚಲನಕ್ಕೆ ಆರ್‌ಎಸ್‌ಎಸ್ ಸಜ್ಜು: ಕೆಲವೆಡೆ ಷರತ್ತುಬದ್ಧ ಅನುಮತಿ..!

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ವಿಜಯದಶಮಿ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪಥಸಂಚಲನ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳ ಆಯೋಜನೆಗೆ ಸಿದ್ಧತೆಗಳು ಚುರುಕುಗೊಂಡಿವೆ.

ಕಲಬುರಗಿ, ರಾಮನಗರ ಮತ್ತು ಹುಬ್ಬಳ್ಳಿಯಲ್ಲಿ ಪಥಸಂಚಲನಕ್ಕೆ ಷರತ್ತುಬದ್ಧ ಅನುಮತಿ ದೊರೆತಿದ್ದು, ಕೋಲಾರ ಮತ್ತು ಮೈಸೂರಿನಲ್ಲಿಯೂ ಕಾರ್ಯಕ್ರಮಗಳಿಗಾಗಿ ಸಿದ್ಧತೆ ನಡೆಯುತ್ತಿದೆ. ಆದರೆ, ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಪಥಸಂಚಲನಕ್ಕೆ ಇನ್ನೂ ಅನುಮತಿ ದೊರೆತಿಲ್ಲ ಎಂದು ತಿಳಿದುಬಂದಿದೆ. ಕಲಬುರಗಿಯಲ್ಲಿ ನಾಳೆ ಮಧ್ಯಾಹ್ನ 3.30ಕ್ಕೆ ಆರ್‌ಎಸ್‌ಎಸ್ ಪಥಸಂಚಲನ ಆರಂಭವಾಗಲಿದ್ದು, ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಶಾಲೂ ಅವರು ಷರತ್ತುಬದ್ಧ ಅನುಮತಿ ನೀಡಿದ್ದಾರೆ.

ಗೃಹ ಇಲಾಖೆಯ ಫಾರ್ಮ್ 1 ಮತ್ತು 2 ಅನ್ನು ಭರ್ತಿ ಮಾಡಿ ಸಲ್ಲಿಸಿದ ಹಿನ್ನೆಲೆಯಲ್ಲಿ ಅನುಮತಿ ನೀಡಲಾಗಿದೆ ಎಂದು ತಿಳಿದುಬಂದಿದೆ.

ಪಥಸಂಚಲನವು ನಿಗದಿತ ಮಾರ್ಗದಲ್ಲೇ ಸಾಗಬೇಕು ಹಾಗೂ ಪ್ರಚೋದನಕಾರಿ ಭಾಷಣಗಳಿಗೆ ಅವಕಾಶವಿಲ್ಲ ಎಂದು ಪೊಲೀಸರು ಷರತ್ತು ವಿಧಿಸಿದ್ದು, ನಗರದ ನಗರೇಶ್ವರ ಶಾಲೆಯಿಂದ ಆರಂಭವಾಗುವ ಪಥಸಂಚಲನ ಶರಣಬಸವೇಶ್ವರ ಜಾತ್ರಾ ಮೈದಾನದಲ್ಲಿ ಮುಕ್ತಾಯಗೊಳ್ಳಲಿದೆ.

ರಾಮನಗರದಲ್ಲಿಯೂ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಪೊಲೀಸ್ ಇಲಾಖೆ ಅನುಮತಿ ನೀಡಿದೆ. ನಾಳೆ ಬೆಳಿಗ್ಗೆ 9.30ಕ್ಕೆ ಸಂಘದ ಕಚೇರಿಯಿಂದ ಆರಂಭವಾಗುವ ಪಥಸಂಚಲನವು ಅಗ್ರಹಾರದವರೆಗೆ ಸುಮಾರು ಎರಡು ಕಿಲೋಮೀಟರ್ ಸಾಗಲಿದೆ.

ವಾಣಿ ವಿಲಾಸ ಆಸ್ಪತ್ರೆ ಸಿಬ್ಬಂದಿ ನಿರ್ಲಕ್ಷ್ಯದ ವಿರುದ್ಧ ತೀವ್ರ ಆಕ್ರೋಶ..!

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 57 ದಿನಗಳ ಹೆಣ್ಣು ಮಗುವಿನ ಕಾಲ್ಬೆರಳುಗಳನ್ನು ಕತ್ತರಿಸಲಾಗಿದ್ದು, ಈ ಘಟನೆಗೆ ವೈದ್ಯರ ಮತ್ತು ಸಿಬ್ಬಂದಿಯ ಬೇಜವಾಬ್ದಾರಿತನವೇ ಕಾರಣ ಎಂದು ಪೋಷಕರು ಗಂಭೀರ ಆರೋಪ ಮಾಡಿದ್ದಾರೆ.

ಮಗುವಿನ ಬಲಗಾಲು ನೀಲಿ ಬಣ್ಣಕ್ಕೆ ತಿರುಗುತ್ತಿರುವ ಬಗ್ಗೆ ಹಲವು ಬಾರಿ ತಿಳಿಸಿದರೂ ಸಿಬ್ಬಂದಿ ತಕ್ಷಣ ಸ್ಪಂದಿಸಲಿಲ್ಲ ಎಂದು ಅವರು ದೂರಿದ್ದಾರೆ. ಆದರೆ, ಮಗು ತೀವ್ರ ಸೋಂಕಿನ ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗಿತ್ತು. ಸೋಂಕು ಮತ್ತಷ್ಟು ಹರಡುವುದನ್ನು ತಡೆಯಲು ಕಾಲ್ಬೆರಳುಗಳನ್ನು ಕತ್ತರಿಸುವುದು ಅನಿವಾರ್ಯವಾಗಿತ್ತು ಎಂದು ಆಸ್ಪತ್ರೆಯ ನಿರ್ದೇಶಕರು ಸ್ಪಷ್ಟಪಡಿಸಿದ್ದಾರೆ. ಮಗುವಿನ ತಂದೆ ಅಮರನಾಥ್ ಅವರು ಮಾತನಾಡಿ, ಸೆಪ್ಟೆಂಬರ್ 15ರಂದು ಮಗುವಿಗೆ ಜ್ವರ ಕಾಣಿಸಿಕೊಂಡಿದ್ದಲ್ಲದೆ, ಪ್ರಜ್ಞೆ ತಪ್ಪಿದ ಲಕ್ಷಣಗಳೂ ಕಂಡುಬಂದಿದ್ದವು. ಮಗುವನ್ನು ಆಸ್ಪತ್ರೆಗೆ ಕರೆತರಲಾಗಿತ್ತು. ಮಗುವಿನ ಸ್ಥಿತಿ ಹದಗೆಡುತ್ತಿದ್ದರೂ ಬಲಗಾಲು ನೀಲಿ ಬಣ್ಣಕ್ಕೆ ತಿರುಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದಾಗಲೆಲ್ಲ ಶಸ್ತ್ರಚಿಕಿತ್ಸಕರಿಗಾಗಿ ಕಾಯುವಂತೆ ಸಿಬ್ಬಂದಿ ಹೇಳುತ್ತಿದ್ದರು.

ಹೃದಯಾಘಾತದಿಂದ ವಕೀಲ ಸಾವು ಪ್ರಕರಣಕ್ಕೆ ಬಿಗ್ ಟ್ವಿಸ್ಟ್

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರಿನ ನಾಗರಬಾವಿ ರಿಂಗ್ ರೋಡ್ ನಲ್ಲಿ ಕ್ಷುಲ್ಲಕ ಕಾರಣಕ್ಕೆ ಆಟೋ ಚಾಲಕ ಹಾಗೂ ವಕೀಲರೊಬ್ಬರ ನಡುವೆ ಆರಂಭವಾದ ಜಗಳ ಕೊಲೆಯಲ್ಲಿ ಅಂತ್ಯವಾದ ಆಘಾತಕಾರಿ ಘಟನೆ ನಡೆದಿದೆ.

ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀರಾಮ್ ಎಂಬುವವರೇ ಕೊಲೆಯಾದ ದುರದೃಷ್ಟಕರ ವ್ಯಕ್ತಿ. ಆರಂಭದಲ್ಲಿ ಶ್ರೀರಾಮ್ ಅವರ ಸಾವು ಅಸಹಜ ಸಾವು ಹಾಗೂ ಹೃದಯಾಘಾತದಿಂದ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿತ್ತು. ಆದರೆ ತನಿಖೆಯಲ್ಲಿ ಇದು ಕೊಲೆ ಎಂಬುದು ಬಹಿರಂಗವಾಗಿದೆ.

ಕಳೆದ ಅಕ್ಟೋಬರ್ 09 ರಂದು ಮಧ್ಯಾಹ್ನ 12 ಗಂಟೆಯ ಸುಮಾರಿಗೆ ನಾಗರಬಾವಿ ರಿಂಗ್ ರೋಡ್ ಬಳಿ ವಕೀಲ ಶ್ರೀರಾಮ್ ಏಕಾಏಕಿ ಅಸ್ವಸ್ಥನಾಗಿ ಬಿದ್ದಿದ್ದರು. ತಕ್ಷಣ ಸ್ಥಳಕ್ಕೆ ಧಾವಿಸಿದ ಹೊಯ್ಸಳ ಪೊಲೀಸರು ಅವರನ್ನು ಹತ್ತಿರದ ಖಾಸಗಿ ಆಸ್ಪತ್ರೆಗೆ ಸೇರಿಸಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಶ್ರೀರಾಮ್ ಮೃತಪಟ್ಟಿದ್ದರು.

ಶ್ರೀರಾಮ್ ಸಾವು ಹೃದಯಾಘಾತದಿಂದ ಸಂಭವಿಸಿರಬಹುದು ಎಂದು ಖಾಸಗಿ ಆಸ್ಪತ್ರೆಯ ವೈದ್ಯರು ಹೇಳಿದ್ದರು. ಹೀಗಾಗಿ ಪೊಲೀಸರು ಆರಂಭದಲ್ಲಿ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದರು. ಆದರೆ, ಮೃತದೇಹದ ಮೇಲಿದ್ದ ಗಾಯದ ಗುರುತುಗಳನ್ನು ಗಮನಿಸಿದ ಕುಟುಂಬಸ್ಥರಿಗೆ ಅನುಮಾನ ವ್ಯಕ್ತವಾಗಿ ಪರಿಶೀಲಿಸಿದಾಗ, ಘಟನೆ ನಡೆದ ದಿನ ಶ್ರೀರಾಮ್ ಜೊತೆಗೆ ಆಟೋ ಚಾಲಕನೊಬ್ಬ ಗಲಾಟೆ ಮಾಡಿದ್ದ ವಿಚಾರ ಗೊತ್ತಾಗಿದೆ.

ಕ್ರಿಮಿನಲ್ ಸಂಚಿನಲ್ಲಿ ಭಾಗಿಯಾದ ಎಲ್ಲರ ಬಣ್ಣ ಬಯಲಾಗಲಿದೆ

ಈ ಪ್ರಕರಣದ ಮೂಲವನ್ನು ಪತ್ತೆಹಚ್ಚಿ, ಕೆಲವೇ ದಿನಗಳಲ್ಲಿ ಎಲ್ಲವನ್ನೂ ಬಹಿರಂಗಪಡಿಸುತ್ತೇವೆ ಎಂದು ತಿಳಿಸಿ

• ಉದಯವಾಹಿನಿ, ಬೆಂಗಳೂರು

1 ಕ್ರಿಮಿನಲ್ ಸಂಚನ್ನು ರೂಪಿಸಿದ್ದು ಯಾರು?

2 ಕೆಲವೇ ದಿನಗಳಲ್ಲಿ ಎಲ್ಲವನ್ನೂ ಬಹಿರಂಗ

3 2011ಕ್ಕೆ ಸಂಬಂಧಿಸಿದೆ ಎನ್ನಲಾದ ವಿಷಯ

ಸ್ಟಿಂಗ್ ಆಪರೇಷನ್ ಹಿಂದಿನ ಅಕ್ರಮ ಕ್ರಿಮಿನಲ್ ಸಂಚಿನಲ್ಲಿ ಭಾಗಿಯಾಗಿರುವ ಎಲ್ಲರ ಬಣ್ಣ ಬಯಲಾಗಲಿದೆ. ಪ್ರಕರಣದ ತನಿಖೆ ನಡೆಯುತ್ತಿದ್ದು, ಯಾವುದೇ ರಾಜಕೀಯ ಹಸ್ತಕ್ಷೇಪವಿಲ್ಲದೆ ಪಾರದರ್ಶಕವಾಗಿ ತನಿಖೆ ಪೂರ್ಣಗೊಳಿಸಲಾಗುವುದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಶನಿವಾರ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸತ್ಯವನ್ನು ಹೊರತರುವ ಉದ್ದೇಶದಿಂದಲೇ ದೂರು ದಾಖಲಿಸಲಾಗಿದೆ. ಪ್ರಕರಣದ ತನಿಖೆ ನಡೆಸುತ್ತಿರುವ ಅಧಿಕಾರಿಗಳ ಮೇಲೆ ರಾಜ್ಯ ಸರ್ಕಾರಕ್ಕೆ ಸಂಪೂರ್ಣ ವಿಶ್ವಾಸವಿದೆ ಎಂದು ತಿಳಿಸಿದರು.

ಈ ಕ್ರಿಮಿನಲ್ ಸಂಚನ್ನು ರೂಪಿಸಿದ್ದು ಯಾರು? ಎಲ್ಲಿ ಮತ್ತು ಹೇಗೆ ಸಂಚು ರೂಪಿಸಲಾಯಿತು ಸ್ಟಿಂಗ್ ಆಪರೇಷನ್ ನಡೆಸಿದ್ದು ಯಾರು? ಯಾವ ಉದ್ದೇಶಕ್ಕಾಗಿ ಅದನ್ನು ನಡೆಸಲಾಯಿತು ಹಲವು ವರ್ಷಗಳ ಬಳಿಕ ಆ ವಿಡಿಯೊ ಬೇರೊಬ್ಬರ ಕೈಗೆ ಹೇಗೆ ತಲುಪಿತು. ಇದ್ದಕ್ಕಿದ್ದಂತೆ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಿದ್ದು ಹೇಗೆ? ಅದಕ್ಕೆ ಪ್ರಚಾರ ದೊರೆತಿದ್ದು ಹೇಗೆ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಗಲಿದೆ. ಇದರಲ್ಲಿ ಭಾಗಿಯಾದ ಪ್ರತಿಯೊಬ್ಬರ ಬಣ್ಣ ಬಯಲಾಗುವುದು ಕೇವಲ ಸಮಯದ ಪ್ರಶ್ನೆಯಷ್ಟೇ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.ಈ ಪ್ರಕರಣದ ಮೂಲವನ್ನು ಪತ್ತೆಹಚ್ಚಿ, ಕೆಲವೇ ದಿನಗಳಲ್ಲಿ ಎಲ್ಲವನ್ನೂ ಬಹಿರಂಗಪಡಿಸುತ್ತೇವೆ ಎಂದು ತಿಳಿಸಿದರು.

2011ಕ್ಕೆ ಸಂಬಂಧಿಸಿದೆ ಎನ್ನಲಾದ ವಿಷಯವನ್ನು 2023ರಲ್ಲಿ ರಹಸ್ಯವಾಗಿ ಚಿತ್ರೀಕರಿಸಲಾಗಿದೆ ಎಂಬ ಆರೋಪವಿದ್ದು, ಅದು 2026ರಲ್ಲಿ ಬಹಿರಂಗಗೊಂಡಿದೆ. ಈ ಎಲ್ಲಾ ಘಟನೆಗಳ ಹಿಂದಿನ ನಿಖರವಾದ ಕಾಲಾನುಕ್ರಮವನ್ನು ತನಿಖೆಯಿಂದ ಪತ್ತೆಹಚ್ಚಲಾಗುವುದು ಎಂದು ಹೇಳಿದರು.

ಉದಯವಾಹಿನಿ ಚಿತ್ರ

> **ಯಾರೇ ಆಗಲಿ ಹಿರಿಯ ಸಂಪುಟ ಸಚಿವರು ಅಥವಾ ಮುಖ್ಯಮಂತ್ರಿಯನ್ನು ಭೇಟಿಯಾಗಲು ಬರುವಾಗ ಕ್ಯಾಮೆರಾ ಅಳವಡಿಸಿರುವ ಕನ್ನಡಕ ಅಥವಾ ಅಂತಹ ಯಾವುದೇ ಸಾಧನಗಳನ್ನು ಧರಿಸಿಕೊಂಡು ಬರುವುದು ನೈತಿಕವಾಗಿ ಸರಿಯಲ್ಲ ಎಂದು ಹೇಳಿದರು.**
> -ಗೃಹ ಸಚಿವ ಪ್ರಿಯಾಂಕ್ ಖರ್ಗೆ

ತನಿಖೆ ಪೂರ್ಣಗೊಳ್ಳುವ ಮೊದಲೇ ಆತುರದ ತೀರ್ಮಾನಗಳಿಗೆ ಬರಬಾರದು. ಕೇವಲ ಪ್ರಚಾರಕ್ಕಾಗಿ ಹೇಳಿಕೆಗಳನ್ನು ನೀಡುವುದನ್ನು ತಪ್ಪಿಸಬೇಕು ಎಂದು ಅವರು ಎಚ್ಚರಿಸಿದರು.

ತನಿಖೆಯನ್ನು ಅತ್ಯಂತ ಪಾರದರ್ಶಕವಾಗಿ ಮತ್ತು ಪ್ರಾಮಾಣಿಕವಾಗಿ ನಡೆಸಲಾಗುವುದು. ಯಾವುದೇ ರಾಜಕೀಯ ಒತ್ತಡ ಅಥವಾ ಹಸ್ತಕ್ಷೇಪವಿಲ್ಲದೆ ಪೊಲೀಸರು ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಅವರು ಸ್ಪಷ್ಟಪಡಿಸಿದರು.

ತನಿಖೆಯ ವೇಳೆ ಹೆಸರು ಕೇಳಿಬಂದಿರುವ ವ್ಯಕ್ತಿಗಳನ್ನು ವಿಚಾರಣೆಗೆ ಕರೆಸಲಾಗಿದ್ದು, ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ. ವಿಚಾರಣೆಯ ವಿವರಗಳನ್ನೂ ದಾಖಲಿಸಲಾಗಿದೆ ಎಂದು ತಿಳಿಸಿದರು. ಸರ್ಕಾರದ ಹಿರಿಯ ಅಧಿಕಾರಿಗಳನ್ನು ಭೇಟಿಯಾಗುವ ಸಂದರ್ಭದಲ್ಲಿ ಸ್ಮಾರ್ಟ್ ಕನ್ನಡಕಗಳನ್ನು ಬಳಸಿ ರಹಸ್ಯವಾಗಿ ವಿಡಿಯೊ ಚಿತ್ರೀಕರಣ ನಡೆಸಲಾಗಿದೆ ಎಂಬ ಆರೋಪದ ಕುರಿತು ಪ್ರತಿಕ್ರಿಯಿಸಿದ ಖರ್ಗೆ, ಇಂತಹ ಚಟುವಟಿಕೆಗಳು ನೈತಿಕತೆಯ ದೃಷ್ಟಿಯಿಂದ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ ಎಂದು ಹೇಳಿದರು. ಸಚಿವರು ಹಾಗೂ ಇತರ ಗಣ್ಯರನ್ನು ಭೇಟಿಯಾಗುವ ಸಂದರ್ಭದಲ್ಲಿ ನಿಗದಿತ ಶಿಷ್ಟಾಚಾರಗಳನ್ನು ಪಾಲಿಸುವುದು ಅತ್ಯಗತ್ಯ ಎಂದು ಅವರು ಪ್ರತಿಪಾದಿಸಿದರು. ವಿಡಿಯೊದಲ್ಲಿಯೇ ಇದು ಸ್ಪಷ್ಟವಾಗಿ ಕಾಣಿಸುತ್ತಿದೆ. ಅದರಲ್ಲಿ ಪಕ್ಷಕ್ಕೆ ಸೇರಿದ ವ್ಯಕ್ತಿಗಳ ಮುಖಗಳು ಕಾಣಿಸುತ್ತಿರುವಾಗ ಅವರು ಅದನ್ನು ನಿರಾಕರಿಸಲು ಸಾಧ್ಯವಿಲ್ಲ. ಇದು ಸ್ಪಷ್ಟವಾಗಿ ಸುಲಿಗೆ ಪ್ರಕರಣವಾಗಿದೆ. ಬ್ಲ್ಯಾಕ್‌ಮೇಲ್ ಪ್ರಕರಣವೂ ಆಗಿದೆ. ನಾವು ತನಿಖೆ ನಡೆಸುತ್ತಿದ್ದೇವೆ. ಇಂದಲ್ಲ ನಾಳೆ ಎಲ್ಲಾ ಸಂಗತಿಗಳೂ ಅಧಿಕೃತ ದಾಖಲೆಗಳಲ್ಲಿ ಬಹಿರಂಗವಾಗಲಿವೆ ಎಂದು ಅವರು ಹೇಳಿದರು.

> **ಈ ಪ್ರಕರಣದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆರೋಪಪಟ್ಟಿ ಸಲ್ಲಿಸಲೇಬೇಕು. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸುವುದು ನಮ್ಮ ಕರ್ತವ್ಯ. ಸೂಕ್ತ ಸಮಯದಲ್ಲಿ ತನಿಖೆಯ ಎಲ್ಲಾ ಮಾಹಿತಿಯನ್ನೂ ಬಹಿರಂಗಪಡಿಸಲಾಗುವುದು ಎಂದು ಹೇಳಿದರು.**
> -ಗೃಹ ಸಚಿವ ಪ್ರಿಯಾಂಕ್ ಖರ್ಗೆ

ಜ್ಞಾನೇಂದ್ರ ಕುಮಾರ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯ ಸರ್ಕಾರ ಅನುಮತಿ..!

• ಉದಯವಾಹಿನಿ, ಬೆಂಗಳೂರು

ಕೆಪಿಎಸ್‌ಸಿ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿರುವ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ವಿರುದ್ಧ ಪ್ರಾಸಿಕ್ಯೂಷನ್ ರಾಜ್ಯ ಸರ್ಕಾರ ಅನುಮತಿ ನೀಡಿದೆ. ಪಶುವೈದ್ಯಾಧಿಕಾರಿ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಮತ್ತು ಉತ್ತರಗಳನ್ನು ಸೋರಿಕೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಈ ಕ್ರಮ ಕೈಗೊಳ್ಳಲಾಗಿದೆ. ಶನಿವಾರ ಈ ಕುರಿತು ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಆದೇಶ ಹೊರಡಿಸಿದ್ದು, ಭ್ರಷ್ಟಾಚಾರ ಪ್ರಕರಣದಲ್ಲಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ವಿರುದ್ಧ ಕಾನೂನು ಕ್ರಮ ಜರುಗಿಸಲು ಅನುಮತಿ ನೀಡಿದ್ದಾರೆ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ ಕಲಂ 218ರ ಅಡಿಯಲ್ಲಿ ಕಡತ ಮತ್ತು ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ಅನುಮತಿ ನೀಡಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಕೆಪಿಎಸ್‌ಸಿ ಮೂಲಕ ಪಶುವೈದ್ಯಾಧಿಕಾರಿ ಹಾಗೂ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಕೇಳಿಬಂದಿತ್ತು. ಈ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ.), ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಹಿನ್ನೆಲೆಯಲ್ಲಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಬಂಧಿಸಿತ್ತು. ಬಂಧನದ ಬಳಿಕ ಅವರು ತಮ್ಮ ಹುದ್ದೆಯಿಂದ ಅಮಾನತುಗೊಂಡಿದ್ದರು. 14 ದಿನಗಳ ಕಸ್ಟಡಿ ಅವಧಿ ಮುಗಿದ ನಂತರ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು.

ಗೋಲ್ಡನ್ ಚಾರಿಯಟ್ ಐಷಾರಾಮಿ ಪ್ರವಾಸಿ ರೈಲಿಗೆ ಸಿಎಂ ಚಾಲನೆ

• ಉದಯವಾಹಿನಿ, ಬೆಂಗಳೂರು

2026-27ನೇ ಸಾಲಿನ ಐಷಾರಾಮಿ ಪ್ರವಾಸಿ ರೈಲಿನ ಹೊಸ ಋತುವಿಗೆ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಸಿರು ನಿಶಾನೆ ತೋರಿ ರೈಲಿನ ಮೊದಲ ಸಂಚಾರಕ್ಕೆ ಚಾಲನೆ ನೀಡಿದರು.

ರಾಜ್ಯದ ಐತಿಹಾಸಿಕ ಪರಂಪರೆ ಮತ್ತು ಪ್ರಾಕೃತಿಕ ಸೌಂದರ್ಯವನ್ನು ಈ ರೈಲು ಪರಿಚಯಿಸಲಿದೆ. ಗೋಲ್ಡನ್ ಚಾರಿಯಟ್ ಐಷಾರಾಮಿ ಪ್ರವಾಸಿ ರೈಲಿನ ಹೊಸ ಋತುವಿನ ಸಂಚಾರಕ್ಕೆ ಚಾಲನೆ ನೀಡಿರುವುದು ಸಂತಸ ತಂದಿದೆ. ಕರ್ನಾಟಕದ ವೈಭವವನ್ನು ಜಗತ್ತಿಗೆ ಪರಿಚಯಿಸುವ ಮತ್ತೊಂದು ಪ್ರವಾಸಿ ಋತು ಆರಂಭವಾಗಿದೆ ಎಂದು ಹೇಳಿದರು.

ಪ್ರೈಡ್ ಆಫ್ ಕರ್ನಾಟಕದ ಮೊದಲ ಪ್ರವಾಸದ ಆಸನಗಳು ಭರ್ತಿಯಾಗಿರುವುದು ಸಂತಸದ ಸಂಗತಿ. ನಮ್ಮ ರಾಜ್ಯದ ಭವ್ಯ ಐತಿಹಾಸಿಕ ಪರಂಪರೆ, ವನ್ಯಜೀವಿ ಸಂಪತ್ತು, ರಮಣೀಯ ಪ್ರಕೃತಿ ದೃಶ್ಯಗಳು ಶ್ರೀಮಂತ ಸಂಸ್ಕೃತಿಯನ್ನು ಕಣ್ತುಂಬಿಕೊಳ್ಳಲು 75 ಪ್ರವಾಸಿಗರು ಸಜ್ಜಾಗಿದ್ದಾರೆ ಎಂದು ಸುದ್ದಿಗಾರರೊಂದಿಗೆ ಮಾತನಾಡುತ್ತಾ ಹೇಳಿದರು.

ಈ ಪ್ರವಾಸಿ ಋತುವಿನಲ್ಲಿ ಒಟ್ಟು 13 ಪ್ರವಾಸಗಳನ್ನು ಆಯೋಜಿಸಲು ಯೋಜಿಸಲಾಗಿದೆ. ಕರ್ನಾಟಕವನ್ನು ಐಷಾರಾಮಿ ಪ್ರವಾಸೋದ್ಯಮದ ಪ್ರಮುಖ ತಾಣವನ್ನಾಗಿ ರೂಪಿಸುವುದರ ಜೊತೆಗೆ ಪ್ರತಿಯೊಬ್ಬ ಪ್ರವಾಸಿಗರಿಗೂ ಜೀವನಪೂರ್ತಿ ನೆನಪಿನಲ್ಲಿ ಉಳಿಯುವಂತಹ ವಿಶಿಷ್ಟ ಅನುಭವಗಳನ್ನು ಒದಗಿಸಲು ನಾವು ಬದ್ಧರಾಗಿದ್ದೇವೆ ಎಂದು ಹೇಳಿದರು.

ಉದಯವಾಹಿನಿ ಚಿತ್ರ

ನವೀಕೃತ ರೂಪದಲ್ಲಿ ಮಾರುಕಟ್ಟೆಗೆ ಬಂದಿರುವ ಈ ಐಷಾರಾಮಿ ರೈಲಿಗೆ ಪ್ರವಾಸಿಗರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದೆ. ಮೊದಲ ಪ್ರಯಾಣದ ಎಲ್ಲಾ ಟಿಕೆಟ್‌ಗಳು ಸೋಲ್ಡ್ ಔಟ್ ಆಗಿದ್ದು, ದೇಶದ ಪ್ರಮುಖ ಪ್ರವಾಸಿಗರ ಜೊತೆಗೆ ಸ್ಪೇನ್ ಸೇರಿದಂತೆ ವಿವಿಧ ದೇಶಗಳ ವಿದೇಶಿ ಅತಿಥಿಗಳು ಈ ಸುವರ್ಣ ಯಾತ್ರೆಯಲ್ಲಿ ಭಾಗವಹಿಸಿದ್ದಾರೆ.

ಸಿದ್ದರಾಮಯ್ಯ ವಿರುದ್ಧ ಸ್ಟಿಂಗ್ ಆಪರೇಷನ್ ಪ್ರಕರಣ ರಿತೇಶ್ ಪಾಂಡೆ ಬಂಧನ!

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ಭಾರೀ ಸದ್ದು ಮಾಡುತ್ತಿರುವ ಸ್ಟಿಂಗ್ ಆಪರೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲ ಬಂಧನವಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ 'ಸ್ಟಿಂಗ್ ಆಪರೇಷನ್' ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ದೆಹಲಿ ಮೂಲದ ರಿತೇಶ್ ಪಾಂಡೆ ಎಂಬಾತನನ್ನು ಸಿಸಿಬಿ ಪೊಲೀಸರು ಶನಿವಾರ ಬಂಧಿಸಿದ್ದಾರೆ. ಬಂಧಿತ ಆರೋಪಿ ವಿಡಿಯೋ ರೆಕಾರ್ಡ್ ಮಾಡಲು ಮೊಬೈಲ್ ಖರೀದಿ ಮಾಡಿದ್ದ ಎನ್ನಲಾಗಿದ್ದು, ಆರೋಪಿಯನ್ನು ದೆಹಲಿಯಲ್ಲಿ ಬಂಧಿಸಿ ಬೆಂಗಳೂರಿಗೆ ಕರೆತರಲಾಗಿದೆ.ಸಿಸಿಬಿ ಸೈಬರ್ ಕ್ರೈಮ್ ಪೊಲೀಸರು ರಹಸ್ಯ ಸ್ಥಳದಲ್ಲಿ ಆರೋಪಿಯ ವಿಚಾರಣೆ ನಡೆಸುತ್ತಿದ್ದಾರೆ. ಇನ್ನು ಇದೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಸಿಸಿಬಿ ಪೊಲೀಸರು ಕಾಂಗ್ರೆಸ್ ನಾಯಕಿ ಕೃಪಾ ಆಳ್ವಾ ಅವರನ್ನು ವಶಕ್ಕೆ ಪಡೆಯುವ ಸಾಧ್ಯತೆಯಿದೆ. ತನಿಖಾಧಿಕಾರಿಯ ಮುಂದೆ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ನೀಡಿದ ಬೆನ್ನಲ್ಲೇ, ಈ ಮಹಿಳಾ ನಾಯಕಿ ಪೊಲೀಸರಿಗೆ ಶರಣಾಗಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಉದಯವಾಹಿನಿ ಚಿತ್ರ

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಈ ಸ್ಟಿಂಗ್ ಆಪರೇಷನ್ ಹಿಂದೆ ಕಾಂಗ್ರೆಸ್ ನಾಯಕಿ ಕೃಪಾ ಆಳ್ವ ಮತ್ತು ಕನ್ನಡ ಸುದ್ದಿ ವಾಹಿನಿಯೊಂದರೊಂದಿಗೆ ಗುರುತಿಸಿಕೊಂಡಿರುವ ರಾಕೇಶ್ ಶೆಟ್ಟಿ ಇದ್ದಾರೆ ಎಂದು ಆರೋಪಿಸಿದ್ದರು.

ಮೊದಲ ಬಜೆಟ್ ಮಂಡನೆಗೆ ಸಿದ್ಧತೆ: ಹೆಚ್ಚಿನ ಅನುದಾನಕ್ಕಾಗಿ ಬೇಡಿಕೆ ಇಡುವುದನ್ನು ತಪ್ಪಿಸಿ

• ಉದಯವಾಹಿನಿ, ಬೆಂಗಳೂರು

2027-28ನೇ ಸಾಲಿನ ಬಜೆಟ್ ಅಂದಾಜುಗಳನ್ನು ಸಿದ್ಧಪಡಿಸುವಂತೆ ಹಣಕಾಸು ಇಲಾಖೆಯು ಎಲ್ಲಾ ಇಲಾಖೆಗಳಿಗೆ ಸುತ್ತೋಲೆಯನ್ನು ಹೊರಡಿಸಿದೆ. ನಿಗದಿತ ವೇಳಾಪಟ್ಟಿಯನ್ನು ಅನುಸರಿಸುವಂತೆ ಇಲಾಖೆಗಳಿಗೆ ಸೂಚಿಸಲಾಗಿದೆ.

ವಾಸ್ತವಿಕ ಪ್ರಸ್ತಾವನೆಗಳನ್ನು ಸಲ್ಲಿಸುವಂತೆಯೂ ಮತ್ತು ಹೆಚ್ಚುವರಿ ಅನುದಾನಕ್ಕಾಗಿ ಬೇಡಿಕೆ ಇಡುವುದನ್ನು ತಪ್ಪಿಸುವಂತೆಯೂ ಅವರಿಗೆ ತಿಳಿಸಲಾಗಿದೆ. ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಮಂಡಿಸಲಿರುವ ಮೊದಲ ಬಜೆಟ್ ಇದಾಗಲಿದೆ.

ಅಂದಾಜುಗಳನ್ನು ಸಿದ್ಧಪಡಿಸುವ ಅಧಿಕಾರಿಗಳು, ತಮ್ಮ ಇಲಾಖಾ ಮುಖ್ಯಸ್ಥರಿಗೆ ಮತ್ತು ಆಂತರಿಕ ಹಣಕಾಸು ಸಲಹೆಗಾರರಿಗೆ ಅಂದಾಜುಗಳನ್ನು ಸಲ್ಲಿಸಬೇಕೆಂದು ಹಣಕಾಸು ಇಲಾಖೆ ನಿರ್ದೇಶಿಸಿದೆ. ಪರಿಶೀಲನೆಯ ನಂತರ, ಈ ಅಂದಾಜುಗಳನ್ನು ನಿಗದಿತ ಗಡುವಿಗೂ ಮುನ್ನವೇ ಹಣಕಾಸು ಇಲಾಖೆಗೆ ಕಳುಹಿಸಿಕೊಡಲಾಗುತ್ತದೆ. ಮೂಲ ಬಜೆಟ್ ಸಿದ್ಧಪಡಿಸುವಾಗಲೇ ಊಹಿಸಬಹುದಾಗಿದ್ದ ವಿಷಯಗಳಿಗಾಗಿ, ಆರ್ಥಿಕ ವರ್ಷದ ಮೊದಲ ಮೂರು ತಿಂಗಳ ಒಳಗಾಗಿಯೇ ಸರ್ಕಾರದಿಂದ ಹೆಚ್ಚುವರಿ ಅನುದಾನವನ್ನು ಕೋರಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಆದ್ದರಿಂದ, ಪದೇ ಪದೇ ಹೆಚ್ಚುವರಿ ಅನುದಾನಕ್ಕಾಗಿ ಮನವಿ ಮಾಡುವುದನ್ನು ತಪ್ಪಿಸಲು, ತಮ್ಮ ಇಲಾಖೆಗಳ ಆರ್ಥಿಕ ಅಗತ್ಯಗಳನ್ನು ನಿಖರವಾಗಿ ಮೌಲ್ಯಮಾಪನ ಮಾಡಿ, ವಾಸ್ತವಿಕ ಅಂದಾಜುಗಳನ್ನು ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಉದಯವಾಹಿನಿ ಚಿತ್ರ

ಸರ್ಕಾರದ 'ಗ್ಯಾರಂಟಿ ಯೋಜನೆ'ಗಳಿಗೆ ಬಜೆಟ್‌ನ ಬಹುದೊಡ್ಡ ಪಾಲು ಹಣ ವಿನಿಯೋಗವಾಗುತ್ತಿದೆ ಎಂದು ಹಣಕಾಸು ಇಲಾಖೆಯ ಮೂಲಗಳು ತಿಳಿಸಿವೆ. ಇದು ರಾಜ್ಯದ ಮೇಲೆ ಹೊರೆಯಾಗಿದೆ. ಫಲಾನುಭವಿಗಳ ಪರಿಶೀಲನೆ ನಡೆಯುತ್ತಿರುವುದರಿಂದ, 2027-28ನೇ ಸಾಲಿನಲ್ಲಿ ಗ್ಯಾರಂಟಿ ಯೋಜನೆಗಳಿಗೆ ಮೀಸಲಿಡುವ ಅನುದಾನದ ಮೊತ್ತ ಕಡಿಮೆಯಾಗುವ ನಿರೀಕ್ಷೆಯಿದೆ.

ಅಡುಗೆ ಅನಿಲ ಸಿಲಿಂಡರ್ ಸ್ಫೋಟ

• ಉದಯವಾಹಿನಿ, ಬೆಂಗಳೂರು

ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡು ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಗರದ ರಾಜರಾಜೇಶ್ವರಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಇಂದು ಬೆಳಗ್ಗೆ ಸಂಭವಿಸಿದ ಸ್ಫೋಟದಲ್ಲಿ ಬಿಹಾರ ಮೂಲದ ಬಬ್ಲು, ಪಕ್ಕದ ಮನೆಯ ನಿವಾಸಿ ಲಕ್ಷ್ಮಮ್ಮ ಹಾಗೂ ಒಂಬತ್ತು ವರ್ಷದ ಬಾಲಕ ಗಂಭೀರವಾಗಿ ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳ ಹಾಗೂ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಳೆದ 20 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸಿಸುತ್ತಿರುವ ಬಬ್ಲು, ಪಾನಿಪುರಿ ವ್ಯಾಪಾರಕ್ಕಾಗಿ ಇಲ್ಲಿ ಪ್ರತ್ಯೇಕ ಗೋದಾಮೊಂದನ್ನು ಬಾಡಿಗೆಗೆ ಪಡೆದಿದ್ದರು. ರಾತ್ರಿ ವೇಳೆ ಗೋದಾಮಿನಲ್ಲಿದ್ದ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿದ್ದು, ಒಳಗೆ ಅನಿಲ ಸಂಗ್ರಹವಾಗಿ ಒತ್ತಡ ಹೆಚ್ಚಾಗಿತ್ತು ಎನ್ನಲಾಗಿದೆ.

ಬೆಳಗ್ಗೆ ಬಬ್ಲು ಗೋದಾಮಿಗೆ ಬಂದು ಬಾಗಿಲು ತೆರೆದಾಗ ಏಕಾಏಕಿ ಸ್ಫೋಟ ಸಂಭವಿಸಿದೆ ಎಂದು ತಿಳಿದುಬಂದಿದೆ.ಘಟನೆ ಬಳಿಕ ಬೆಂಕಿಯನ್ನು ನಂದಿಸಲಾಗಿದ್ದು, ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಶೇ. 63ರಷ್ಟು PGಗಳು ಅನಧಿಕೃತ ಮಾಲೀಕರಿಗೆ GBA ನೋಟಿಸ್..!

ಪರಿಶೀಲನೆಯಲ್ಲಿ ನಗರದಲ್ಲಿ ಒಟ್ಟು 5,480 ಪಿಜಿ ವಸತಿಗಳಿರುವುದು ತಿಳಿದುಬಂದಿದ್ದು, ಅವುಗಳಲ್ಲಿ 3,597 ಪಿಜಿಗಳು ಪರವಾನಗಿ ಇಲ್ಲದ ವಿಭಾಗಕ್ಕೆ ಸೇರಿವೆ.

• ಉದಯವಾಹಿನಿ, ಬೆಂಗಳೂರು

1 ತೀರ್ಪುಗಳ ಹಿನ್ನೆಲೆಯಲ್ಲಿ ಪರಿಶೀಲನೆ

2 ಇಲಾಖೆ ನೀಡಿರುವ ಮಾಹಿತಿ ಪ್ರಕಾರ

3 ಒಟ್ಟು 5,480 ಪಿಜಿ ವಸತಿಗಳಿರುವುದು

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಪೇಯಿಂಗ್ ಗೆಸ್ಟ್‌ಗಳ ವಿರುದ್ಧ ಬಿಗಿ ಕ್ರಮ ಜಾರಿಯಾಗಿದ್ದು, ನಗರದಲ್ಲಿರುವ ಒಟ್ಟು ಪಿಜಿಗಳಲ್ಲಿ ಶೇಕಡಾ 63 ರಷ್ಟು ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬ ಆಘಾತಕಾರಿ ಮಾಹಿತಿ ಹೊರಬಿದ್ದಿದೆ.

ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಇತ್ತೀಚೆಗೆ ಈ ವಿಚಾರವಾಗಿ ನೀಡಿದ ತೀರ್ಪುಗಳ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಲಾಗಿದೆ.

ಇದಕ್ಕಾಗಿ ಜಿಬಿಎ ತನ್ನ ಆರೋಗ್ಯ ಇಲಾಖೆ ಮತ್ತು ಸ್ಥಳೀಯ ಇಂಜಿನಿಯರ್‌ಗಳನ್ನು ನಿಯೋಜಿಸಿತ್ತು. ಪರಿಶೀಲನೆಯಲ್ಲಿ ನಗರದಲ್ಲಿ ಒಟ್ಟು 5,480 ಪಿಜಿ ವಸತಿಗಳಿರುವುದು ತಿಳಿದುಬಂದಿದ್ದು, ಅವುಗಳಲ್ಲಿ 3,597 ಪಿಜಿಗಳು ಪರವಾನಗಿ ಇಲ್ಲದ ವಿಭಾಗಕ್ಕೆ ಸೇರಿವೆ ಎಂದು ತಿಳಿದುಬಂದಿದೆ.

ಪರವಾನಗಿ ನೀಡುವ ಅಧಿಕಾರ ಹೊಂದಿರುವ ಜಿಬಿಎ ಆರೋಗ್ಯ ಇಲಾಖೆ ನೀಡಿರುವ ಮಾಹಿತಿ ಪ್ರಕಾರ, 2025ರಲ್ಲಿ ನಗರಾಭಿವೃದ್ಧಿ ಇಲಾಖೆ ಹೊರಡಿಸಿದ ಸುತ್ತೋಲೆಯ ಅನ್ವಯ, 40 ಅಡಿಗಿಂತ ಕಡಿಮೆ ಅಗಲದ ರಸ್ತೆಗಳಲ್ಲಿರುವ, ಕಟ್ಟಡದ ಅನುಮೋದಿತ ನಕ್ಷೆಯ ನಿಯಮಗಳನ್ನು ಉಲ್ಲಂಘಿಸಿರುವ, ವಸತಿ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ನೆಲಮಾಳಿಗೆಯಲ್ಲಿ ಅಡುಗೆಮನೆ ಹೊಂದಿರುವ ಪಿಜಿಗಳಿಗೆ ವ್ಯಾಪಾರ ಪರವಾನಗಿ ನೀಡಲು ಸಾಧ್ಯವಿಲ್ಲ. ಇಂತಹ ಪಿಜಿಗಳನ್ನು ಅನಧಿಕೃತ ಎಂದು ಪರಿಗಣಿಸಲಾಗುತ್ತದೆ.ಇಂತಹ ಕಟ್ಟಡಗಳು ಅಲ್ಲಿ ವಾಸಿಸುವವರ ಸುರಕ್ಷತೆಗೆ ಅಪಾಯ ಉಂಟುಮಾಡುತ್ತವೆ. ಯಾವುದೇ ಅವಘಡ ಸಂಭವಿಸಿದರೆ ಕಟ್ಟಡದ ಮಾಲೀಕರು ಮತ್ತು ನಿರ್ಮಾಣಕಾರರ ಜತೆಗೆ ಸಹಾಯಕ ಇಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಜಂಟಿ ಆಯುಕ್ತರು, ನಗರ ಯೋಜನಾ ಅಧಿಕಾರಿಗಳು, ಬೆಸ್ಕಾಂ ಅಧಿಕಾರಿಗಳು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳ ಹೊಣೆಗಾರಿಕೆಯನ್ನೂ ನಿಗದಿಪಡಿಸಬೇಕಾಗುತ್ತದೆ ಎಂದು ನಿವೃತ್ತ ಮುಖ್ಯ ಇಂಜಿನಿಯರ್‌ಒಬ್ಬರು ಹೇಳಿದ್ದಾರೆ.

ಉದಯವಾಹಿನಿ ಚಿತ್ರ

> **ದೇಶದ ವಿವಿಧ ಭಾಗಗಳಿಂದ ನಗರಕ್ಕೆ ವಿದ್ಯಾಭ್ಯಾಸ ಮತ್ತು ಉದ್ಯೋಗಕ್ಕಾಗಿ ಬಂದಿರುವ ಸುಮಾರು 50,000 ಜನರು ಈ 3,000ಕ್ಕೂ ಹೆಚ್ಚು ಪಿಜಿಗಳಲ್ಲಿ ವಾಸಿಸುತ್ತಿರಬಹುದು. ಯಾವುದೇ ಕಠಿಣ ನಿರ್ಧಾರ ಕೈಗೊಂಡರೂ ಅದು ಅವರ ಮೇಲೆ ಪರಿಣಾಮ ಬೀರಲಿದೆ ಎಂದು ತಿಳಿಸಿದ್ದಾರೆ.**
> -ಜಿಬಿಎಯ ಆರೋಗ್ಯ ಅಧಿಕಾರಿ

ನ್ಯಾಯಾಲಯದಿಂದ ತಡೆಯಾಜ್ಞೆ

ಲೋಕಾಯುಕ್ತರಿಗೆ ದೂರು ನೀಡಿದ ಬಳಿಕ ಇಂತಹ 13 ಪಿಜಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಯಿತು. ಆದರೆ, ಇದರಿಂದ 25,000 ಪಿಜಿ ಕೇಂದ್ರಗಳಿಗೆ ತೊಂದರೆಯಾಗಲಿದೆ ಎಂದು ಹೇಳಿ ಪಿಜಿ ಮಾಲೀಕರ ಸಂಘವು ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದುಕೊಂಡಿತು.

ಪರಿಶೀಲನಾ ವರದಿ ಸಲ್ಲಿಕೆಯಾದ ಬಳಿಕ ಕಳೆದ ವಾರ ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅವರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆ ನಡೆಯಿತು. ನಿಯಮ ಉಲ್ಲಂಘಿಸಿರುವ ಕಟ್ಟಡಗಳಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದ್ದು, ಮುಂದಿನ ಆದೇಶಗಳಿಗಾಗಿ ಕಾಯಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮುಂದಿನ ಕ್ರಮಗಳ ಕುರಿತು ಮುಖ್ಯ ಆಯುಕ್ತರಿಂದ ನಿರ್ದೇಶನಕ್ಕಾಗಿ ಆರೋಗ್ಯ ಇಲಾಖೆ ಕಾಯುತ್ತಿದೆ ಎಂದು ಅವರು ಹೇಳಿದ್ದಾರೆ.

ಈ ನಡುವೆ ನೋಟಿಸ್ ಜಾರಿ ಕ್ರಮವನ್ನು ಸ್ವಾಗತಿಸಿರುವ ಬೆಂಗಳೂರಿನ ಆಮ್ ಆದ್ಮಿ ಪಕ್ಷದ ಯುವ ಘಟಕದ ನಾಯಕ ಗಿರೀಶ್ ಕುಮಾರ್ ನಾಯ್ಡು ಅವರು, 2024ರಲ್ಲಿ ಇಂತಹ 13 ಪಿಜಿಗಳ ವಿರುದ್ಧ ದೂರು ನೀಡಿದ್ದರೂ ಅಧಿಕಾರಿಗಳು ಕ್ರಮ ಕೈಗೊಳ್ಳದೆ ವ್ಯಾಪಾರ ಪರವಾನಗಿಗಳನ್ನು ನೀಡುವುದನ್ನು ಮುಂದುವರಿಸಿದ್ದರು. ಇದರಿಂದಾಗಿ ಅವರು ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದರು.

ನ.1ರಂದು ಅರ್ಥಪೂರ್ಣವಾಗಿ ಕನ್ನಡ ರಾಜ್ಯೋತ್ಸವ ಆಚರಣೆ

• ಉದಯವಾಹಿನಿ, ಮೈಸೂರು

ನವೆಂಬರ್ 01 ರಂದು ಅರ್ಥಪೂರ್ಣವಾಗಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿಗಳಾದ ಆರ್. ಐಶ್ವರ್ಯ ಅವರು ತಿಳಿಸಿದರು . ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನವೆಂಬರ್ 1 ರಂದು ಆಚರಿಸುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವನ್ನು ಬೆಳಿಗ್ಗೆ 8:00 ಗಂಟೆಗೆ ಅರಮನೆ ಆವರಣದಲ್ಲಿರುವ ಶ್ರೀ ಭುವನೇಶ್ವರಿ ದೇವಿಗೆ ಮಾನ್ಯ ಜಿಲ್ಲಾ ಉಸ್ತುವಾರಿ

ಉದಯವಾಹಿನಿ ಚಿತ್ರ

ಸಚಿವರು ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಬೆಳಿಗ್ಗೆ 9:00 ಗಂಟೆಗೆ ಓವೆಲ್ ಮೈದಾನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಧ್ವಜಾರೋಹಣ ನೆರವೇರಲಿದ್ದು, ಪೊಲೀಸ್ ಗೌರವ ರಕ್ಷೆ ಸ್ವೀಕಾರ ನಡೆಯಲಿದೆ ಎಂದರು.

ಕನ್ನಡದ ಅನುಷ್ಠಾನದ ಬಗ್ಗೆ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ, ಕುಂದುಕೊರತೆಗಳನ್ನು ಸರಿಪಡಿಸಲು ಹಾಗೂ ಕನ್ನಡ ನಾಡಿನಲ್ಲಿ ಕನ್ನಡ ಭಾಷೆಯನ್ನು ಉತ್ತಮವಾಗಿ ಬಳಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದರು. ಪೊಲೀಸ್ ಆಯುಕ್ತರ ಅಧ್ಯಕ್ಷತೆಯಲ್ಲಿ ಮೆರವಣಿಗೆ ಆಯೋಜನೆಗೊಳ್ಳಲಿದ್ದು, ಕೆ.ಆರ್. ವೃತ್ತದ ಮೂಲಕ ಸಾಗಲಿದೆ. ಈ ಮೆರವಣಿಗೆಯಲ್ಲಿ ಕಲಾತಂಡಗಳು, ಪೊಲೀಸ್ ಬ್ಯಾಂಡ್, ಮೌಂಟೆಡ್ ಪೊಲೀಸ್ ಹಾಗೂ ವಿವಿಧ ಇಲಾಖೆಗಳು ಮತ್ತು ಸಂಘ-ಸಂಸ್ಥೆಗಳ ಆಕರ್ಷಕ ಸ್ತಬ್ಧಚಿತ್ರಗಳು ಭಾಗವಹಿಸಲಿವೆ.

ಸಂಜೆ 6:00 ಗಂಟೆಗೆ ಕಲಾಮಂದಿರದಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ನೀರಿನ ಪಂಪ್ ಸ್ವಚ್ಛಗೊಳಿಸುವಾಗ ವಿದ್ಯುತ್ ಶಾಕ್, ಯುವಕ ಸಾವು

• ಉದಯವಾಹಿನಿ, ಮೈಸೂರು

ನೀರಿನ ಪಂಪ್ ಸ್ವಚ್ಛಗೊಳಿಸುತ್ತಿದ್ದಾಗ ವಿದ್ಯುತ್ ಶಾಕ್‌ಗೆ ಒಳಗಾಗಿ 27 ವರ್ಷದ ಯುವಕ ಮೃತಪಟ್ಟಿರುವ ಘಟನೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೈಲಕುಪ್ಪೆ ಪಟ್ಟಣದಲ್ಲಿ ನಡೆದಿದೆ. ಮೃತ ಯುವಕನನ್ನು ರಾಜಸ್ಥಾನ ಮೂಲದ ಪ್ರಕಾಶ್ ಎಂದು ಗುರುತಿಸಲಾಗಿದ್ದು, ಆತ ಬೈಲಕುಪ್ಪೆಯಲ್ಲಿ ಹಾರ್ಡ್‌ವೇರ್ ಅಂಗಡಿ ನಡೆಸುತ್ತಿದ್ದ ಎಂದು ತಿಳಿದುಬಂದಿದೆ.

ಮೂಲಗಳ ಪ್ರಕಾರ, ನೀರಿನ ಪಂಪ್ ಸ್ವಚ್ಛಗೊಳಿಸುತ್ತಿದ್ದಾಗ ಅರ್ಥಿಂಗ್ ದೋಷದಿಂದ ಪ್ರಕಾಶ್‌ಗೆ ವಿದ್ಯುತ್ ಪ್ರವಹಿಸಿದೆ. ಇದರಿಂದ ಅವರು ನೀರಿನಲ್ಲಿ ಬಿದ್ದು ಮುಳುಗಿ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಬೈಲಕುಪ್ಪೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ಸಂಭವಿಸಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.ಇನ್ನು ನೀರಿನ ಕ್ಲೀನ್ ಮಾಡುವ ವೇಳೆ ವ್ಯಕ್ತಿಗೆ ವಿದ್ಯುತ್ ಶಾಕ್ ಆದ ಘಟನೆಯ ವಿಡಿಯೋ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ಹಳೆ ಬಸ್ ನಿಲ್ದಾಣಕ್ಕೆ ಸಿಗುವುದೇ ಹೊಸ ಸ್ಪರ್ಶ?

ಪ್ರಮುಖವಾಗಿ ಇಲ್ಲಿರುವ ಗಡಿಯಾರ ಗೋಪುರ ಗಮನ ಸೆಳೆಯುತ್ತಿದೆ. ಆದರೆ, ನಿರ್ವಹಣೆ ಇಲ್ಲದೆ ಪಾಳು ಬಿದ್ದಿದೆ. ಗೋಪುರದ ಕೆಳಗೆ ತಂಗುದಾಣವೂ ಇದೆ

• ಉದಯವಾಹಿನಿ, ಕೋಲಾರ

1 ಗಡಿಯಾರ ಗೋಪುರ ಗಮನ ಸೆಳೆಯುತ್ತಿದೆ
2 ಕನ್ನಡ ಧ್ವಜದ ಬಣ್ಣ ಬಳಿಯುವಂತೆ ಸಲಹೆ
3 ವ್ಯಾಪಾರಿಗಳು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ

ನಗರದ ಹೃದಯ ಭಾಗದಲ್ಲಿರುವ ಹಳೆ ಬಸ್ ನಿಲ್ದಾಣಕ್ಕೆ ಹೊಸ ಸ್ಪರ್ಶ ನೀಡಲು ಜಿಲ್ಲಾಡಳಿತ ಹಾಗೂ ಕೋಲಾರ ನಗರಸಭೆ ಯೋಜನೆ ರೂಪಿಸುತ್ತಲೇ ಇವೆ. ಆದರೆ ಅದಕ್ಕಿನ್ನೂ ಕಾಲ ಕೂಡಿಬಂದಿಲ್ಲ.

ಹೈಟೆಕ್ ವಾಣಿಜ್ಯ ಮಳಿಗೆ ನಿರ್ಮಾಣ, ಹೈಟೆಕ್ ಬಸ್ ನಿಲ್ದಾಣ ನಿರ್ಮಾಣದ ಯೋಜನೆ ಇವೆ. ಡೆಲ್ಟ್ ಯೋಜನೆಯಡಿ ಕಾಂಪ್ಲೆಕ್ಸ್ ನಿರ್ಮಿಸಲು ನಗರಸಭೆ ಚಿಂತಿಸುತ್ತಿದೆ. ಈ ನಿಟ್ಟಿನಲ್ಲಿ ಶೀಘ್ರವೇ ನಿರ್ಧಾರ ಹೊರಬೀಳುವ ನಿರೀಕ್ಷೆ ಇದೆ. ಹಳೆ ಬಸ್ ನಿಲ್ದಾಣ ನವೀಕರಣ ಮಾಡುವುದಾಗಿ ಶಾಸಕ ಕೊತ್ತೂರು ಮಂಜುನಾಥ್ ಕೂಡ ಭರವಸೆ ನೀಡಿದ್ದಾರೆ.

ಹಳೆ ಬಸ್ ನಿಲ್ದಾಣ ದಶಕಗಳಿಂದ ಹೂವಿನ ಮಾರುಕಟ್ಟೆಯಾಗಿ ಪರಿವರ್ತಿತವಾಗಿದೆ. ಸುಮಾರು 100 ಹೂವಿನ ಮಳಿಗೆಗಳು ಇಲ್ಲಿವೆ. ಕೆಲವರು ಜೋಪಡಿ ರೀತಿ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಂಡು ದಶಕಗಳಿಂದ ವ್ಯಾಪಾರ ನಡೆಸುತ್ತಿದ್ದಾರೆ. ಇನ್ನು ಕೆಲವರು ನೇತಾಜಿ ವಾಣಿಜ್ಯ ಸಂಕೀರ್ಣದಲ್ಲಿ ನಗರಸಭೆಯಿಂದ ಹರಾಜಿನಲ್ಲಿ ಮಳಿಗೆ ಪಡೆದು ಹೂವು, ಹಣ್ಣಿನ ವಹಿವಾಟು ನಡೆಸುತ್ತಿದ್ದಾರೆ.

ಪ್ರಮುಖವಾಗಿ ಇಲ್ಲಿರುವ ಗಡಿಯಾರ ಗೋಪುರ ಗಮನ ಸೆಳೆಯುತ್ತಿದೆ. ಆದರೆ, ನಿರ್ವಹಣೆ ಇಲ್ಲದೆ ಪಾಳು ಬಿದ್ದಿದೆ. ಗೋಪುರದ ಕೆಳಗೆ ತಂಗುದಾಣವೂ ಇದೆ. ಗಡಿಯಾರ ಗೋಪುರವೆಂದು ಹೆಸರಿದ್ದರೂ ಗಡಿಯಾರವೇ ಇಲ್ಲ! ನವೀಕರಣಕ್ಕೆ

ಉದಯವಾಹಿನಿ ಚಿತ್ರ

ನಾಗರಿಕರಿಂದಲೂ ಒತ್ತಾಯ ವ್ಯಕ್ತವಾಗುತ್ತಿದ್ದು, ಕನ್ನಡ ಧ್ವಜದ ಬಣ್ಣ ಬಳಿಯುವಂತೆ ಸಲಹೆಗಳು ಬರುತ್ತಿವೆ. ಈ ಸಂಬಂಧ ನಗರಸಭೆಯ ಈಗಿನ ಆಯುಕ್ತ ವೆಂಕಟೇಶ್ ನಾಗನೂರು ಆಸಕ್ತಿ ವಹಿಸಿದ್ದು, ಗಡಿಯಾರ ಅಳವಡಿಸಿ ನವೀಕರಣ ಮಾಡಲು ಮುಂದಾಗಿದ್ದಾರೆ.

ಸೌಂದರ್ಯೀಕರಣ ನಿಟ್ಟಿನಲ್ಲಿ ಅವರು ಈ ಗೋಪುರದ ಅಡಿಯಲ್ಲಿರುವ ಹೂವಿನ ಮಳಿಗೆಗಳನ್ನು ತೆರವು ಮಾಡಲು ಮುಂದಾಗಿದ್ದಾರೆ. ತೆರವು ಮಾಡಲು ವ್ಯಾಪಾರಿಗಳಿಗೆ ಸೂಚನೆ ಕೂಡ ನೀಡಿದ್ದಾರೆ. ಇದಕ್ಕೆ ವ್ಯಾಪಾರಿಗಳು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. 50 ವರ್ಷಗಳಿಂದ ಇಲ್ಲಿ ರೈತರು ತರುವ ಹೂವು ಹರಾಜು ಹಾಕಿ ವಹಿವಾಟು ನಡೆಸುತ್ತಿದ್ದಾರೆ.

ಕೆಲ ತಿಂಗಳ ಹಿಂದೆ ಸಂಸದ ಎಂ.ಮಲ್ಲೇಶ್ ಬಾಬು ಭೇಟಿ ನೀಡಿ ಹೂವು ವ್ಯಾಪಾರಿಗಳ ಪರವಾಗಿ ನಿಂತಿದ್ದರು. ಹೂ ಮಾರಾಟಗಾರರಿಗೆ ಯಾವುದೇ ರೀತಿ ತೊಂದರೆ ನೀಡದಂತೆ ಹಾಗೂ ಮಾರುಕಟ್ಟೆಗೆ ಮೂಲ ಸೌಕರ್ಯ ಒದಗಿಸುವಂತೆ ನಗರಸಭೆ ಅಧಿಕಾರಿಗಳ ಜೊತೆ ಚರ್ಚಿಸಿದ್ದರು.

ಗಬ್ಬುನಾರುತ್ತಿರುವ ಪ್ರದೇಶ: ಹೂವಿನ ಮಾರಾಟಗಾರರು ಅಲ್ಲಲ್ಲೇ ಹೂವು ಹಾಗೂ ಇತರ ವಸ್ತುಗಳನ್ನು ಸುರಿದಿದ್ದು, ತ್ಯಾಜ್ಯ ರಾಶಿಯೇ ನಿರ್ಮಾಣವಾಗಿದೆ. ಇದರಿಂದ ಈ ಪ್ರದೇಶ ದುರ್ವಾಸನೆ ಹೊಡೆಯುತ್ತಿದೆ. ಹಳೆ ಬಸ್ ನಿಲ್ದಾಣದಿಂದ ಎಂ.ಬಿ.ರಸ್ತೆಗೆ ಸಂಪರ್ಕ ಕಲ್ಪಿಸುವ ಸಣ್ಣ ರಸ್ತೆಯೂ ಕೆಸರು ಗದ್ದೆಯಂತಾಗಿದೆ. ಎಲ್ಲಿ ಬೇಕೆಂದರಲ್ಲಿ ಮಲ ಮೂತ್ರ ವಿಸರ್ಜನೆ ಕೋಲಾರ ನಗರದ ಹಳೆ ಬಸ್ ನಿಲ್ದಾಣವನ್ನು ಡೆಲ್ಟ್ ಯೋಜನೆಯಡಿ ಸೌಂದರ್ಯೀಕರಣಗೊಳಿಸಲಾಗುತ್ತದೆ. ಈ ಪ್ರದೇಶದಲ್ಲಿ ಮಾರುಕಟ್ಟೆ ಹಾಗೂ ಕಾಂಪ್ಲೆಕ್ಸ್ ತಲೆ ಎತ್ತಲಿವೆ. 'ಎಲ್' ಸ್ವರೂಪದಲ್ಲಿ ನಿರ್ಮಾಣವಾಗಲಿದೆ. ಉದ್ಯಾನ ಹಾಗೂ ಮಳಿಗೆಗಳು ಇರಲಿವೆ. ಸದ್ಯಕ್ಕೆ ಗಡಿಯಾರ ಗೋಪುರಕ್ಕೆ ಹೊಸ ಸ್ಪರ್ಶ ನೀಡಲಾಗುವುದು. ಗಡಿಯಾರ ಅಳವಡಿಸಿ, ಪೇಂಟಿಂಗ್ ಮಾಡಲಾಗುವುದು.

> **ಗಡಿಯಾರ ಗೋಪುರದ ಕೆಳಗೆ ಇರುವ ಹೂವು, ಹಣ್ಣಿನ ಅಂಗಡಿಗಳನ್ನು ತಾತ್ಕಾಲಿಕವಾಗಿ ಇಂದಿರಾ ಕ್ಯಾಂಟೀನ್ ಮುಂಭಾಗದ ಜಾಗಕ್ಕೆ ಸ್ಥಳಾಂತರಿಸಲಾಗುವುದು. ಈ ಸಂಬಂಧ ಸೂಚನೆ ನೀಡಲಾಗಿದೆ' ಎಂದು ತಿಳಿಸಿದರು.**
> -ನಗರಸಭೆ ಆಯುಕ್ತ ವೆಂಕಟೇಶ್ ನಾಗನೂರ

ಸಂಬಂಧ ವ್ಯಾಪಾರಿಗಳಿಗೆ ಸೂಚನೆ

ಹಳೆ ಬಸ್ ನಿಲ್ದಾಣದ ಗಡಿಯಾರ ಗೋಪುರ ನವೀಕರಣ ಮಾಡಲು ಗೋಪುರದ ಕೆಳ ಭಾಗದಲ್ಲಿರುವ ಹೂವು, ಹಣ್ಣಿನ ಮಳಿಗೆಗಳನ್ನು ತೆರವುಗೊಳಿಸಲು ನಗರಸಭೆ ಮುಂದಾಗಿದೆ. ಈ ಸಂಬಂಧ ವ್ಯಾಪಾರಿಗಳಿಗೆ ಸೂಚನೆ ನೀಡಲಾಗಿದೆ. ಇದಕ್ಕೆ ವ್ಯಾಪಾರಿಗಳು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ.

ಜಟ್ಟಿ ಕಾಳಗ ರದ್ದಾದ ಬಗ್ಗೆ ನನಗೆ ಮಾಹಿತಿಯಿಲ್ಲ; ಯದುವೀರ್ ಒಡೆಯರ್

• ಉದಯವಾಹಿನಿ, ಮೈಸೂರು

ವಿಜಯಯಾತ್ರೆಗೆ ಸಮಯವಾಗಿದ್ದರಿಂದ ನಾವು ತೆರಳಿದ್ದೆವು. ಆದರೆ, ಯಾವ ವಿಚಾರವಾಗಿ ಜಟ್ಟಿ ಕಾಳಗ ರದ್ದಾಯಿತು ಎಂಬುದು ನನಗೆ ಮಾಹಿತಿ ಇಲ್ಲ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಮೈಸೂರಿನಲ್ಲಿ ಮಾತನಾಡಿದ ಅವರು, ದಸರಾ ಮಹೋತ್ಸವದ ಬಳಿಕ ಕಾರ್ಯಕ್ರಮಗಳ ಶಿಷ್ಟಾಚಾರ ಮತ್ತು ಸುಧಾರಣೆಗಳ ಕುರಿತು ಮಹತ್ವದ ಹೇಳಿಕೆ ನೀಡಿದ್ದಾರೆ. ದಸರಾ ಕಾರ್ಯಕ್ರಮಗಳಲ್ಲಿ ಕೆಲವು ಸುಧಾರಣೆಗಳಾಗಿವೆ ಎಂದು ಒಪ್ಪಿಕೊಂಡ ಅವರು, ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳಿಗೆ ಅವಕಾಶವಿದೆ ಎಂದರು.

ಮುಖ್ಯವಾಗಿ, ನಂದಿಧ್ವಜ ಪೂಜೆ ಸೇರಿದಂತೆ ದಸರಾ ಸಂದರ್ಭದಲ್ಲಿನ ಪ್ರೋಟೋಕಾಲ್ ಮ್ಯಾನೇಜ್‌ಮೆಂಟ್ ಕುರಿತು ಅವರು ಗೊಂದಲ ವ್ಯಕ್ತಪಡಿಸಿದ್ದಾರೆ. ಏನು ಶಿಷ್ಟಾಚಾರ ಎಂಬುದು ಸ್ಪಷ್ಟವಾಗಿ ಯಾರಿಗೂ ತಿಳಿದಿಲ್ಲ. ಸರ್ಕಾರವೇ ಅಧಿಕೃತ ಶಿಷ್ಟಾಚಾರ ರೂಪಿಸಿ ಅದನ್ನು ಮುಂಬರುವ ವರ್ಷಗಳಲ್ಲಿ ಅನುಸರಿಸಬೇಕು ಎಂದು ಯದುವೀರ್ ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

ನಂದಿಧ್ವಜ ಪೂಜೆ ವೇಳೆ ಸಚಿವರನ್ನು ತಡೆದ ಘಟನೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, ಇದು ಸರ್ಕಾರ ನಡೆಸುವ ಕಾರ್ಯಕ್ರಮವಾಗಿರುವುದರಿಂದ ಸರ್ಕಾರವೇ ನಿರ್ಧಾರ ಕೈಗೊಳ್ಳಬೇಕು ಎಂದರು.

ಅತಿಥಿಗಳಾಗಿ ಬರುವ ಅಕ್ಕಪಕ್ಕದ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಸೂಕ್ತ ಶಿಷ್ಟಾಚಾರ ರೂಪಿಸುವ ಅಗತ್ಯವನ್ನೂ ಅವರು ಪ್ರಸ್ತಾಪಿಸಿದರು.

9.30ರಿಂದ 10.10ಕ್ಕೆ ಲಗ್ನದಲ್ಲಿ ಜಟ್ಟಿ ಕಾಳಗ ಮುಗಿಸಬೇಕಿತ್ತು. ನಮಗೆ ವಿಜಯಯಾತ್ರೆಗೆ ಸಮಯವಾಗುತ್ತಿದ್ದರಿಂದ ಅದಕ್ಕೆ ತೆರಳಿದೆವು. ಈ ವಿಚಾರದ ವಾಸ್ತವ ನನಗೆ ಗೊತ್ತಿಲ್ಲ. ವರದಿ ಬಂದ ನಂತರ ಪ್ರತಿಕ್ರಿಯಿಸುತ್ತೇನೆ. ಅರಮನೆ ಭದ್ರತೆಯನ್ನು ಬೇರೆಯವರಿಗೆ ವಹಿಸಿದ್ದು, ಅಲ್ಲಿನ ಪೊಲೀಸ್ ಸಿಬ್ಬಂದಿಯನ್ನು ನೇಮಿಸಲಾಗಿರುತ್ತದೆ. ಇದರಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ ನಮಗೆ ಗೊತ್ತಿಲ್ಲ ಎಂದರು

ಚಿರತೆ ರಕ್ಷಣೆಗೆ ಹೋದ ಅರಣ್ಯ ಇಲಾಖೆ ವೈದ್ಯರ ಮೇಲೆ ಹಲ್ಲೆ FIR

• ಉದಯವಾಹಿನಿ, ತುಮಕೂರು

ಚಿರತೆ ರಕ್ಷಣಾ ಕಾರ್ಯಾಚರಣೆ ವೇಳೆ ವನ್ಯಜೀವಿ ವೈದ್ಯರ ಮೇಲೆ ಗುಂಪೊಂದು ಹಲ್ಲೆ ನಡೆಸಿದ ಆರೋಪದ ಹಿನ್ನೆಲೆಯಲ್ಲಿ 15 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ತುಮಕೂರು ಜಿಲ್ಲೆಯ ತಿಮ್ಮಸಂದ್ರ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಗಾಯಗೊಂಡಿರುವ ವೈದ್ಯ ಡಾ. ಪ್ರಯಾಗ್ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮಕ್ಕೆ ನುಗ್ಗಿದ್ದ ಚಿರತೆ ಕೋಳಿಗಳನ್ನು ಬೇಟೆಯಾಡಲು ಬಂದಿತ್ತು ಎನ್ನಲಾಗಿದೆ.

ಈ ವೇಳೆ ನಾಯಿಗಳು ಅದನ್ನು ಅಟ್ಟಿಸಿಕೊಂಡು ಹೋಗಿದ್ದರಿಂದ ಚಿರತೆ ತೆಂಗಿನ ಮರ ಏರಿತ್ತು. ವಿಷಯ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿ ಮರುದಿನ ಬೆಳಗ್ಗೆ ಗ್ರಾಮಕ್ಕೆ ತೆರಳಿ ಚಿರತೆಯನ್ನು ರಕ್ಷಿಸುವ ಕಾರ್ಯಾಚರಣೆ ಆರಂಭಿಸಿದ್ದರು.

ಚಿರತೆಯನ್ನು ತಕ್ಷಣವೇ ಸೆರೆಹಿಡಿಯಬೇಕು ಎಂದು ಪಟ್ಟು ಹಿಡಿದ ಗ್ರಾಮಸ್ಥರು, ಅರಣ್ಯ ಇಲಾಖೆ ಸಿಬ್ಬಂದಿ ವನ್ಯಜೀವಿಗಳಿಗೆ ಗಾಯಗೊಳಿಸುತ್ತಿದ್ದಾರೆ ಎಂದು ಆರೋಪಿಸಿದರು.

ಈ ವಿಚಾರವಾಗಿ ಮಾತಿನ ಚಕಮಕಿ ಆರಂಭವಾಗಿ, ಬಳಿಕ ಘರ್ಷಣೆಗೆ ತಿರುಗಿತು. ಈ ವೇಳೆ ವನ್ಯಜೀವಿ ವೈದ್ಯ ಡಾ. ಪ್ರಯಾಗ್ ಅವರ ಮೇಲೆ ಹಲ್ಲೆ ನಡೆದಿದ್ದು, ಅವರು ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ಹಲವು ಬಾರಿ ಮನವಿ
ಕಾರ್ಯಾಚರಣೆ ನಡೆಯುತ್ತಿದ್ದ ಸ್ಥಳದಿಂದ ದೂರ ಸರಿಯುವಂತೆ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರು ಹಲವು ಬಾರಿ ಮನವಿ ಮಾಡಿದರೂ ಗ್ರಾಮಸ್ಥರು ಅಲ್ಲಿಂದ ತೆರಳಲು ನಿರಾಕರಿಸಿದರು ಎನ್ನಲಾಗಿದೆ.

ಗ್ರಾಮಸ್ಥರು ಮತ್ತು ಅರಣ್ಯ ಸಿಬ್ಬಂದಿ ನಡುವೆ ಗಲಾಟೆ ನಡೆಯುತ್ತಿದ್ದ ಸಂದರ್ಭದಲ್ಲಿ ತೆಂಗಿನ ಮರದ ಮೇಲಿದ್ದ ಚಿರತೆ ಕೆಳಕ್ಕೆ ಹಾರಿ ಸಮೀಪದ ಅರಣ್ಯದ ಕಡೆಗೆ ಓಡಿಹೋಯಿತು. ಹೀಗಾಗಿ, ಚಿರತೆಯನ್ನು ರಕ್ಷಿಸಿ ಸೆರೆಹಿಡಿಯುವ ಕಾರ್ಯಾಚರಣೆ ಪೂರ್ಣಗೊಳ್ಳಲಿಲ್ಲ.

ಘಟನೆಯ ಬಳಿಕ ಪೊಲೀಸರು ಡ್ರೋನ್ ದೃಶ್ಯಾವಳಿಗಳನ್ನು ಪರಿಶೀಲಿಸಿ, ಹಲ್ಲೆಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಗ್ರಾಮಸ್ಥರನ್ನು ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ 15 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಅಲ್ಲಿಪುರ ಬಳಿ ಲಘು ಭೂಕಂಪ; ರಿಕ್ಟರ್ ಮಾಪಕದಲ್ಲಿ 2.9 ತೀವ್ರತೆ ದಾಖಲು

• ಉದಯವಾಹಿನಿ, ಚಿಕ್ಕಬಳ್ಳಾಪುರ

ತಾಲ್ಲೂಕಿನಲ್ಲಿ ಭೂಕಂಪನ ಸಂಭವಿಸಿದ ಬೆನ್ನಲ್ಲೇ ಇಂದು ಗೌರಿಬಿದನೂರು ತಾಲ್ಲೂಕಿನ ಅಲ್ಲಿಪುರ ಬಳಿಯ ವೀರಮ್ಮನಹಳ್ಳಿ ನಡುವಿನ ಪ್ರದೇಶದಲ್ಲೂ ಭೂಮಿ ಕಂಪಿಸಿದೆ. ರಿಕ್ಟರ್ ಮಾಪಕದಲ್ಲಿ 2.9 ತೀವ್ರತೆಯ ಕಂಪನ ದಾಖಲಾಗಿದೆ ಎಂದು ರಾಷ್ಟ್ರೀಯ ಭೂಕಂಪನಶಾಸ್ತ್ರ ಕೇಂದ್ರ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿದೆ.ಅಕ್ಟೋಬರ್ 24ರಂದು ನಸುಕಿನ ಜಾವ 3 ಗಂಟೆ 29 ನಿಮಿಷ 42 ಸೆಕೆಂಡ್‌ಗೆ ಭೂಕಂಪ ಸಂಭವಿಸಿದೆ ಎಂದು ಭೂಕಂಪನದ ದತ್ತಾಂಶ ತಿಳಿಸಿದೆ.

ಭೂಕಂಪದ ಕೇಂದ್ರಬಿಂದು 13.497 ಅಕ್ಷಾಂಶ ಹಾಗೂ 77.420 ರೇಖಾಂಶದಲ್ಲಿದ್ದು, ಭೂಮಿಯ ಮೇಲ್ಮೈಯಿಂದ 5 ಕಿಲೋಮೀಟರ್ ಆಳದಲ್ಲಿ ಕಂಪನ ದಾಖಲಾಗಿದೆ. ಭೂಕಂಪನದ ತೀವ್ರತೆ ಕಡಿಮೆ ಮಟ್ಟದಲ್ಲಿದ್ದು, ಘಟನೆಯನ್ನು ಪರಿಶೀಲಿಸಲಾಗಿದೆ ಎಂದು ದತ್ತಾಂಶದಲ್ಲಿ ಉಲ್ಲೇಖಿಸಲಾಗಿದೆ. ಈ ಘಟನೆಯಿಂದ ಯಾವುದೇ ಹಾನಿ ಅಥವಾ ಜನರಿಗೆ ಕಂಪನದ ಅನುಭವವಾಗಿದೆಯೇ ಎಂಬ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

ದೊಡ್ಡಬಳ್ಳಾಪುರದಲ್ಲಿ ಲಘು ಭೂಕಂಪನ: ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಬೆಳಗ್ಗೆ 9:01 ನಿಮಿಷಕ್ಕೆ ಈ ಭೂಕಂಪನ ಸಂಭವಿಸಿತ್ತು. ರಿಕ್ಟರ್ ಮಾಪಕದಲ್ಲಿ 3.0 ರಷ್ಟು ತೀವ್ರತೆಯ ಕಂಪನ ದಾಖಲಾಗಿತ್ತು ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ತಿಳಿಸಿತ್ತು.

ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬಗೆರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ತಿಮ್ಮೋಜನಹಳ್ಳಿ ಗ್ರಾಮದಿಂದ ಉತ್ತರಕ್ಕೆ ಸುಮಾರು 0.5 ಕಿ.ಮೀ ದೂರದಲ್ಲಿ ಹಾಗೂ ಭೂಮಿಯ ಆಳದಲ್ಲಿ 10 ಕಿ.ಮೀ ಪ್ರದೇಶದಲ್ಲಿ ಕಂಪನದ ಕೇಂದ್ರ ಬಿಂದು ಪತ್ತೆಯಾಗಿತ್ತು ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮಾಹಿತಿ ನೀಡಿತ್ತು.

ಭೂಕಂಪನದ ತೀವ್ರತೆಯು ತೀರಾ ಕಡಿಮೆ ಇದೆ. ಕೇಂದ್ರಬಿಂದುವಿನಿಂದ ಸುಮಾರು 20 ರಿಂದ 30 ಕಿ.ಮೀ ಸುತ್ತಳತೆ ಪ್ರದೇಶದಲ್ಲಿ ಸಣ್ಣ ಪ್ರಮಾಣದ ಕಂಪನ ಅಥವಾ ಕಂಪನಗಳ ಅನುಭವವಾಗಿರಬಹುದು.

ನಾಡದೇವತೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ರಥೋತ್ಸವದ ಸಂಭ್ರಮ

• ಉದಯವಾಹಿನಿ, ಮೈಸೂರು

ಚಾಮುಂಡಿ ಬೆಟ್ಟದಲ್ಲಿ ಸುರಿಯುತ್ತಿದ್ದ ಜೋರು ಮಳೆಯ ನಡುವೆ ಸಾವಿರಾರು ಭಕ್ತರ ಜಯಘೋಷಗಳೊಂದಿಗೆ ನಾಡಿನ ಅಧಿದೇವತೆ ಚಾಮುಂಡೇಶ್ವರಿ ದೇವಿಯ ರಥೋತ್ಸವವು ಶನಿವಾರ ಸಂಭ್ರಮದಿಂದ ನಡೆಯಿತು. ಸಿಂಹವಾಹಿನಿ ಅಲಂಕಾರದಲ್ಲಿ ಕಂಗೊಳಿಸುತ್ತಿದ್ದ ಉತ್ಸವ ಮೂರ್ತಿಗೆ ರಾಜವಂಶಸ್ಥ ಹಾಗೂ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪೂಜೆ ಸಲ್ಲಿಸಿದರು. ನಂತರ ಮೂರ್ತಿಯನ್ನು ರಥದೊಳಗೆ ಪ್ರತಿಷ್ಠಾಪಿಸಲಾಯಿತು. ಯದುವೀರ್ ಅವರು ರಥದ ಹಗ್ಗ ಎಳೆದು ರಥೋತ್ಸವಕ್ಕೆ ಚಾಲನೆ

ಉದಯವಾಹಿನಿ ಚಿತ್ರ

ನೀಡಿದರು. ಚಾಮುಂಡೇಶ್ವರಿಗೆ ಜಯವಾಗಲಿ ಎಂಬ ಘೋಷಣೆ, ವಾದ್ಯಗೋಷ್ಠಿಗಳ ನಾದ, ಸಿಡಿಮದ್ದಿನ ಸದ್ದು, ಕಲಾ ತಂಡಗಳ ಪ್ರದರ್ಶನ ರಥೋತ್ಸವದ ರಂಗು ಹೆಚ್ಚಿಸಿತು. ಸಾವಿರಾರು ಭಕ್ತರು ಒಕ್ಕೊರಲಿನಿಂದ ನಾಡದೇವತೆಗೆ ಜೈಕಾರ ಕೂಗುತ್ತಾ, ಬಾಳೆಹಣ್ಣು, ಜವನ ಎಸೆದು ಪ್ರಾರ್ಥಿಸಿದರು.

ಕುಶಾಲತೋಪು: ತಾಯಿ ಚಾಮುಂಡೇಶ್ವರಿಗೆ ಜೈಕಾರ ಮೊಳಗಿಸಿದ ಭಕ್ತರು ರಥವನ್ನು ಎಳೆಯಲು ಆರಂಭಿಸಿದರು. ರಥ ಚಲಿಸುತ್ತಿದ್ದಂತೆ 21 ಬಾರಿ ಕುಶಾಲುತೋಪು ಸಿಡಿಸಿದ ಸಶಸ್ತ್ರ ಮೀಸಲು ಪಡೆ ಸಿಬ್ಬಂದಿ ದೇವಿಗೆ ಗೌರವ ಸಲ್ಲಿಸಿದರು. ರಥಬೀದಿಯ ಇಕ್ಕೆಲಗಳಲ್ಲಿ ನೆರೆದಿದ್ದ ಭಕ್ತಸಾಗರದ ಮಧ್ಯೆ ಚಾಮುಂಡೇಶ್ವರಿ ರಥ ಸಾಗಿಬಂತು. 45 ನಿಮಿಷಗಳವರೆಗೆ ಸಾಗಿಬಂದ ರಥ ಚಾಮುಂಡೇಶ್ವರಿ ದೇವಸ್ಥಾನದ ಪ್ರವೇಶದ್ವಾರ ತಲುಪಿತು. ಅಲ್ಲಿ ನೆರೆದಿದ್ದ ಭಕ್ತರು, ರಥದ ಹಗ್ಗ ಮುಟ್ಟಿ ಪುನೀತರಾದರು. ಮತ್ತೆ ಕೆಲವರು ನಮಸ್ಕರಿಸಿದರು. ರಥಕ್ಕೆ ಸಿಂಗರಿಸಿದ್ದ ಹೂವುಗಳನ್ನು ಪಡೆಯಲು ಮುಗಿಬಿದ್ದರು. ಬೆಟ್ಟದ ಸುತ್ತಲಿನ ಗ್ರಾಮಗಳಾದ ಉತ್ತನಹಳ್ಳಿ, ಹೊಸ ಹುಂಡಿ, ಬಂಡಿಪಾಳ್ಯ, ಲಲಿತಾದ್ರಿಪುರ, ಆಲನಹಳ್ಳಿ ಸೇರಿದಂತೆ ವಿವಿಧೆಡೆಯಿಂದ ಭಕ್ತರು ಜಮಾಯಿಸಿದ್ದರು. ರಥೋತ್ಸವ ಹಾಗೂ ನಂತರದ ದೇಗುಲ ದರ್ಶನಕ್ಕೆ ನೂಕುನುಗ್ಗಲು ಉಂಟಾಗಿತ್ತು.

ಮುಂಜಾಗ್ರತಾ ಕ್ರಮವಾಗಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿತ್ತು. ರಥದ ಸುತ್ತಲೂ, ಹಗ್ಗದ ಹಿಡಿದು ಜನಸಂದಣಿಯಾಗದಂತೆ ತಡೆದರು.

ಹೆದ್ದಾರಿಯಲ್ಲಿ 'ಹಸಿರು ಶಾಲುಗಳ ಆರ್ಭಟ; ರೈತರ ಪ್ರತಿಭಟನೆ

ಬೇಡಿಕೆ ಈಡೇರಿಸುವವರೆಗೆ ಹೋರಾಟ ನಿಲ್ಲುವುದಿಲ್ಲ ಎಂದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು

• ಉದಯವಾಹಿನಿ, ಶ್ರೀರಂಗಪಟ್ಟಣ

ನೇಗಿಲ ಹಿಡಿದ, ಹೊಲದೊಳು ಹಾಡುತ, ಉಳುವ ಯೋಗಿಯ ನೋಡಲ್ಲಿ... ಹಾಡು ಶುರುವಾಗುತ್ತಿದ್ದಂತೆಯೇ ಹಸಿರು ಶಾಲುಗಳ ಅಲೆ ತೇಲಿ ಬಂತು. ಪ್ರತಿಭಟನೆ ನಡೆಸುತ್ತಿದ್ದ ಅಷ್ಟೂ ರೈತರು ಮತ್ತು

1 ಶಾಲುಗಳನ್ನು ಹುರುಪಿನಿಂದ ಬೀಸಿದರು
2 ಕಬ್ಬು ಮತ್ತು ಹಾಲಿಗೆ ವೈಜ್ಞಾನಿಕ ಬೆಲೆ
3 ಸರ್ವಿಸ್ ರಸ್ತೆಯಲ್ಲಿನ ಸಂಚಾರ ಬಂದ್

ರೈತ ಮುಖಂಡರು ತಮ್ಮ ಶಾಲುಗಳನ್ನು ಹುರುಪಿನಿಂದ ಬೀಸಿದರು. ಸಿಪಿಐನ ಕೆಂಬಾವುಟ ಮತ್ತು ಡಿಎಸ್‌ಎಸ್‌ನ ನೀಲಿ ಬಾವುಟಗಳೂ ರಾರಾಜಿಸಿದವು. ರಾಜ್ಯ ಮತ್ತು ಕೇಂದ್ರ ಸರ್ಕಾರ ಹಾಗೂ ರೈತ ಸಂಘದ ಪರ ಘೋಷಣೆಗಳು ಮೊಳಗಿದವು.

ಈ ದೃಶ್ಯ ಕಂಡು ಬಂದಿದ್ದು, ತಾಲ್ಲೂಕಿನ ಗಣಂಗೂರು ಸಮೀಪ ಇರುವ ಬೆಂಗಳೂರು ಮೈಸೂರು ರಾಷ್ಟ್ರೀಯ ಹೆದ್ದಾರಿಯ ಟೋಲ್ ಬಳಿ. ಕಬ್ಬು ಮತ್ತು ಹಾಲಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಬೇಕು ಹಾಗೂ ಕೃಷಿ ಸಾಲ ಮನ್ನಾ ಮಾಡುವಂತೆ ಆಗ್ರಹಿಸಿ ರೈತಸಂಘ ಹಾಗೂ ಇನ್ನಿತರ ಸಂಘಟನೆಗಳ ಕಾರ್ಯಕರ್ತರು ಆಗ್ರಹಿಸಿದರು. ರೈತಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮತ್ತು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ರೈತ ಕಹಳೆ ಮೊಳಗಿತು. ಹಸಿರು ಸೈನಿಕರು ಹೆದ್ದಾರಿಗೆ ದಾಂಗುಡಿ ಇಟ್ಟರು. ಬೇಡಿಕೆ

ಉದಯವಾಹಿನಿ ಚಿತ್ರ

> **ಕೇಂದ್ರ ಸರ್ಕಾರ ಜೀ ಟಿವಿ ನೆಟ್‌ವರ್ಕ್‌ನ 27 ಸಾವಿರ ಕೋಟಿ ಸಾಲದ ಪೈಕಿ 20,500 ಕೋಟಿ ಸಾಲ ಮನ್ನಾಡಿದೆ. ರಾಜ್ಯದಲ್ಲಿ 80 ಲಕ್ಷ ರೈತರಿದ್ದು, 2.10 ಲಕ್ಷ ಕೋಟಿ ಕೃಷಿ ಸಾಲವಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜತೆಯಾಗಿ ಈ ಸಾಲವನ್ನು ಮನ್ನಾ ಮಾಡಬೇಕು' ಎಂದು ಆಗ್ರಹಿಸಿದರು.-ಕಾರ್ಯಾಧ್ಯಕ್ಷ ವೀರಸಂಗಯ್ಯ**

ಈಡೇರಿಸುವವರೆಗೆ ಹೋರಾಟ ನಿಲ್ಲುವುದಿಲ್ಲ ಎಂದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು.

ಎರಡು ತಾಸು ಹೆದ್ದಾರಿ ಮತ್ತು ಸರ್ವಿಸ್ ರಸ್ತೆಯಲ್ಲಿನ ಸಂಚಾರ ಬಂದ್ ಆಯಿತು. ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಿಗಳಿಂದ ಆಗಮಿಸಿದ್ದ ರೈತರು ಟೋಲ್ ಉದ್ದಕ್ಕೂ ಕುಳಿತು ಪ್ರತಿಭಟಿಸಿದರು. ರೈತರ ಮತ್ತೊಂದು ಗುಂಪು ಸರ್ವಿಸ್ ರಸ್ತೆಯಲ್ಲಿ ಸಂಚರಿಸುತ್ತಿದ್ದ ವಾಹನಗಳನ್ನು ತಡೆದು ನಿಲ್ಲಿಸಿತು. ಶಾಸಕ ರಮೇಶ ಬಂಡಿಸಿದ್ದೇಗೌಡ, ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎ.ಎಲ್. ಕೆಂಪೂಗೌಡ, ಮುಖಂಡ ಹೊನ್ನೂರು ಪ್ರಕಾಶ್ ಮಾತನಾಡಿದರು. ಜಿಲ್ಲಾಧಿಕಾರಿ ಕುಮಾರ, ಜಿ.ಪಂ. ಸಿಇಒ ಕೆ.ಆರ್. ನಂದಿನಿ, ಎಸ್ಪಿ ವಿ.ಜೆ. ಶೋಭಾರಾಣಿ ಹಾಗೂ ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು. ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಸಚಿವ ಎನ್.

ರೈತರು ವಾಗ್ವಾದ
ವಾಹನ ತಡೆಯುತ್ತಿದ್ದ ವೇಳೆಯಲ್ಲಿ ಪೊಲೀಸರ ಮತ್ತು ರೈತರು ನಡುವೆ ತಳ್ಳಾಟ, ನೂಕಾಟ ನಡೆಯಿತು. ಒಂದು ಹಂತದಲ್ಲಿ ಪೊಲೀಸರ ಜತೆ ರೈತರು ವಾಗ್ವಾದಕ್ಕಿಳಿದರು. ಆಕ್ರೋಶವನ್ನೂ ವ್ಯಕ್ತಪಡಿಸಿದರು.

ಚಲುವರಾಯಸ್ವಾಮಿ ಅವರಿಗೆ ಹಕ್ಕೊತ್ತಾಯ ಸಲ್ಲಿಸಿದರು. ಪ್ರತಿ ಟನ್ ಕಬ್ಬು ಬೆಳೆಯಲು 4 ಸಾವಿರ ಖರ್ಚಾಗುತ್ತಿದ್ದು, ಸರ್ಕಾರ 6,150 ಬೆಲೆ ನಿಗದಿ ಮಾಡಬೇಕು. ಸಕ್ಕರೆ ಕಾರ್ಖಾನೆಗಳು ನಿಗದಿ ಮಾಡಿರುವ ಕಬ್ಬಿನ ಇಳುವರಿಯಲ್ಲಿನ 10.25 ಮಾನದಂಡದಿಂದ ರೈತರಿಗೆ ನಷ್ಟವಾಗುತ್ತಿದ್ದು, ಈ ಪ್ರಮಾಣವನ್ನು 8.5ಕ್ಕೆ ಇಳಿಸಬೇಕು. ಈಗಾಗಲೇ ಭರವಸೆ ನೀಡಿರುವಂತೆ ಹಾಲಿನ ದರ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ರೈತರಿಗೆ ಶಕ್ತಿ ನೀಡುವ ಕೆಲಸದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ, ಎಲ್ಲಾ ಪಕ್ಷಗಳು ಒಟ್ಟಾಗಿ ಕೇಂದ್ರ ಸರ್ಕಾರದ ಮುಂದೆ ರೈತರ ಸಮಸ್ಯೆಗಳನ್ನು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು' ಎಂದು ಸಚಿವ ಎನ್. ಚಲುವರಾಯಸ್ವಾಮಿ ಆಶ್ವಾಸನೆ ನೀಡಿದರು. ಸಕ್ಕರೆ ಕಾರ್ಖಾನೆಗಳು ಪ್ರೋತ್ಸಾಹಧನ ನೀಡುವ ಸಂಬಂಧ ನ್ಯಾಯಾಲಯದ ಮೂಲಕ ತಡೆಯಾಜ್ಞೆ ತಂದಿವೆ. ಈ ತಡೆಯಾಜ್ಞೆ ರದ್ದುಗೊಳಿಸಲು ರಾಜ್ಯ ಸರ್ಕಾರವು ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿದೆ ಎಂದು ವಿವರಿಸಿದರು.

ಮಿನಿ ನ್ಯೂಸ್

ಚೋಳರ ಕಾಲದ 'ದೊಡ್ಡ ಗುಡಿ' ಖ್ಯಾತಿಯ ದೇಗುಲ

• ಉದಯವಾಹಿನಿ, ಹಾರೋಹಳ್ಳಿ

ಉದಯವಾಹಿನಿ ಚಿತ್ರ

ಪಟ್ಟಣದ ಬ್ರಾಹ್ಮಣರ ಬೀದಿಯಲ್ಲಿರುವ ಅರುಣಾಚಲೇಶ್ವರ ಸ್ವಾಮಿ ದೇವಾಲಯವು ಧಾರ್ಮಿಕ ನಂಬಿಕೆ, ಐತಿಹಾಸಿಕ ಪರಂಪರೆ ಹಾಗೂ ಪ್ರಾಚೀನ ಶಿಲ್ಪಕಲೆಯ ಸೊಬಗನ್ನು ತನ್ನ ಒಡಲಿನಲ್ಲಿ ಉಳಿಸಿಕೊಂಡಿರುವ ಪ್ರಸಿದ್ಧ ಪುಣ್ಯಕ್ಷೇತ್ರವಾಗಿದೆ. ಚೋಳರ ಕಾಲದಲ್ಲಿ ಸುಮಾರು 600 ವರ್ಷಗಳ ಹಿಂದೆ ನಿರ್ಮಾಣವಾಗಿರುವ ಈ ದೇವಾಲಯ ಸ್ಥಳೀಯವಾಗಿ 'ದೊಡ್ಡ ಗುಡಿ' ಎಂದೇ ಪ್ರಸಿದ್ಧಿಯಾಗಿದೆ.

ಈ ಭಾಗದ ಶಿವಭಕ್ತರ ಪ್ರಮುಖ ಆರಾಧನಾ ಕೇಂದ್ರವಾಗಿರುವ ದೇವಾಲಯವು, ಹಾರೋಹಳ್ಳಿಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಗುರುತಿನ ಭಾಗವಾಗಿದೆ. ಪ್ರಾಚೀನ ಗುಹಾ ಸ್ವರೂಪದ ದೇವಾಲಯವು ತನ್ನ ವಿಶಿಷ್ಟ ವಾಸ್ತುಶಿಲ್ಪ, ಕಲ್ಲಿನ ಕಂಬಗಳ ಕೆತ್ತನೆ ಹಾಗೂ ವಿವಿಧ ಶಿವಲಿಂಗಗಳಿಂದಾಗಿ ಭಕ್ತರ ಗಮನ ಸೆಳೆಯುತ್ತಿದೆ.

ಹಿಂದೆ ದೇವಾಲಯಗಳು ಕೇವಲ ಪೂಜಾ ಸ್ಥಳಗಳಾಗಿರದೆ ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಕೇಂದ್ರಗಳಾಗಿದ್ದವು. ಹಬ್ಬ, ಹರಿದಿನ, ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಜನರನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದ್ದವು. ಅದೇ ರೀತಿ ಅರುಣಾಚಲೇಶ್ವರ ದೇವಾಲಯವೂ ಸ್ಥಳೀಯರ ಧಾರ್ಮಿಕ ಬದುಕಿನಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಸುಮಾರು 10ನೇ ಶತಮಾನ ಅಥವಾ 60 ವರ್ಷಗಳ ಹಿಂದೆ ದೇವಾಲಯ ನಿರ್ಮಾಣವಾಗಿದೆ.

ವಿಜಯನಗರ ಶೈಲಿ ವಾಸ್ತುಶಿಲ್ಪ: ದೇವಾಲಯದ ವಾಸ್ತುಶಿಲ್ಪವು ವಿಜಯನಗರ ಶೈಲಿಯ ಪ್ರಭಾವವನ್ನು ಹೊಂದಿದೆ. ದೇವಾಲಯದ ಮುಖಮಂಟಪ, ಗರ್ಭಗುಡಿ, ಹೊರಮಂಟಪ ಹಾಗೂ ಕಲ್ಲಿನ ಕಂಬಗಳು ಪ್ರಾಚೀನ ನಿರ್ಮಾಣ ಕಲೆಯ ವೈಶಿಷ್ಟ್ಯವನ್ನು ಪರಿಚಯಿಸುತ್ತವೆ. ಕಲ್ಲುಗಳನ್ನು ಬಳಸಿ ನಿರ್ಮಿಸಿರುವ ದೇವಾಲಯದ ವಿವಿಧ ಭಾಗಗಳು ಅಂದಿನ ಶಿಲ್ಪಿಗಳು ಹೊಂದಿದ್ದ ಕೌಶಲಕ್ಕೆ ಸಾಕ್ಷಿಯಾಗಿವೆ.

ಮಹಿಳೆಯರು ಸ್ವಾವಲಂಬಿ ಜೀವನ ನಡೆಸುವ ಮೂಲಕ ಸಮಾಜದ ಅಭಿವೃದ್ಧಿಯಲ್ಲಿ

ಉದಯವಾಹಿನಿ ಚಿತ್ರ

• ಉದಯವಾಹಿನಿ,ಮಂಡ್ಯ

ಮಹಿಳೆಯರು ಸ್ವಾವಲಂಬಿ ಜೀವನ ನಡೆಸುವ ಮೂಲಕ ಸಮಾಜದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ' ಎಂದು ಜಲಸಂಪನ್ಮೂಲ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದರು. ನಗರದ ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ಶುಕ್ರವಾರ ಮೈಸೂರು ದಸರಾ ಮೆರವಣಿಗೆಯಲ್ಲಿ ಮಂಡ್ಯ ಜಿಲ್ಲಾ ಪಂಚಾಯಿತಿ ವತಿಯಿಂದ ಪ್ರದರ್ಶಿಸಿದ ಸ್ತಬ್ಧಚಿತ್ರವು (ಅಸ್ಮಿತೆ ಸ್ತ್ರೀಶಕ್ತಿಯ ಅನಾವರಣ) ಜನಮೆಚ್ಚುಗೆಗೆ ಪಾತ್ರವಾದ ಹಿನ್ನೆಲೆಯಲ್ಲಿ ಸ್ತಬ್ಧಚಿತ್ರವನ್ನು ವೀಕ್ಷಿಸಿ ಅವರು ಮಾತನಾಡಿದರು. ಮಹಿಳೆಯರ ಸಬಲೀಕರಣವು ಸಮಾಜದ ಪ್ರಗತಿಯ ಪ್ರಮುಖ ಆಧಾರ. ಇಂದು ಶಿಕ್ಷಣ ಪಡೆದ ಮಹಿಳೆಯರಷ್ಟೇ ಅಲ್ಲದೆ, ಔಪಚಾರಿಕ ಶಿಕ್ಷಣದಿಂದ ವಂಚಿತರಾದ ಮಹಿಳೆಯರೂ ಕೃಷಿ, ಹೈನುಗಾರಿಕೆ ಸೇರಿದಂತೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಆರ್ಥಿಕ ಸ್ವಾವಲಂಬನೆ ಸಾಧಿಸುತ್ತಿದ್ದಾರೆ ಎಂದರು. ಮಹಿಳೆಯರಿಗೆ ಸೂಕ್ತ ಪ್ರೋತ್ಸಾಹ ಮತ್ತು ಅವಕಾಶಗಳನ್ನು ಕಲ್ಪಿಸಿದಾಗ ಅವರು ತಮ್ಮ ಸಾಮರ್ಥ್ಯವನ್ನು ಸಮರ್ಥವಾಗಿ ಅನಾವರಣಗೊಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ವೈಯಕ್ತಿಕ ಪ್ರಗತಿಯೊಂದಿಗೆ ಸಮಾಜದ ಅಭಿವೃದ್ಧಿಗೂ ಕೊಡುಗೆ ನೀಡಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಯುವಕರು ಹೆಚ್ಚಿನ ಸಂಖ್ಯೆಯಲ್ಲಿ 'ಭಾರತ್ ಜೋಡೋ ಯುವಕರ ಸಂಘದಲ್ಲಿ ನೋಂದಣಿ ಮಾಡಿಕೊಂಡು ಸಂಘಟನೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಶಾಸಕರಾದ ಪಿ. ರವಿಕುಮಾರ್ ಕರೆ ನೀಡಿದರು.

ಅಧಿಕಾರ ಹೋದ ಮೇಲೆ ಪಿತೂರಿ ಸಿದ್ದರಾಮಯ್ಯ

• ಉದಯವಾಹಿನಿ,ಮೈಸೂರು

ನನ್ನ ವಿರುದ್ಧ ಪಿತೂರಿ ನಡೆಸಲಾಗಿದೆ. ಅದರ ಭಾಗವೇ ಸ್ಟಿಂಗ್ ಆಪರೇಷನ್. ಅದು ಸುಳ್ಳು ಕೇಸ್. ಬ್ಲ್ಯಾಕ್‌ಮೇಲ್‌ಗೆ ಮಾಡಿರುವಂತಹದು' ಎಂದು ಎಐಸಿಸಿ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ ಹೇಳಿದರು. ರಾಜ್ಯ ರಾಜಕಾರಣದಲ್ಲಿ ತಲ್ಲಣ ಎಬ್ಬಿಸಿರುವ 'ಸ್ಟಿಂಗ್' ಕಾರ್ಯಾಚರಣೆ ಕುರಿತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಲವು ಆರೋಪಗಳನ್ನು ಮಾಡಿದ್ದರು. ಈ ಬಗ್ಗೆ ಒಂದೆರಡು ವಾಕ್ಯ ಮಾತನಾಡಿದ್ದ ಸಿದ್ದರಾಮಯ್ಯ, ಬಳಿಕ ಮೌನಕ್ಕೆ ಶರಣಾಗಿದ್ದರು. ಕಾರ್ಯನಿಮಿತ್ತ ಇಲ್ಲಿಗೆ ಭೇಟಿ ನೀಡಿದ್ದ ಅವರು, 'ಸ್ಟಿಂಗ್' ಕಾರ್ಯಾಚರಣೆ ಬಗ್ಗೆ ಮೊದಲ ಬಾರಿಗೆ ಸುದ್ದಿಗಾರರ ಜತೆ ವಿವರವಾಗಿ ಮಾತನಾಡಿದ್ದಾರೆ. ಅವರ ಮಗ ಹಾಗೂ ನಗರಾಭಿವೃದ್ಧಿ ಸಚಿವ ಯತೀಂದ್ರ ಕೂಡ, 'ಇದರ ಹಿಂದೆ ನಮ್ಮ ಪಕ್ಷದವರೇ ಇದ್ದಾರೆ' ಎಂದು ಹೇಳಿದರು. ಯತೀಂದ್ರ ಹೇಳಿಕೆಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿರುವ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, 'ಈಗಾಗಲೇ ಕೆಲವರಿಗೆ ನೋಟಿಸ್ ನೀಡಲು ಸೂಚಿಸಿದ್ದೇನೆ. ಆಪಾದನೆ ಬದಲು ದಾಖಲೆ ಕೊಟ್ಟರೆ ಕ್ರಮ ಕೈಗೊಳ್ಳುತ್ತೇನೆ' ಎಂದು ಪ್ರತಿಪಾದಿಸಿದರು. ಸ್ಟಿಂಗ್ ಹಿಂದೆ ಯಾರಿದ್ದಾರೆ ಎಂಬುದು ಗೊತ್ತಾಗಲೆಂದು, ಇದು ಸುಳ್ಳು ಕೇಸ್ ಎಂಬುದು ತಿಳಿಯಲೆಂದು ಮತ್ತು ಸತ್ಯ ಹೊರಬರಲೆಂದು ನಾನೇ ಪೊಲೀಸರಿಗೆ ದೂರು ನೀಡಿದ್ದೇನೆ ಎಂದರು.

ತಂತ್ರಜ್ಞಾನದಿಂದ ಸಮಸ್ಯೆಗೆ ಪರಿಹಾರ ಹುಡುಕಿ - ಸ್ವಾಮೀಜಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಕ್ಕಬಳ್ಳಾಪುರ

ವಿದ್ಯಾರ್ಥಿಗಳು ಆತ್ಮವಿಶ್ವಾಸ, ಕಠಿಣ ಪರಿಶ್ರಮ ಹಾಗೂ ಸಮರ್ಪಣಾ ಮನೋಭಾವದಿಂದ ಗುರಿ ಸಾಧನೆಗೆ ಶ್ರಮಿಸಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು. ನಗರದ ಎಸ್.ಜೆ.ಸಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಎಂ.ಬಿ.ಎ ಮತ್ತು ಎಂ.ಟೆಕ್ ಪದವಿ ಪ್ರದಾನ ಸಮಾರಂಭ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿದರು. ಶಿಕ್ಷಕರು ಹಾಗೂ ಪೋಷಕರಿಗೆ ವಿದ್ಯಾರ್ಥಿಗಳು ಗೌರವ ನೀಡಬೇಕು. ಅವರ ಮಾರ್ಗದರ್ಶನ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ವಿಜ್ಞಾನಿಗಳು ಸಂಶೋಧನೆ ಮತ್ತು ಅನ್ವೇಷಣೆಗಳ ಮೂಲಕ ಜನರ ಜೀವನಮಟ್ಟ ಸುಧಾರಿಸಲು ಶ್ರಮಿಸುತ್ತಾರೆ. ಜೀವನದಲ್ಲಿ ಏಳುಬೀಳು ಸಹಜ. ಮೊದಲು ಪ್ರತಿಯೊಬ್ಬರೂ ತಮಗೆ ತಾವೇ ಸ್ನೇಹಿತರಾಗಬೇಕು. ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವನ್ನು ಸದ್ಬಳಕೆ ಮಾಡಿಕೊಂಡು, ಭೌತಿಕ ಜ್ಞಾನ ಹಾಗೂ ಆಧ್ಯಾತ್ಮಿಕ ಅರಿವಿನೊಂದಿಗೆ ಉತ್ತಮ ನಿರ್ಧಾರ ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು. ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿಯ ವಿಶಿಷ್ಟ ವಿಜ್ಞಾನಿ ಹಾಗೂ ವಿಮಾನ ಯೋಜನೆ ನಿರ್ದೇಶಕ ನಾಗೇಶ್ ಕೆ.ಎಸ್. ಮಾತನಾಡಿ, 'ಇಂದಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ತಂತ್ರಜ್ಞಾನ ಅಭಿವೃದ್ಧಿಗೆ ವಿದ್ಯಾರ್ಥಿಗಳು ಕೊಡುಗೆ ನೀಡಬೇಕು. ರಕ್ಷಣಾ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬಹುಶಿಸ್ತೀಯ ಜ್ಞಾನ ಮತ್ತು ಪ್ರಾಯೋಗಿಕ ಕೌಶಲ ಬೆಳೆಸಿಕೊಳ್ಳಬೇಕು. ಸಮಾಜದ ಸವಾಲುಗಳಿಗೆ ಸ್ಪಂದಿಸುವ ಸಂಶೋಧನೆಗೆ ಆದ್ಯತೆ ನೀಡಬೇಕು' ಎಂದರು. ಎಲ್ ಆಂಡ್ ಟಿ ಪ್ರಿಸಿಷನ್ ಇಂಜಿನಿಯರಿಂಗ್ ಆಂಡ್ ಸಿಸ್ಟಮ್ಸ್ ಏರೋಸ್ಪೇಸ್ ವಿಭಾಗದ ಜಂಟಿ ಪ್ರಧಾನ ವ್ಯವಸ್ಥಾಪಕ ಕಿಶೋರ್ ಶೆಟ್ಟಿ ಮಾತನಾಡಿ, ವಿದ್ಯಾರ್ಥಿಗಳು ಕೃತಜ್ಞತೆಯ ಮನೋಭಾವ ಬೆಳೆಸಿಕೊಳ್ಳಬೇಕು.

ಅಂತರಾಳದಿಂದ.. EDITORIAL

ಅಂಗನವಾಡಿಗಳಿಗೆ ಸ್ವಂತ ಸೂರು: ಸರ್ಕಾರ ತುರ್ತು ಗಮನಹರಿಸಲಿ

ರಾಜ್ಯದ ಬಡ ಮಕ್ಕಳ ಆರೋಗ್ಯ ರಕ್ಷಣೆ ಮತ್ತು ಬುನಾದಿ ಶಿಕ್ಷಣವನ್ನು ಒದಗಿಸುವ ಮಹತ್ತರ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೇ ಈಗ ಬಡವಾಗಿದೆ. ರಾಜ್ಯದಲ್ಲಿ 13 ಸಾವಿರಕ್ಕೂ ಅಧಿಕ ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ರಾಜ್ಯ ಸರ್ಕಾರ ಈ ಕಟ್ಟಡಗಳ ಬಾಡಿಗೆಯ ಅನುದಾನವನ್ನು ನಿಯಮಿತವಾಗಿ ಬಿಡುಗಡೆ ಮಾಡದಿರುವುದರಿಂದ ಹೊಸ ಸಮಸ್ಯೆಯೊಂದು ಸೃಷ್ಟಿಯಾಗಿದೆ. ಬಡ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನೀಡುವ ಜತೆಯಲ್ಲಿ ಅವರಿಗೆ ಬುನಾದಿ ಹಂತದ ಶಿಕ್ಷಣವನ್ನು ಈ ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುತ್ತಿದೆ.

ಕೆಲವೆಡೆ ಸ್ವತಃ ಅಂಗನವಾಡಿ ಕಾರ್ಯಕರ್ತೆಯರೇ ಬಾಡಿಗೆ ಮೊತ್ತವನ್ನು ಪಾವತಿಸಿ ಈ ಮುಜುಗರದಿಂದ ಪಾರಾಗುತ್ತಿದ್ದರೆ, ಮತ್ತೆ ಕೆಲವೆಡೆ ಬಾಡಿಗೆಯನ್ನು ಪಾವತಿಸಲಾಗದೆ ಕಾರ್ಯಕರ್ತೆಯರು ತ್ರಾಸ ಪಡುವಂತಾಗಿದೆ. ಬಾಡಿಗೆ ಪಾವತಿಸದ ಕಾರಣದಿಂದಾಗಿ ಇನ್ನೂ ಕೆಲವೆಡೆ ಅಂಗನವಾಡಿ ಕೇಂದ್ರಗಳು ಕಾರ್ಯ ಸ್ಥಗಿತಗೊಳ್ಳುವ ಆತಂಕ ಎದುರಾಗಿದೆ. ಕಳೆದ 3 ತಿಂಗಳುಗಳಿಂದ ಸರ್ಕಾರ ಹಣಕಾಸು ಮುಗ್ಗಟ್ಟಿನ ನೆಪವೊಡ್ಡಿ ಈ ಅಂಗನವಾಡಿಗಳಿಗೆ ಬಾಡಿಗೆ ಅನುದಾನವನ್ನೇ ಬಿಡುಗಡೆ ಮಾಡಿಲ್ಲ. ಇದರಿಂದ ಸಹಜವಾಗಿ ಅಂಗನವಾಡಿ ಕಾರ್ಯಕರ್ತೆಯರು ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ಕೆಲವೆಡೆ ಕಟ್ಟಡಗಳ ಮಾಲೀಕರು ಮಕ್ಕಳು ಮತ್ತು ಅಂಗನವಾಡಿ ಕಾರ್ಯಕರ್ತೆಯರ ಸಂಕಷ್ಟವನ್ನು ಅರಿತುಕೊಂಡು ಬಾಡಿಗೆ ಹಣಕ್ಕಾಗಿ ಒತ್ತಡ ಹೇರದಿದ್ದರೆ, ತಿಂಗಳುಗಟ್ಟಲೆ ಬಾಡಿಗೆ ಪಾವತಿಸದಿರುವುದರಿಂದ ಕಾರ್ಯಕರ್ತೆಯರು ಮಾನಸಿಕವಾಗಿ ಕಿರಿಕಿರಿ ಅನುಭವಿಸುವಂತಾಗಿದೆ.

ಸದ್ಯ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 69,923 ಅಂಗನವಾಡಿ ಕೇಂದ್ರಗಳ ಪೈಕಿ 13,164 ಕೇಂದ್ರಗಳು ಖಾಸಗಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇಂತಹ ಕೇಂದ್ರಗಳಿಗೆ ಸರ್ಕಾರದ ವತಿಯಿಂದ ನಿಗದಿತ ಮೊತ್ತದ ಬಾಡಿಗೆಯನ್ನು ಪಾವತಿಸಲಾಗುತ್ತಿದೆ. ಆದರೆ ಸರ್ಕಾರ ನಿಯಮಿತವಾಗಿ ಅನುದಾನವನ್ನು ಬಿಡುಗಡೆ ಮಾಡದಿರುವ ಪರಿಣಾಮ ಅಂಗನವಾಡಿ ಕಾರ್ಯಕರ್ತೆಯರು ಕಟ್ಟಡಗಳ ಮಾಲೀಕರಿಂದ ಕಿರಿಕಿರಿ ಅನುಭವಿಸುವಂತಾಗಿದೆ. ಸಹಜವಾಗಿ ಸರ್ಕಾರದ ಈ ನಿರ್ಲಕ್ಷ್ಯ ಧೋರಣೆಯಿಂದಾಗಿ ಅಂಗನವಾಡಿ ಕೇಂದ್ರಗಳ ಮೂಲೋದ್ದೇಶಕ್ಕೆ ಪೆಟ್ಟು ಬೀಳುತ್ತಿದೆ. ಪುಟಾಣಿ ಮಕ್ಕಳ ಆರೋಗ್ಯ, ಗರ್ಭಿಣಿಯರು ಮತ್ತು ಬಾಣಂತಿಯರ ಆರೋಗ್ಯ ರಕ್ಷಣೆಯ ಉದಾತ್ತ ಧ್ಯೇಯೋದ್ದೇಶಗಳೊಂದಿಗೆ ಹೊಸ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ತೋರುವ ಆಸಕ್ತಿಯನ್ನು ಸರ್ಕಾರ ಅವುಗಳ ಸಮರ್ಪಕ ನಿರ್ವಹಣೆಗೆ ತೋರದಿರುವುದು ಅಚ್ಚರಿಯೇ ಸರಿ.

13,000ಕ್ಕೂ ಅಧಿಕ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸಲು ಸ್ವಂತ ಕಟ್ಟಡ ಬಿಡಿ, ಸರ್ಕಾರಿ ಕಟ್ಟಡಗಳೂ ಇಲ್ಲ ಎಂದಾದರೆ ಸರ್ಕಾರ ತುರ್ತು ಲಕ್ಷ್ಯ ಹರಿಸಲೇ ಬೇಕು. ವರ್ಷಗಳುರುಳಿದಂತೆಯೇ ಅಂಗನವಾಡಿ ಕೇಂದ್ರಗಳು ಹಾಗೂ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಕಾರ್ಯಭಾರವೂ ಹೆಚ್ಚುತ್ತಲೇ ಸಾಗಿದ್ದರೂ ಈ ಕೇಂದ್ರಗಳಿಗೆ ಸ್ವಂತ ಸೂರು ನಿರ್ಮಿಸಿಕೊಡಲು ಸರ್ಕಾರದಿಂದ ಸಾಧ್ಯವಾಗದಿರುವುದು ವಿಪರ್ಯಾಸವೇ ಸರಿ.

ಇನ್ನಾದರೂ ಸರ್ಕಾರ ಎಚ್ಚೆತ್ತುಕೊಂಡು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ನೀಡಬೇಕಾಗಿರುವ ಬಾಡಿಗೆ ಅನುದಾನವನ್ನು ಕಾಲಕಾಲಕ್ಕೆ ಬಿಡುಗಡೆ ಮಾಡಿ ಕಾರ್ಯಕರ್ತೆಯರನ್ನು ಈ ಮುಜುಗರದಿಂದ ಪಾರು ಮಾಡಬೇಕು. ಕಟ್ಟಡದ ಬಾಡಿಗೆ ಪಾವತಿಸಲು ಸರ್ಕಾರದ ಬಳಿ ಅಂಗಲಾಚುವ ಇಲ್ಲವೇ ಸ್ವಂತ ಹಣದಿಂದ ಬಾಡಿಗೆ ಪಾವತಿಸುವ ಅನಿವಾರ್ಯತೆ ಅಂಗನವಾಡಿ ಕಾರ್ಯಕರ್ತೆಯರಿಗೆ ಎದುರಾಗದಂತೆ ನೋಡಿಕೊಳ್ಳಬೇಕು. ಇದು ತಕ್ಷಣದ ಕ್ರಮವಾದರೆ, ಇನ್ನು ಪುಟಾಣಿ ಮಕ್ಕಳ ರಕ್ಷಣೆಯ ಹಿತದೃಷ್ಟಿಯಿಂದ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಕನಿಷ್ಠ ಮೂಲಸೌಕರ್ಯಗಳನ್ನು ಒಳಗೊಂಡ ಸ್ವಂತ ಕಟ್ಟಡವನ್ನು ನಿರ್ಮಿಸಲು ಕಾರ್ಯಯೋಜನೆಯನ್ನು ರೂಪಿಸಿ ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಬೇಕು. ಹೊಸ ಹೊಸ ಯೋಜನೆಗಳ ಘೋಷಣೆಯ ಬದಲು ಇಂತಹ ಪ್ರಾಥಮಿಕ ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದೇ ಆದಲ್ಲಿ ಅದೇ ದೊಡ್ಡ ಸಾಧನೆ ಎಂಬುದನ್ನು ಸರ್ಕಾರ ಮರೆಯಬಾರದು.

ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

18

25 ನಿಮಿಷದ ಮ್ಯಾಜಿಕ್

ಇದು ಮ್ಯಾಜಿಕ್ ರೀತಿ ಕೆಲಸ ಮಾಡುತ್ತದೆ. 25 ನಿಮಿಷ ಬಹಳ ಕಡಿಮೆ ಸಮಯ, ಮನಸ್ಸು ಸುಲಭವಾಗಿ ಒಪ್ಪುತ್ತದೆ. ನಡುವೆ ವಿರಾಮ ಇರುವುದರಿಂದ ಸುಸ್ತು ಬರುವುದಿಲ್ಲ. ಪ್ರತಿ ಸುತ್ತು ಮುಗಿದಾಗ ಗೆಲುವಿನ ಭಾವ ಬರುತ್ತದೆ, ಆತ್ಮವಿಶ್ವಾಸ ಹೆಚ್ಚುತ್ತದೆ. ಜಡತ್ವ ನಿಧಾನವಾಗಿ ಕರಗಿ ಓದಿನ ಲಯ ಸಿಗುತ್ತದೆ. ಎಷ್ಟು ಸುತ್ತು ಮುಗಿಸಿದೆ ಎಂದು ಎಣಿಸಿದರೆ ನಿಮ್ಮ ಪ್ರಗತಿಯೇ ಕಾಣುತ್ತದೆ.

ಓದಲು ಕುಳಿತ ಕೂಡಲೇ ಮನಸ್ಸು ಭಾರವಾಗುತ್ತದೆ, ದೊಡ್ಡ ಪಾಠ ನೋಡಿ ಹಿಂದೇಟು ಹಾಕುತ್ತದೆ. ಎರಡು ಗಂಟೆ ಕುಳಿತರೂ ಒಂದು ಪುಟ ಮುಗಿಯುವುದಿಲ್ಲ. ಇದಕ್ಕೆ ಕಾರಣ ಸೋಮಾರಿತನವಲ್ಲ, ಜಡತ್ವ. ದೊಡ್ಡ ಕೆಲಸವನ್ನು ಒಮ್ಮೆಲೆ ಮುಗಿಸಬೇಕು ಎಂಬ ಒತ್ತಡವೇ ಮನಸ್ಸನ್ನು ಕಟ್ಟಿಹಾಕುತ್ತದೆ. ಇದನ್ನು ದಾಟಲು ಒಂದು ಸಣ್ಣ ತಂತ್ರ ಸಾಕು.

ಆ ತಂತ್ರದ ಹೆಸರು ಪೊಮೊಡೊರೊ. ಇಟಲಿಯ ವಿದ್ಯಾರ್ಥಿಯೊಬ್ಬ ಟೊಮೇಟೊ ಆಕಾರದ ಟೈಮರ್ ಬಳಸಿ ಕಂಡುಹಿಡಿದ ವಿಧಾನ ಇದು. ಇದರ ನಿಯಮ ಸರಳ, 25 ನಿಮಿಷ ಓದು, 5 ನಿಮಿಷ ವಿರಾಮ. ಮೊದಲು ಟೈಮರ್ ಇಡಿ, ಫೋನ್ ಸೈಲೆಂಟ್ ಮಾಡಿ ದೂರ ಇಡಿ. 25 ನಿಮಿಷ ಬರೀ ಓದು ಮಾತ್ರ. ಟೈಮರ್ ರಿಂಗಣಿಸಿದ ಕೂಡಲೇ ಪೆನ್ ಕೆಳಗಿಡಿ, ಎದ್ದು ನೀರು ಕುಡಿಯಿರಿ, ಕಿಟಕಿ ಹೊರಗೆ ನೋಡಿ. ಮತ್ತೆ 25 ನಿಮಿಷ ಓದು. ಹೀಗೆ ನಾಲ್ಕು ಸುತ್ತು ಆದಮೇಲೆ 20 ನಿಮಿಷ ದೊಡ್ಡ ವಿರಾಮ. ಇಂದು ನೀವು ಇಡೀ ಪುಸ್ತಕ ಓದಬೇಕಿಲ್ಲ, ಕೇವಲ ಮೊದಲ 25 ನಿಮಿಷ ಶುರು ಮಾಡಿ. ಟೈಮರ್ ನಿಮ್ಮ ಜೊತೆಗಾರ. ಚಿಕ್ಕ ಹೆಜ್ಜೆಯಿಂದಲೇ ದೊಡ್ಡ ಜಡತ್ವವನ್ನು ಗೆಲ್ಲಬಹುದು.

ಬೊಜ್ಜು ಗರ್ಭ ಧರಿಸುವ ಸಾಮರ್ಥ್ಯದ ಮೇಲೆ ಪರಿಣಾಮ ಬೀರಬಹುದೇ? ವೈದ್ಯರ ಅಭಿಪ್ರಾಯ ಹೀಗಿದೆ ನೋಡಿ

ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿರುವ ಜೀವನಶೈಲಿ ಹಾಗೂ ಆಹಾರ ಪದ್ಧತಿಗಳಿಂದಾಗಿ ಅನೇಕ ಮಹಿಳೆಯರು ಗರ್ಭಧರಿಸುವಲ್ಲಿ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಜನರು ಪೌಷ್ಟಿಕ ಆಹಾರದ ಬದಲಿಗೆ ಫಾಸ್ಟ್ ಫುಡ್ ಹಾಗೂ ಜಂಕ್ ಫುಡ್ ಕಡೆಗೆ ಹೆಚ್ಚು ಒಲವು ತೋರುತ್ತಿದ್ದಾರೆ. ಇದರ ಪರಿಣಾಮ ಬೊಜ್ಜು ಹೆಚ್ಚಾಗಲು ಕಾರಣವಾಗುತ್ತಿದೆ. ಅತಿಯಾದ ದೇಹದ ತೂಕ ಇಲ್ಲವೇ ಬೊಜ್ಜು ಗರ್ಭಧರಿಸುವ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ ಎಂದು ವೈದ್ಯರು ತಿಳಿಸುತ್ತಾರೆ. ಪುರುಷರು ಹಾಗೂ ಮಹಿಳೆಯರಿಬ್ಬರೂ ಬೊಜ್ಜನ್ನು ನಿಯಂತ್ರಿಸುವುದು ಇಲ್ಲವೇ ತಡೆಗಟ್ಟುವುದು ಬಹಳ ಮುಖ್ಯ. ಬೊಜ್ಜು ಏಕೆ ಗರ್ಭಧಾರಣೆಯನ್ನು ಕಷ್ಟಕರವಾಗಿಸುತ್ತದೆ ಎಂಬುದರ ಕುರಿತು ವೈದ್ಯರ ವಿವರವಾಗಿ ತಿಳಿಸಿದ್ದಾರೆ. ಸರ್ ಎಚ್.ಎನ್. ರಿಲಯನ್ಸ್ ಫೌಂಡೇಶನ್ ಆಸ್ಪತ್ರೆಯ 'ವೆಲ್ ವುಮನ್ ಸೆಂಟರ್'ನ ನಿರ್ದೇಶಕರಾಗಿರುವ, ಪ್ರಖ್ಯಾತ ಪ್ರಸೂತಿ ತಜ್ಞೆ ಮತ್ತು ಪ್ರಮುಖ ಐವಿಎಫ್ ತಜ್ಞೆ ಡಾ.ಫಿರೋಜಾ ಪಾರಿಖ್ ಅವರು ತಿಳಿಸುವ ಪ್ರಕಾರ, 'ಮಹಿಳೆಯೊಬ್ಬರು ಗರ್ಭಧರಿಸಲು ನಿಯಮಿತ ಮುಟ್ಟಿನ ಚಕ್ರ ಹಾಗೂ ಅಂಡೋತ್ಪತ್ತಿ ಅತ್ಯಗತ್ಯವಾಗಿರುತ್ತದೆ. ಅಂಡಾಣು ಹಾಗೂ ವೀರ್ಯಾಣು ಸೇರಿದಾಗ ಗರ್ಭಧಾರಣೆ ಉಂಟಾಗುತ್ತದೆ.

ಆದರೆ, ಅತಿಯಾದ ದೇಹದ ತೂಕ ಹೊಂದಿರುವ ಮಹಿಳೆಯರಲ್ಲಿ ಮುಟ್ಟಿನ ಚಕ್ರವು ಅನಿಯಮಿತವಾಗಿರುವ ಸಾಧ್ಯತೆ ಹೆಚ್ಚಿರುತ್ತದೆ. ಬೊಜ್ಜು ಹಾಗೂ ಅನಿಯಮಿತ ಮುಟ್ಟಿನ ಚಕ್ರವು ಮಹಿಳೆಯ ಫಲವತ್ತತೆಯ ಮೇಲೆ ಹಾಗೂ ಗರ್ಭಧರಿಸುವ ಸಾಧ್ಯತೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ದೇಹದಲ್ಲಿನ ಅತಿಯಾದ ಕೊಬ್ಬು ಹಾರ್ಮೋನುಗಳ ಸಮತೋಲನವನ್ನು ಏರುಪೇರು ಮಾಡುತ್ತದೆ. ಇದು ಅಂಡೋತ್ಪತ್ತಿಯನ್ನು ವಿಳಂಬಗೊಳಿಸಬಹುದು ಅಥವಾ ಸಂಪೂರ್ಣವಾಗಿ ನಿಲ್ಲಿಸಬಹುದು. ಇದರಿಂದ ಗರ್ಭಧರಿಸುವುದು ಕಷ್ಟಕರವಾಗುತ್ತದೆ, ಗರ್ಭಾವಸ್ಥೆಯಲ್ಲಿ ತೊಡಕುಗಳು ಉಂಟಾಗುವ ಅಪಾಯ ಹೆಚ್ಚಾಗುತ್ತದೆ' ಎಂದು ಅವರು ತಿಳಿಸುತ್ತಾರೆ.

ಅತಿಯಾದ ದೇಹದ ತೂಕವಿರುವ ಮಹಿಳೆಯರಲ್ಲಿ 'ಪಿಸಿಒಡಿ' ಕಾಣಿಸಿಕೊಳ್ಳುವ ಅಪಾಯವೂ ಇರುತ್ತದೆ. ಈ ಸ್ಥಿತಿಯಲ್ಲಿ ಅಂಡಾಶಯಗಳಲ್ಲಿ ದ್ರವ ತುಂಬಿದ ಸಣ್ಣ ಚೀಲಗಳು ರೂಪುಗೊಳ್ಳುತ್ತವೆ, ಇದು ಮುಟ್ಟಿನ ಚಕ್ರದಲ್ಲಿ ಅನಿಯಮಿತತೆಗೆ ಕಾರಣವಾಗುತ್ತದೆ. ಇದು ಫಲವತ್ತತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ' ಎಂದು ವೈದ್ಯರು ಹೇಳುತ್ತಾರೆ. ಪಿಸಿಒಡಿ ಗರ್ಭಧಾರಣೆಯನ್ನು ಕಷ್ಟಕರವಾಗಿಸುತ್ತದೆ, ಬೊಜ್ಜು ಹೊಂದಿರುವ ಮಹಿಳೆಯರಲ್ಲಿ ಇದು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚು ಇರುತ್ತದೆ. ಅತಿಯಾದ ತೂಕದಿಂದಾಗಿ ಮುಟ್ಟಿನ ಚಕ್ರವು ಎರಡು ಇಲ್ಲವೇ ಮೂರು ತಿಂಗಳಿಗೊಮ್ಮೆ ಸಂಭವಿಸಬಹುದು. ಪಿಸಿಒಡಿಯು ಮಹಿಳೆಯರಲ್ಲಿ ಪುರುಷ ಹಾರ್ಮೋನುಗಳ ಉತ್ಪಾದನೆ ಹೆಚ್ಚಾಗಲು ಕಾರಣವಾಗುತ್ತದೆ. ಇದು ಅಂಡಾಣುಗಳ ಬೆಳವಣಿಗೆಯ ಪ್ರಕ್ರಿಯೆಗೆ ಅಡ್ಡಿಪಡಿಸುತ್ತದೆ ಎಂದು ಡಾ.ಫಿರೋಜಾ ಪಾರಿಖ್ ವಿವರಿಸುತ್ತಾರೆ.

ಗರ್ಭಧರಿಸಲು ಬಯಸುವ ಮಹಿಳೆಯರು ತಮ್ಮ ಬಿಎಂಐ ಅನ್ನು ಕಡಿಮೆ ಮಾಡುವತ್ತ ಗಮನಹರಿಸಬೇಕು. 20ರಿಂದ 25ರ ನಡುವೆ ಇದ್ದಾಗ ಗರ್ಭಧಾರಣೆಯ ಸಾಧ್ಯತೆಗಳು ಹೆಚ್ಚು ಎಂದು ಹೇಳಲಾಗುತ್ತದೆ. ಗಂಡ ಇಲ್ಲವೇ ಹೆಂಡತಿ ಬೊಜ್ಜು ಹೊಂದಿದ್ದರೆ, ಗರ್ಭಧಾರಣೆಯ ಸಾಧ್ಯತೆಗಳು ಕಡಿಮೆಯಾಗುತ್ತವೆ. ಮಹಿಳೆಯರಲ್ಲಿ ಅಧಿಕ ದೇಹದ ತೂಕವು ಮೊಟ್ಟೆ ಉತ್ಪಾದನೆಯನ್ನು ಕಡಿಮೆ ಮಾಡುತ್ತದೆ. ಆದರೆ, ಪುರುಷರಲ್ಲಿ ಇದು ವೀರ್ಯ ಉತ್ಪಾದನೆಯಲ್ಲಿ ಇಳಿಕೆಗೆ ಕಾರಣವಾಗುತ್ತದೆ. ಇದಲ್ಲದೆ, ವೃಷಣಗಳಲ್ಲಿ (ವೀರ್ಯ ಉತ್ಪತ್ತಿಯಾಗುವ ಸ್ಥಳದಲ್ಲಿ) ಅತಿಯಾದ ಶಾಖವು ಪುರುಷರ ಫಲವತ್ತತೆಗೆ ಸಮಸ್ಯೆಗಳನ್ನು ಉಂಟುಮಾಡಬಹುದು. ಇದರ ಪರಿಣಾಮವಾಗಿ ಹೆಚ್ಚುವರಿ ದೇಹದ ತೂಕವನ್ನು ನಿರ್ವಹಿಸುವ ಮೂಲಕ ಫಲವತ್ತತೆಯನ್ನು ಸುಧಾರಿಸಬಹುದು ಎಂದು ಡಾ.ಫಿರೋಜಾ ಪಾರಿಖ್ ಸಲಹೆ ನೀಡುತ್ತಾರೆ.

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಒಳ್ಳೆಯ ವ್ಯಕ್ತಿತ್ವ ಗುಣಗಳನ್ನು ಜೀವನದ ಬದುಕಿನಲ್ಲಿ ರೂಢಿಸಿಕೊಳ್ಳುವುದು ಹೇಗೆ?

1) ಮತ್ತೊಬ್ಬರನ್ನು ಬದಲಾಯಿಸುವ ಪ್ರಯತ್ನ ಬಿಟ್ಟು ನಾವು ಬದಲಾದರೆ ಸಾಕು. 2) ಜನ ಹೇಗಿದ್ದಾರೋ ಹಾಗೆಯೇ ಸ್ವೀಕರಿಸಿದರೆ ಅಲ್ಲಿ ಪ್ರಶ್ನೆಗೆ ಆಸ್ಪದ ಹಾಗೂ ಪ್ರಶ್ನೆ ಉದ್ಭವವಾಗುವುದಿಲ್ಲ. 3) ಪ್ರತಿಯೊಬ್ಬರೂ ಅವರವರ ದಾರಿಯಲ್ಲಿ ಹೋಗುತ್ತಿದ್ದಾರೆ ಆದರೆ ನಾವು ಹೋಗುವ ದಾರಿ ಸರಿ ಇದ್ದರೆ ಸಾಕು ಎಂದು ತಿಳಿದರೆ ಸಾಕು. 4) ಎಲ್ಲರೊಂದಿಗೂ ನಾವು ಹೊಂದಾಣಿಕೆಯಿಂದ ಹೊರಟರೆ ಅಲ್ಲಿ ಘರ್ಷಣೆಗೆ ಅಥವಾ ಮನಸ್ತಾಪಕ್ಕೆ ಆಸ್ಪದ ಇಲ್ಲ. 5) ಬೇರೆಯವರಿಂದ ನಾವು ಅಪೇಕ್ಷಿಸುವುದನ್ನು ಬಿಟ್ಟರೆ ಅಲ್ಲಿ ಚಿಂತನೆ, ಯೋಚನೆ, ಆಸೆ, ಆಕಾಂಕ್ಷೆ ಒದಗಿ ಬರುವುದಿಲ್ಲ. 6) ಆತ್ಮವಿಶ್ವಾಸದಿಂದ ನಾವು ಮಾಡುತ್ತಿರುವ ಕೆಲಸ ನಮಗೆ ಶಾಂತಿ, ನೆಮ್ಮದಿ, ಸಂತೋಷ ಸಿಗಬೇಕು. 7) ನಮ್ಮ ಜಾಣ್ಮೆ, ಜ್ಞಾನ, ಬುದ್ಧಿವಂತಿಕೆ ಹಾಗೂ ಶಕ್ತಿಯನ್ನು ಮೂರ್ಖರ ಮುಂದೆ ಪ್ರದರ್ಶಿಸುವುದನ್ನು ನಿಲ್ಲಿಸಬೇಕು. 8) ಮತ್ತೊಬ್ಬರು ನಮ್ಮನ್ನು ತೆಗಳಿದಾಗ ಹಾಗೂ ಟೀಕಿಸಿದಾಗ ಸ್ವೀಕರಿಸುವ ಮನೋಭಾವ ಗುಣವಿರಬೇಕು. 9) ನಾವು ಬೇರೆಯವರೊಂದಿಗೆ ಹೋಲಿಸಿಕೊಳ್ಳುವುದನ್ನು ಬಿಡಬೇಕು ಬಿಟ್ಟರೆ ಬದುಕು ಸಾರ್ಥಕ.

10) ನಮ್ಮಲ್ಲಿ ನಮಗೆ ಧೈರ್ಯ, ಸ್ಥೈರ್ಯ, ಭರವಸೆ ಮೂಡಿಸಿಕೊಂಡು ಸದಾ ಶಾಂತನಾಗಿ ಇರಲು ಪ್ರಯತ್ನ ಪಡಬೇಕು. 11) ನಾವು ನಮ್ಮ ಜೀವನದ ಅವಶ್ಯಕತೆಗೆ ಮಾತ್ರ ಇಷ್ಟಪಟ್ಟು, ಅವಶ್ಯಕತೆ ಇಲ್ಲದ್ದನ್ನ ಹಾಗೂ ಹೆಚ್ಚುವರಿ ಆದದ್ದನ್ನು ನೊಂದವರ ಬಾಳಿಗೆ ಬೆಳಕಾಗಬೇಕು. 12) ಪದವಿಗಳಿಂದ, ಅಧಿಕಾರದಿಂದ, ವ್ಯಕ್ತಿಗಳಿಂದ, ವಸ್ತುಗಳಿಂದ ಹಾಗೂ ವಿಷಯಗಳಿಂದಲೇ ಸುಖ-ಸಂತೋಷ ಸಿಗುವುದೆಂದು ನಾವುಗಳು ನಂಬುವುದನ್ನು ಬಿಡಬೇಕು. 13) ಸೋಲಿಗೆ ಹೆದರಬಾರದು ಸೋಲೇ ಗೆಲುವಿನ ಮೆಟ್ಟಿಲು ನಾವು ಎಡುವ ಕಲ್ಲೇ ಭವಿಷ್ಯದ ಮೆಟ್ಟಿಲು.

14) ಯಾವುದೇ ಪರೀಕ್ಷೆಯಲ್ಲಿ ಫೇಲಾದರೆ ಅದಕ್ಕೆ ಧೃತಿಗೆಡದೇ ಪಾಸಾದವನಿಗಿಂತ ನಮಗೆ ಅನುಭವ ಹೆಚ್ಚಾಗಿ ಭವಿಷ್ಯ ರೂಪಿಸಿಕೊಳ್ಳಲು ಅನುಕೂಲವಾಗುತ್ತದೆ.15) ಯಾವುದೇ ಪರೀಕ್ಷೆಯಲ್ಲಿ ಜೀವನವಿಲ್ಲ ಆದರೆ ಜೀವನದಲ್ಲಿ ಪರೀಕ್ಷೆ ಇದೆ.16) ಆತ್ಮಹತ್ಯೆ ಪರಿಹಾರವಲ್ಲ ಈಸಬೇಕು ಇದ್ದು ಜಯಿಸಬೇಕು.

ಹತ್ಯೆ ಮತ್ತು ಆತ್ಮಹತ್ಯೆ ಮಿಗಿಲಾಗಿ ಸ್ತ್ರೀ ಹತ್ಯೆ, ಶಿಶುಹತ್ಯೆ, ಭ್ರೂಣ ಹತ್ಯೆ, ಗೋಹತ್ಯೆ ,ಆತ್ಮಹತ್ಯೆ ಮಹಾ ಪಾಪಗಳು.17) ಕೊಡುವುದು ಉತ್ತಮ ಆದರೆ ಪ್ರೀತಿ, ವಿಶ್ವಾಸಗಳಿಂದ ನೀಡಿದಾಗ ನೀವು ಕೊಟ್ಟ ಬಳುವಳಿಗಿಂತ ಹೆಚ್ಚಾಗಿ ನಿಮ್ಮ ಪ್ರೀತಿ ಸ್ವೀಕರಿಸುವ ಆ ವ್ಯಕ್ತಿಯ ಹೃದಯವನ್ನು ತಾಕುತ್ತದೆ.18) ಸುಟ್ಟ ಗಾಯ ಅಥವಾ ಹೊಡೆದ ಗಾಯ ಮಾಗಬಹುದು ಆದರೆ ಮುಂದಾಲೋಚನೆ ಇಲ್ಲದೇ ಆಡಿದ ಕಠಿಣ ನುಡಿಗಳನ್ನು ಮರೆಯಲಾಗುವುದಿಲ್ಲ ಅದೊಂದು ವಿಕಾರ ಗುರುತಾಗಿ ಮನದಾಳದಲ್ಲಿ ಶಾಶ್ವತವಾಗಿ ಉಳಿದುಬಿಡುತ್ತದೆ.19) ಕೆಟ್ಟ ಕೆಲಸದಿಂದ ಕೆಡುಕು ಮುಂದುವರಿಯುತ್ತದೆ. ಆದ್ದರಿಂದ ದುಷ್ಕೃತ್ಯಕ್ಕೆ ಬೆಂಕಿಗಿಂತಲೂ ಹೆಚ್ಚಾಗಿ ಹೆದರಬೇಕು.

20) ಅಂದವಾಗಿರುವ ಬದಲು ಆನಂದವಾಗಿರಿ. ಅವರವರ ಕುಟುಂಬದಲ್ಲಿ ಅವರವರು ಇರುವುದರಲ್ಲಿಯೇ ತೃಪ್ತಿ ಸಂತೃಪ್ತಿಯಿಂದ ಬದುಕಲು ರೂಢಿ ಮಾಡಿಕೊಳ್ಳಿ. 21) ದೇವರು ವರವೂ ಕೊಡಲ್ಲ ಮತ್ತು ಶಾಪವೂ ಕೊಡಲ್ಲ. 22) ಮನುಷ್ಯರಾಗಲು ಅರ್ಹತೆ ಇಲ್ಲದವರು ಯಮಧರ್ಮರಾಯನ ಹತ್ತಿರ ಹೋಗಿ ಲಂಚದ ಬಗ್ಗೆ ಮಾತಾಡಿದ್ದಾರೆ ಆದರೆ ಅವರು ತಿರಸ್ಕರಿಸಿದ್ದಾರೆ. ಒಂದು ವೇಳೆ ಯಮಧರ್ಮರಾಯನು ಲಂಚವನ್ನು ಸ್ವೀಕರಿಸುವುದಾಗಿದ್ದರೆ ಬಹಳಷ್ಟು ದುರಾಸೆ ಮಂದಿ ಲಂಚವನ್ನು ನೀಡಿ ತಮಗೆ ಬರುವ ಸಾವನ್ನ ಮುಂದೂಡಿಸಿ ಕೊಳ್ಳುತ್ತಿದ್ದರು.

ಈ ಮೇಲ್ಕಂಡ ವ್ಯಕ್ತಿತ್ವ ಗುಣಗಳನ್ನು ಜೀವನದ ಬದುಕಿನಲ್ಲಿ ಕೊನೇಪಕ್ಷ ರೂಢಿಸಿಕೊಂಡರೆ ನಮ್ಮಗಳ ಬದುಕು ಸಾರ್ಥಕವಾಗಬಹುದು.

ಪರಮ್ ವಿಹಾರದಲ್ಲಿ ಅ. 25ರಂದು ಶಾಸ್ತ್ರೀಯ ಸಂಗೀತ, ಭರತನಾಟ್ಯದ ಸೊಬಗು ಅನಾವರಣ

• ಉದಯವಾಹಿನಿ, ಬೆಂಗಳೂರು

ಪರಮ್ ಕಲ್ಚರ್ ವತಿಯಿಂದ ಆಯೋಜಿಸಲಾಗುವ ಮಾಸಿಕ ಸಾಂಸ್ಕೃತಿಕ ಕಾರ್ಯಕ್ರಮವಾದ 'ಪರಮ್ ವಿಹಾರ'ದ 17ನೇ ಆವೃತ್ತಿಯು ಅಕ್ಟೋಬರ್ 25ರಂದು ಸಂಜೆ 6 ಗಂಟೆಗೆ ನಡೆಯಲಿದೆ. ಬೆಂಗಳೂರಿನ ಬನಶಂಕರಿಯಲ್ಲಿರುವ ಸುಚಿತ್ರ ಅಕಾಡೆಮಿ ಮತ್ತು ಸಿನಿಮಾ ಆವರಣದಲ್ಲಿ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ಭರತನಾಟ್ಯದ ಸೊಬಗು ಅನಾವರಣಗೊಳ್ಳಲಿದೆ.

ಪ್ರತಿ ತಿಂಗಳ ನಾಲ್ಕನೇ ಭಾನುವಾರದಂದು ನಡೆಯುವ 'ಪರಮ್ ವಿಹಾರ', ಸಂಗೀತ ಮತ್ತು ನೃತ್ಯ ಕ್ಷೇತ್ರದ ಉದಯೋನ್ಮುಖ ಕಲಾವಿದರಿಗೆ ವೇದಿಕೆ ಕಲ್ಪಿಸುವುದರ ಜೊತೆಗೆ ಸಾರ್ವಜನಿಕರಲ್ಲಿ ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಆಸಕ್ತಿ ಬೆಳೆಸುವ ಉದ್ದೇಶ ಹೊಂದಿದೆ. ಡಾ. ಜಯಂತ್ ಕುಮಾರ್ ಅವರಿಂದ ವಿಶಿಷ್ಟ ವಾದ್ಯಸಂಗೀತ ಪ್ರಸ್ತುತಿ ಈ ಬಾರಿ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಡಾ. ಜಯಂತ್ ಕುಮಾರ್ ಅವರ ನೇತೃತ್ವದಲ್ಲಿ ವಿಶಿಷ್ಟ ಶಾಸ್ತ್ರೀಯ ಸಂಗೀತ ಪ್ರಸ್ತುತಿ ನಡೆಯಲಿದೆ.

ಉತ್ತರ ಭಾರತದ ಹಿಂದೂಸ್ತಾನಿ ಮತ್ತು ದಕ್ಷಿಣ ಭಾರತದ ಕರ್ನಾಟಕ ಶಾಸ್ತ್ರೀಯ ಸಂಗೀತ ಪರಂಪರೆಗಳನ್ನು ಒಂದೇ ವೇದಿಕೆಯಲ್ಲಿ ಪರಿಚಯಿಸುವ



ಕಾರ್ಯಕ್ರಮದ ವಿವರಗಳು
ದಿನಾಂಕ: ಭಾನುವಾರ, 25 ಅಕ್ಟೋಬರ್ 2026
ಸಮಯ: ಸಂಜೆ 6 ಗಂಟೆಯಿಂದ
ಸ್ಥಳ: ಸುಚಿತ್ರ ಅಕಾಡೆಮಿ ಮತ್ತು ಸಿನಿಮಾ, ಬೆಂಗಳೂರು
ಆಯೋಜನೆ: ಪರಮ್ ಕಲ್ಚರ್
ಪ್ರವೇಶ- ಉಚಿತ

ಈ ಸಂಗೀತ ಕಾರ್ಯಕ್ರಮದಲ್ಲಿ ಸಿತಾರ್, ರುದ್ರವೀಣೆ, ಹಿಂದೂಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಗಾಯನ, ತಬಲಾ, ಮೃದಂಗ ಹಾಗೂ ಕೊನ್ನಕೋಲ್‌ನ ಸಮ್ಮಿಲನವನ್ನು ಆಸ್ವಾದಿಸಬಹುದು. ಎರಡೂ ಸಂಗೀತ ಪದ್ಧತಿಗಳ ರಾಗಗಳ ವೈವಿಧ್ಯ, ಮಧುರತೆ ಮತ್ತು ಲಯದ ಸೊಬಗನ್ನು ಅನಾವರಣಗೊಳಿಸುವ ಈ ಪ್ರಸ್ತುತಿ ಸಂಗೀತಾಸಕ್ತರಿಗೆ ವಿಶಿಷ್ಟ ಅನುಭವ ನೀಡಲಿದೆ.

ವಿದುಷಿ ಅರ್ಚನಾ ಎಚ್.ಆರ್. ಮತ್ತು ಶಿಷ್ಯರಿಂದ 'ಸಮರ್ಪಣಂ' ಭರತನಾಟ್ಯ ಪ್ರದರ್ಶನ: ವಿದುಷಿ ಅರ್ಚನಾ ಎಚ್.ಆರ್. ಅವರ ಹಿರಿಯ ಶಿಷ್ಯೆಯರಾದ ನಮಿತಾ ವೆಂಕಟೇಶ್, ವೈಷ್ಣವಿ ವಿ., ಸ್ವಾತಿ ಗಂಗಾಧರ್, ಅಂಬಿಕಾ ಮತ್ತು ಕೀರ್ತನಾ ಪ್ರಕಾಶ್ ಅವರು 'ಸಮರ್ಪಣಂ' ಶೀರ್ಷಿಕೆಯಡಿ ಭರತನಾಟ್ಯ ಪ್ರದರ್ಶನ ನೀಡಲಿದ್ದಾರೆ. ಭಕ್ತಿ, ದೈವತ್ವ, ಶಕ್ತಿ, ಸೌಂದರ್ಯ ಮತ್ತು ಲವಲವಿಕೆಯನ್ನು ನೃತ್ಯದ ಮೂಲಕ ಅಭಿವ್ಯಕ್ತಿಸುವ ಈ ಪ್ರಸ್ತುತಿ, ಭಾರತೀಯ ಶಾಸ್ತ್ರೀಯ ನೃತ್ಯ ಪರಂಪರೆಯ ವಿವಿಧ ಆಯಾಮಗಳನ್ನು ಪರಿಚಯಿಸಲಿದೆ.

ವಿಘ್ನವಿನಾಶಕ ಗಣೇಶನ ಸ್ತುತಿಯೊಂದಿಗೆ ಆರಂಭವಾಗುವ ನೃತ್ಯಯಾನವು ದೇವಿ ಲಲಿತೆಯ ದಿವ್ಯ ಸೌಂದರ್ಯ ಮತ್ತು ಶಕ್ತಿಯ ಆರಾಧನೆ, ನಟರಾಜ ಶಿವನ ಸೃಷ್ಟಿ, ಸ್ಥಿತಿ ಮತ್ತು ಲಯವನ್ನು ಪ್ರತಿನಿಧಿಸುವ ವಿಶ್ವನೃತ್ಯ ಹಾಗೂ ತುಂಟಾಟದ ಕೃಷ್ಣನ ಮನಮೋಹಕ ಲೀಲೆಗಳ ಮೂಲಕ ಸಾಗಲಿದೆ. ಅಂತಿಮವಾಗಿ ಲಯಬದ್ಧ ಹೆಜ್ಜೆಗಳು ಮತ್ತು ಚೈತನ್ಯಭರಿತ ಚಲನೆಗಳಿಂದ ಕೂಡಿದ ತಿಲ್ಲಾನ ನೃತ್ಯ ಪ್ರಸ್ತುತಿಯೊಂದಿಗೆ ಕಾರ್ಯಕ್ರಮವು ಕಳೆಗಟ್ಟಲಿದೆ.

ಮಂಗಳಂ ಮೂಲಕ ದೈವಿಕ ಆಶೀರ್ವಾದವನ್ನು ಕೋರುವುದರೊಂದಿಗೆ ನೃತ್ಯಯಾನ ಸಂಪನ್ನಗೊಳ್ಳಲಿದೆ. ಸಂಗೀತ ಮತ್ತು ನೃತ್ಯದ ಮೂಲಕ ಭಾರತೀಯ ಕಲಾ ಪರಂಪರೆಯನ್ನು ಜನರಿಗೆ ಇನ್ನಷ್ಟು ಹತ್ತಿರವಾಗಿಸುವ ಈ ಕಾರ್ಯಕ್ರಮವು ಕಲಾಸಕ್ತರಿಗೆ ಮನಮೋಹಕ ಸಾಂಸ್ಕೃತಿಕ ಅನುಭವವನ್ನು ನೀಡಲಿದೆ.

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಎರಡೂ ಕಡೆಯವರಿಗೆ ಘೋರ ಯುದ್ಧವು ನಡೆಯಿತು; ದಾನವರು ರಾವಣನಿಗಾಗಿಯೂ, ವಾನರರು ರಾಮನಿಗಾಗಿಯೂ ಪ್ರಾಣವನ್ನು ತೆರಲು ಸಿದ್ಧರಾಗಿ ಹೋರಾಡಿದರು. ಎರಡೂ ಕಡೆಯ ಚತುರಂಗ ಸೈನ್ಯಗಳ ಓಡಾಟದಿಂದ ಧೂಳು ಭೂಮ್ಯಾಕಾಶಗಳನ್ನು ಆವರಿಸಿತು. ಅದರಿಂದಾದ ಮಬ್ಬಿನಲ್ಲಿ ಎಷ್ಟೋ ವೇಳೆ ಸ್ಪಷ್ಟವಾಗಿ ಕಾಣದೆ ದಾನವರು ದಾನವರನ್ನೇ, ವಾನರರು ವಾನರರನ್ನೇ ಕೊಂದುಹಾಕಿದುದೂ ಉಂಟು. ಎಲ್ಲೆಲ್ಲಿಯೂ ಹೆಣಗಳು ಉರುಳಾಡಿದುವು, ಆಯುಧಗಳು ಮುರಿದು ಬಿದ್ದುವು. ಕೆಲವರು ಬರಿಗೈಗಳಿಂದಲೇ ಶತ್ರುಗಳನ್ನು ಹೊಡೆದು ಕೊಲ್ಲುತ್ತಿದ್ದರೆ, ಮತ್ತೆ ಹಲವರು ವಿವಿಧಾಯುಧಗಳನ್ನು ಹಿಡಿದು ಹೋರಾಡಿದರು. ಅಕಂಪನನು ವೀರಾವೇಶದಿಂದ ರಕ್ಕಸಯೋಧರನ್ನು ಹುರಿದುಂಬಿಸುತ್ತಿದ್ದ. ವಾನರ ಯೋಧರು ಶತ್ರುಗಳ ಕೈಯಲ್ಲಿದ್ದ ಆಯುಧಗಳನ್ನು ಸೆಳೆದು ಅವುಗಳಿಂದಲೇ ಅರಿಗಳನ್ನು ತರಿದುಹಾಕುತ್ತಿದ್ದರು. ವಾನರಸೈನ್ಯವು ಗಿರಿಮರಗಳನ್ನು ಹಿಡಿದು ಭೀಕರವಾಗಿ ಬಡಿಯುತ್ತಬರಲು ದಾನವರು ಆ ಹೊಡೆತವನ್ನೆದುರಿಸಲಾರದೆ ಓಡತೊಡಗಿದರು. ಅದನ್ನು ನೋಡಿದ ಅಕಂಪನನು ರೋಷದಿಂದ ಬಿಲ್ಲನ್ನು ಹಿಡಿದು, ತನ್ನ ಸಾರಥಿಯನ್ನು ಕರೆದು, ''ಎಲವೋ, ರಥವನ್ನು ವೇಗವಾಗಿ ಸಂಟರಗಾಳಿಯಂತೆ ತಿರುಗಿಸು, ವಾನರಸೈನ್ಯವನ್ನು ತರಿದು ನಿರ್ವೈರವನ್ನು ಮಾಡಿ ನಮ್ಮ ಅರಸರ ಬಳಿಗೆ ಹೋಗೋಣ'' ಎಂದು ರಥದಲ್ಲಿ ಕುಳಿತು ವೇಗವಾಗಿ ಬಂದ. ಮುಂದೆ ನುಗ್ಗಿ ಶತ್ರುಗಳ ಮೇಲೆ ಶರವೃಷ್ಟಿಯನ್ನು ಸುರಿಸುತ್ತ, ಕತ್ತಿಗಳಿಂದ ಅರಿಶಿರಗಳನ್ನು ತರಿಯುತ್ತ, ಶಲ್ಯಗಳಿಂದ ತಿವಿಯುತ್ತ, ಮುಸಲದಿಂದ ತಲೆಗಳನ್ನು ಒಡೆಯುತ್ತ, ಚಕ್ರ ಬಿಂಡಿವಾಳಗಳನ್ನು ಎಸೆಯುತ್ತ ವಿಪರೀತ ಕ್ಷೋಶವನ್ನುಂಟುಮಾಡಿದ. ಈ ರೀತಿ ಪರಿಪರಿಯಾದ ವರಸೆಗಳಿಂದ ಅಕಂಪನನು ಯುದ್ಧಮಾಡುತ್ತ ಕಪಿಸೈನ್ಯವನ್ನು ಹಿಂದುಹಿಂದಕ್ಕೆ ತರುಮಿಕೊಂಡು ಬಂದ. ಅವನ ರಭಸದಿಂದ ನಿಂತ ನೆಲದಲ್ಲಿ ನಿಲ್ಲಲಾರದೆ ಕಪಿಭಟರು ವಿವಿಧ ದಿಕ್ಕುಗಳಿಗೆ ಓಡಲಾರಂಭಿಸಿದರು. ಈ ಪರಿಯಲ್ಲಿ ಓಡುತ್ತಿರುವ ಬಲಿಮುಖ ಸೈನ್ಯವನ್ನು ಕಂಡ ಮರುತಸುತನು ಅವರಿಗೆ ಅಭಯವನ್ನು ನೀಡಿ, ಧೈರ್ಯವನ್ನು ತುಂಬಿ, ಶರವೃಷ್ಟಿಯನ್ನು ಸುರಿಸುತ್ತಿದ್ದ ದಾನವರ ಸೈನ್ಯದ ಮುಂದುಗಡೆಗೆ ಬಂದ. ಹೀಗೆ ಮುಂದಾದ ಮಾರುತಿಯನ್ನು ಕಂಡು ಉಳಿದ ಕಪಿವೀರರೂ ಅವನನ್ನು ಹಿಂಬಾಲಿಸಿ ಬಂದರು. ಹನುಮನ ಆಶ್ರಯದಲ್ಲಿ ಧೈರ್ಯ ತಂದುಕೊಂಡ ಅವರು ಎದುರಾಳಿಗಳ ತಲೆಯನ್ನು ವೀರಾವೇಶದಿಂದ ತರಿದಿಕ್ಕಿದರು.

ಮೇರುಗಿರಿಯಂತೆ ತಮ್ಮ ಮುಂದುಗಡೆಯೇ ನಿಂತ ಮರುತಾತ್ಮಜನನ್ನು ಕಂಡು ದೈತ್ಯರು ಆರ್ಭಟಿಸುತ್ತ ಶತ್ರುಗಳ ಮೇಲೆ ಒಂದೇ ಸಮನೆ ಶರವರ್ಷವನ್ನು ಸುರಿಸಿದರು. ಕೊಲ್ಲ ಬಂದವರನ್ನು ಎದುರಿಸಿ ಇಕ್ಕೆಲದ ಸೈನಿಕರೂ ಪರಸ್ಪರ ಶರೀರಗಳನ್ನು ಸೀಳುತ್ತ ಬರಲು ಆಯುಧಗಳು ಕಣಿಕಟಿಲೆಂದು ಸದ್ದುಮಾಡಿದುವು, ಚಿಟಿಪಿಟಿಲೆಂದು ಮುರಿದು ನೆಲಕ್ಕುರುಳುತ್ತಿದ್ದುವು, ಎಡೆಬಿಡದೆ ಎರಗುತ್ತಿದ್ದ ಬಾಣಗಳನ್ನು ಕಂಡ ಕಲಿಗಳರಸ ಹನುಮಂತನು ರೋಷಾವೇಶದಿಂದ ಅಕಂಪನನನ್ನು ಕೊಲ್ಲುತ್ತೇನೆಂಬ ನಿಶ್ಚಯದಿಂದ ಒಂದು ದೊಡ್ಡ ಬೆಟ್ಟವನ್ನು ಕಿತ್ತು ಮುಂಬರಿಯುತ್ತ ಎದುರಾದ ನಿಶಾಚರ ಸೈನಿಕರನ್ನು ನೆಲಕ್ಕೆ ಕುಕ್ಕಿ ಅಸುರನ ಕಡೆಗೆ ನುಗ್ಗಿ ಬಂದ. ಇವನನ್ನು ಕೊಂದೇ ಬಿಡುವೆನೆಂಬ ಹುರುಪಿನಿಂದ ಅಂಜನಾಸುತನು ಕೈಲಿದ್ದ ಬೆಟ್ಟವನ್ನು ಗಿರಗಿರನೆ ತಿರುಗಿಸಿ ಅಕಂಪನನಿದ್ದ ಕಡೆಗೆ ಎಸೆದ. ತನ್ನೆಡೆಗೆ ಬರುವ ಗಿರಿಯನ್ನು ನೋಡಿದ ಅಕಂಪನನು ತ್ವರಿತವಾಗಿ ದೇವತೆಗಳನ್ನೇ ಅಡಗಿಸುವ ದಿವ್ಯಾಸ್ತ್ರವನ್ನು ಬಿಲ್ಲಿಗೆ ಹೂಡಿ ಮಧ್ಯದಲ್ಲಿಯೇ ಅದನ್ನು ತುರಿಡರಿಸಿಬಿಟ್ಟ. ಇದನ್ನು ಕರಡ ಆಂಜನೇಯನ ಕೋಪ ಇಮ್ಮಡಿಸಿತು. ವ್ಯಾ ಮರುಳ ದೈತ್ಯನನ್ನು ಸಂಹರಿಸಿ ಬಂಧುಬಾಂಧವರಿಗೆ ಹರುಷವನ್ನುಂಟು ಮಾಡುವೆನೆನುತ್ತ ಮತ್ತೊಂದು ಬೆಟ್ಟವನ್ನು ಹಿಡಿದು ವೇಗವಾಗಿ ಅಪ್ಪಳಿಸಲು ಅಕಂಪನನ ರಥ ಕುದುರೆ ಸಾರಥಿಗಳು ನೆಲಕ್ಕುರುಳಿದರು. ಆಗ ಅಕಂಪನನು ಲಗುಬಗೆಯಿಂದ ಒಂದು ತೋರವಾದ ಗದೆಯನ್ನು ಹಿಡಿದು ಮುರುತ್ತುತ ಮುಂದೆ ಅವನನ್ನು ಮೂದಲಿಸುತ್ತ ನಿಂತುಕೊಂಡ 'ನನ್ನ ಗದಾಘಾತದಿಂದ ನಿನ್ನ ಕೋಡಗಬುದ್ಧಿಯನ್ನು ನುಚ್ಚುನೂರು ಮಾಡುತ್ತೇನೆ. ಇಷ್ಟರಲ್ಲಿಯೇ ನೀನು ಯಮಪುರಿಯತ್ತ ಪಯಣ ಬೆಳಸುವೆ ಎನ್ನುತ್ತ ಬೊಬ್ಬರಿದ. ಆಗ ಅಸೀಮ ರೌದದಿಂದ ಹನುಮಂತನು ಬಾರಿ ಮರವೊಂದನ್ನು ಬುಡಸಮೇತ ಕಿತ್ತು ಅಕಂಪನನ ಮೇಲೆ ಬಲವಾಗಿ ಅಪ್ಪಳಿಸಲು ಅವನು ಧೊಪೆಂದು ನೆಲದ ಮೇಲುರುಳಿದ.

ಮುಂದುವರೆಯುವುದು

ವರಳೀ ಕಟ್ಟಡ ಪ್ರಕರಣ : ಸುರಾಜ್ಯ ಅಭಿಯಾನವು ರಾಷ್ಟ್ರಪತಿಗಳಿಗೆ ಸಲ್ಲಿಸಿದ ದೂರಿನ ನಂತರ ಕೇಂದ್ರ ಸರ್ಕಾರ ಆಕ್ಷನ್ ಮೋಡ್ ನಲ್ಲಿ !

ಮುಂಬೈ : ವರಳೀಯಲ್ಲಿರುವ ಭಾರತೀಯ ನೌಕಾಪಡೆಯ ಧೋರಣಾತ್ಮಕವಾಗಿ ಅತ್ಯಂತ ಸೂಕ್ಷ್ಮವಾದ 'ಐಎನ್‌ಎಸ್ ತ್ರಾಟಾ' ನೆಲೆಗೆ ಹೊಂದಿಕೊಂಡಿರುವ 'ವೃಂದಾವನ ಸಿಎಚ್‌ಎಸ್' ಕಟ್ಟಡದ ಮೂಲ ಅನುಮೋದಿತ ಎತ್ತರವನ್ನು 69.96 ಮೀಟರ್‌ನಿಂದ ನೇರವಾಗಿ 183.26 ಮೀಟರ್‌ಗೆ ಹೆಚ್ಚಿಸುವ ನಿರ್ಧಾರದಿಂದಾಗಿ ರಾಷ್ಟ್ರೀಯ ಭದ್ರತೆಗೆ ಗಂಭೀರ ಬೆದರಿಕೆ ಉಂಟಾಗಿದೆ. ಇಷ್ಟೊಂದು ಎತ್ತರದ ಕಟ್ಟಡದಿಂದಾಗಿ ನೌಕಾಪಡೆಯ ಅತಿಸೂಕ್ಷ್ಮ ಚಟುವಟಿಕೆಗಳ ಮೇಲೆ ನೇರ ನೋಟ ಬೀಳಲಿದ್ದು, ಕಟ್ಟಡದ ಮೇಲಿಂದ ನಡೆಯಬಹುದಾದ ಗೂಢಚಾರಿಕೆ, ದೂರಸಂವೇದಿ ಕ್ಯಾಮೆರಾಗಳು, ಡ್ರೋನ್‌ಗಳ ಹೆಚ್ಚುತ್ತಿರುವ ಬಳಕೆಯಿಂದಾಗಿ ಭದ್ರತೆಗೆ ದೊಡ್ಡ ಕನ್ನ ಬೀಳುವ ಸಾಧ್ಯತೆಯಿದೆ.

ಈ ವಿಷಯವು ನ್ಯಾಯಾಲಯದ ಮೆಟ್ಟಿಲೇರುವ ಮುನ್ನವೇ, ಸುರಾಜ್ಯ ಅಭಿಯಾನದ ಮಹಾರಾಷ್ಟ್ರ ರಾಜ್ಯ ಸಂಯೋಜಕರಾದ ಶ್ರೀ. ಅಭಿಷೇಕ್ ಮುರುಕುಟೆ ಅವರು 25 ಮೇ 2025 ಮತ್ತು 20 ಫೆಬ್ರವರಿ 2026 ರಂದು ಪ್ರಧಾನ ಮಂತ್ರಿ ಕಾರ್ಯಾಲಯ, ಗೃಹ ಸಚಿವಾಲಯ ಹಾಗೂ ರಕ್ಷಣಾ ಸಚಿವಾಲಯಕ್ಕೆ ಇ-ಮೇಲ್ ಮೂಲಕ ದೂರು ಸಲ್ಲಿಸಿದ್ದರು.

ನಂತರ 23 ಆಗಸ್ಟ್ 2026 ರಂದು ಅವರು ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಿಗೆ ವಿವರವಾದ ಮನವಿ ಪತ್ರ ಕಳುಹಿಸಿ ಈ ಕೆಳಗಿನ ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿದ್ದರು 1. ಎತ್ತರದ ಮೇಲೆ ಕಟ್ಟುನಿಟ್ಟಿನ ಮಿತಿ ಸೂಕ್ಷ್ಮ ಸೇನಾ ಮತ್ತು ಕರಾವಳಿ ರಕ್ಷಣಾ ವಲಯಗಳ 1 ರಿಂದ 2 ಕಿಲೋಮೀಟರ್ ವ್ಯಾಪ್ತಿಯಲ್ಲಿ ಹೊಸ ಕಟ್ಟಡಗಳ ಎತ್ತರದ ಮೇಲೆ ಕಟ್ಟುನಿಟ್ಟಿನ ಮಿತಿ ನಿಗದಿಪಡಿಸುವುದು. 2. ಕಡ್ಡಾಯ ನಗರಾಭಿವೃದ್ಧಿ ಪ್ರಾಧಿಕಾರಗಳು ನಿರ್ಮಾಣಕ್ಕೆ ಅನುಮೋದನೆ ನೀಡುವ ಮುನ್ನ ರಕ್ಷಣಾ ಸಚಿವಾಲಯ ಹಾಗೂ ನೌಕಾಪಡೆಯಿಂದ 'ನಿರಾಕ್ಷೇಪಣಾ ಪ್ರಮಾಣಪತ್ರ' ಪಡೆಯುವುದನ್ನು ಕಾನೂನುಬದ್ಧವಾಗಿ ಕಡ್ಡಾಯಗೊಳಿಸುವುದು. 3. 2011 ರ ಸುತ್ತೋಲೆಯ ಅನುಷ್ಠಾನ: ಸೇನಾ ನೆಲೆಗಳ ಭದ್ರತೆಗಾಗಿ 18 ಮೇ 2011 ರ ರಕ್ಷಣಾ ಸಚಿವಾಲಯದ ನಿಯಮಾವಳಿಯನ್ನು ಎಲ್ಲಾ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪಾಲಿಸುವುದು.ಸುರಾಜ್ಯ ಅಭಿಯಾನದ ಈ ನಿರಂತರ ಬೆಂಬಿಡದ ಪ್ರಯತ್ನದ ನಂತರ

ಶ್ರೀ. ಅಭಿಷೇಕ್ ಮುರುಕುಟೆ
ಸಂಯೋಜಕರು,
ಸುರಾಜ್ಯ ಅಭಿಯಾನ

ಈಗ ಕೇಂದ್ರ ಸರ್ಕಾರವು ಮುಂಬೈ ಹೈಕೋರ್ಟ್‌ನ ಮೊರೆ ಹೋಗಿದೆ. ಮುಖ್ಯ ನ್ಯಾಯಮೂರ್ತಿ ಮಹೇಶ್ ಚಂದ್ರ ತ್ರಿಪಾಠಿ ಹಾಗೂ ನ್ಯಾ. ಅದ್ವೈತ ಎಂ. ಸೇಠನಾ ಅವರಿದ್ದ ವಿಭಾಗೀಯ ಪೀಠದ ಮುಂದೆ ಕೇಂದ್ರ ಸರ್ಕಾರದ ಪರವಾಗಿ ಹಿರಿಯ ವಕೀಲ ಎ. ಎಸ್. ಖಾಂಡೇಪಾರಕರ್ ಅವರು ನೌಕಾಪಡೆಯ ಭದ್ರತೆಯ ಕುರಿತು ವಾದ ಮಂಡಿಸಿದರು. ಇದನ್ನು ಆಲಿಸಿದ ಹೈಕೋರ್ಟ್, ರಾಜ್ಯ ಸರ್ಕಾರ, ಬಿಎಂಸಿ ಹಾಗೂ ಮ್ಹಾಡಾಗೆ ನೋಟಿಸ್ ಜಾರಿ ಮಾಡಿ 2 ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ನಿರ್ದೇಶಿಸಿದೆ. ಅಲ್ಲದೆ, 'ಅರ್ಜಿಯ ಅಂತಿಮ ತೀರ್ಪಿನ ಮೇಲೆಯೇ ಮುಂದಿನ ನಿರ್ಮಾಣ ಕಾಮಗಾರಿ ಅವಲಂಬಿತವಾಗಿರುತ್ತದೆ,' ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.ಇದಲ್ಲದೆ, ಸುಪ್ರೀಂ ಕೋರ್ಟ್‌ನಲ್ಲಿಯೂ 'ಟೆಕ್ನೋ ಫ್ರೆಶ್‌ವರ್ಲ್ಡ್' ಪ್ರಕರಣದಲ್ಲಿ 18 ಮೇ 2011 ರ ಸುತ್ತೋಲೆಯ ಕುರಿತು ವಿವರಣೆ ನೀಡುವಂತೆ ಮ್ಹಾಡಾಗೆ ನಿರ್ದೇಶಿಸಲಾಗಿದೆ.

ಕಟ್ಟಡದ ಎತ್ತರವನ್ನು ದಿಢೀರನೆ ಎರಡೂವರೆ ಪಟ್ಟು ಹೆಚ್ಚಿಸುವಾಗ ಭದ್ರತಾ ನಿಯಮಗಳನ್ನು ಗಾಳಿಗೆ ತೂರಲಾಯಿತೇ ಎನ್ನುವುದೇ ನಮ್ಮ ಮುಖ್ಯ ಪ್ರಶ್ನೆಯಾಗಿತ್ತು. ನಮ್ಮ ಮನವಿಯ ನಂತರ ಕೇಂದ್ರ ಸರ್ಕಾರವು ನ್ಯಾಯಾಲಯಕ್ಕೆ ತೆರಳಿರುವುದು ಹಾಗೂ ನ್ಯಾಯಾಲಯವು ನೋಟಿಸ್ ಜಾರಿ ಮಾಡಿರುವುದು ನಮ್ಮ ಜನಹಿತ ಹೋರಾಟದ ಫಲಶ್ರುತಿಯಾಗಿದೆ. ಸುರಾಜ್ಯ ಅಭಿಯಾನವು ಈ ವಿವಾದಿತ ನಿರ್ಮಾಣ ಪರವಾನಗಿಗಳ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಿ, ದೇಶಾದ್ಯಂತ ಇರುವ ಎಲ್ಲಾ ಸೇನಾ ನೆಲೆಗಳ ಸಮೀಪದ ನಿರ್ಮಾಣ ಕಾಮಗಾರಿಗಳಿಗೆ ಏಕರೂಪದ ಮತ್ತು ಕಠಿಣ ಭದ್ರತಾ ನಿಯಮಾವಳಿಯನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸುತ್ತದೆ, ಎಂದು ಶ್ರೀ ಅಭಿಷೇಕ್ ಮುರುಕುಟೆ ಅವರು ಈ ಪ್ರಕರಣದ ಕುರಿತು ಮಾತನಾಡುತ್ತಾ ತಿಳಿಸಿದರು.

ನಿಮ್ಮದು ಕೊಂಚ ಬಿಸಿಲಿಗೂ ಕೆಂಪಗಾಗುವ ಸೂಕ್ಷ್ಮ ಚರ್ಮವೇ? ಇದರ ಆರೈಕೆ ತಿಳಿದಿರಲಿ

ಚರ್ಮದ ಆರೈಕೆ ಎಂದರೆ ಬೆಳ್ಳಗಾಗುವಂತೆ ಮಾಡುವುದು ಎಂದು ತಿಳಿದವರಿದ್ದಾರೆ. ಇನ್ನೂ ಕೆಲವರಿಗೆ ಸುಕ್ಕಾಗುವುದನ್ನು ತಡೆಯುವುದು, ಹಲವರಿಗೆ ಮೊಡವೆ ಯನ್ನು ಮಾಯ ಮಾಡುವುದು- ಹೀಗೆ ಅವರವರ ಭಾವಕ್ಕೆ. ಇವೆಲ್ಲ ಸುಳ್ಳಲ್ಲ, ಆದರೆ ಇವಿಷ್ಟೇ ಸತ್ಯವೂ ಅಲ್ಲ! ಚರ್ಮದ ಹೊಳಪು ಹೆಚ್ಚಿಸಿ, ಕಾಂತಿಯುಕ್ತವಾಗಿ ಮಾಡುವುದರಿಂದ ಹಿಡಿದು, ತಾರುಣ್ಯಪೂರ್ಣ ತ್ವಚೆಯವರೆಗೆ ಹಲವು ರೀತಿಯ ಪ್ರಯೋಜನಗಳಿವೆ ಚರ್ಮದ ಆರೈಕೆ ಮಾಡುವುದರಿಂದ. ಆದರೆ ಸೂಕ್ಷ್ಮ ಚರ್ಮದವರು ಯಾವುದೇ ಪ್ರಯೋಗವನ್ನು ತ್ವಚೆಯ ಮೇಲೆ ಮಾಡುವಾಗ ಹೆಚ್ಚಿನ ಎಚ್ಚರಿಕೆ ವಹಿಸುವುದು ಅಗತ್ಯ.

ದಪ್ಪ ಚರ್ಮದವರ ವಿರುದ್ಧ ಇವರು ಎಂದಲ್ಲ. ಕೊಂಚ ಬಿಸಿಲಿಗೂ ಚರ್ಮ ಕೆಂಪಾಗುವುದು, ಮೊಡವೆ ಇರುವಂಥ ಚರ್ಮ, ಅಲರ್ಜಿ ಇರುವಂಥ ಚರ್ಮ, ಬೆವರಿಗೆ ಸಂಕಟ ಪಡುವಂಥ ತ್ವಚೆಯನ್ನೆಲ್ಲ ಈ ಸೂಕ್ಷ್ಮ ಚರ್ಮದ ಸಾಲಿಗೆ ಸೇರಿಸಬಹುದು. ಯಾವುದೇ ಹೊಸ ಉತ್ಪನ್ನವನ್ನು ಇಂಥ ಚರ್ಮದವರು ಪ್ರಯೋಗ ಮಾಡುವಾಗ ಪ್ಯಾಚ್ ಟೆಸ್ಟ್ ಮಾಡುವುದು ಒಳ್ಳೆಯದು. ಅದಿಲ್ಲದಿದ್ದರೆ, ಅಲರ್ಜಿಯಾಗಿ ಒದ್ದಾಡುವಂತಾಗಬಹುದು. ನೈಸರ್ಗಿಕ ಉತ್ಪನ್ನಗಳ ಬಗ್ಗೆ ಒಲವಿದ್ದರೆ, ಶುದ್ಧವಾದ್ದನ್ನೇ ಬಳಸಿ.

ಕಠೋರವಾದ ಕೆನ್ಸರ್‌ಗಳು, ಎಕ್ಸ್‌ಫಾಲಿಯೇಟರ್‌ಗಳು ಇಂಥ ಚರ್ಮಕ್ಕೆ ಅಲ್ಲವೇ ಅಲ್ಲ. ಲಘುವಾದ ಫೋಮ್ ಉತ್ಪನ್ನಗಳು ಒಗ್ಗಬಹುದೇ ಪ್ರಯತ್ನಿಸಿ. ಆದಷ್ಟೂ ಪರಿಮಳವಿರುವ ಪ್ರಸಾದನ ಅಥವಾ ಕ್ರೀಮ್‌ಗಳನ್ನು ಬಳಸಬೇಡಿ. ಹೆಚ್ಚಿನವರಿಗೆ ಇದರಿಂದಲೇ ಅಲರ್ಜಿಯಾಗುವ ಸಾಧ್ಯತೆಯಿದೆ. ತ್ವಚೆಯ ತೇವ ಹೆಚ್ಚಿಸುವಂಥ ಮಾಯಿಶ್ಚರೈಸರ್‌ಗಳನ್ನು ಬಳಸುವಾಗ ಸೆರಮೈಡ್‌ಗಳು, ಗ್ಲಿಸರಿನ್ ಅಥವಾ ಹ್ಯಾಲುರೋನಿಕ್ ಆಮ್ಲ ಇರುವಂಥ ಉತ್ಪನ್ನಗಳು ಹಿತವಾಗಬಹುದು.

ಎಸ್‌ಐಆರ್ ರದ್ದತಿಗೆ ಆಗ್ರಹಿಸಿ ತಿರಂಗಾ ಮೆರವಣಿಗೆ

ಕೇಂದ್ರ ಚುನಾವಣಾ ಆಯೋಗವು ಕೇಂದ್ರ ಸರ್ಕಾರದ ಪ್ರಭಾವಕ್ಕೆ ಒಳಗಾಗಿ ಮತದಾರರ ಹಕ್ಕುಗಳನ್ನು ಕಸಿಯುವ ಪ್ರಯತ್ನ ನಡೆಸುತ್ತಿದೆ

• **ಉದಯವಾಹಿನಿ ಬೀದರ್:**

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ರದ್ದುಗೊಳಿಸಿ, ಪ್ರಜಾಪ್ರಭುತ್ವದ ಮರುಸ್ಥಾಪನೆ ಮಾಡಬೇಕು ಹಾಗೂ ಕೇಂದ್ರ ಮುಖ್ಯ ಚುನಾವಣಾ ಆಯುಕ್ತ

1 : ಮರುಸ್ಥಾಪನೆಗಾಗಿ ಜನಾಂದೋಲನ
2 : ಹಕ್ಕುಗಳನ್ನು ಕಸಿಯುವ ಪ್ರಯತ್ನ
3 : ಹಕ್ಕುಗಳಿಗೆ ಧಕ್ಕೆ ತರುವ ನೀತಿಗಳ

ಉದಯವಾಹಿನಿ ಚಿತ್ರ

ಜ್ಞಾನೇಶ ಕುಮಾರ್ ಅವರನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿ ಬೀದರ್‌ನಲ್ಲಿ ಪ್ರತಿಭಟನೆ ಹಾಗೂ ತಿರಂಗಾ ಧ್ವಜ ಮೆರವಣಿಗೆ ನಡೆಯಿತು. ಎಸ್‌ಐಆರ್ ವಿರೋಧಿ ಒಕ್ಕೂಟ, ಸಂಯುಕ್ತ ಕಿಸಾನ್ ಮೋರ್ಚಾ, ಜಾತ್ಯತೀತ ಪಕ್ಷಗಳು ಹಾಗೂ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಮಧ್ಯಾಹ್ನ 3 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನಾಕಾರರು ಜಮಾಯಿಸಿದರು. ಕೈಯಲ್ಲಿ ಭಿತ್ತಿಪತ್ರಗಳನ್ನು ಹಿಡಿದು ಎಸ್‌ಐಆರ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಬಳಿಕ ಅಂಬೇಡ್ಕರ್ ವೃತ್ತದಿಂದ ಭಗತ್ ಸಿಂಗ್ ವೃತ್ತದವರೆಗೆ ತಿರಂಗಾ ಧ್ವಜ ಹಿಡಿದು ಮೆರವಣಿಗೆ ನಡೆಸಿದರು. ರಾಷ್ಟ್ರಮಟ್ಟದ ಕರೆಯ ಮೇರೆಗೆ ಬೀದರ್ ಜಿಲ್ಲೆಯ ವಿವಿಧ ಜನಪರ ಸಂಘಟನೆಗಳು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದವು.

ದೇಶಾದ್ಯಂತ ಜಂತರ್ ಮಂತರ್ ಮಾದರಿಯ ಪ್ರತಿಭಟನಾ ಸಭೆಗಳನ್ನು ಆಯೋಜಿಸುವ ಮೂಲಕ ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಜನಾಂದೋಲನ ರೂಪಿಸುವ ಉದ್ದೇಶ ಹೊಂದಲಾಗಿದೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ಕೇಂದ್ರ ಚುನಾವಣಾ ಆಯೋಗವು ಕೇಂದ್ರ ಸರ್ಕಾರದ ಪ್ರಭಾವಕ್ಕೆ ಒಳಗಾಗಿ ಮತದಾರರ ಹಕ್ಕುಗಳನ್ನು ಕಸಿಯುವ ಪ್ರಯತ್ನ ನಡೆಸುತ್ತಿದೆ ಎಂದು ಆರೋಪಿಸಿದ ಪ್ರತಿಭಟನಾಕಾರರು, ಸಂವಿಧಾನಬದ್ಧ ಹಕ್ಕುಗಳಿಗೆ ಧಕ್ಕೆ ತರುವ ನೀತಿಗಳನ್ನು ಖಂಡಿಸಿದರು. ಮತದಾರರ ಪಟ್ಟಿಯ ಪರಿಷ್ಕರಣೆ ಪಾರದರ್ಶಕವಾಗಿ ಮತ್ತು ನ್ಯಾಯಸಮ್ಮತವಾಗಿ ನಡೆಯಬೇಕು. ಯಾವುದೇ ಅರ್ಹ ಮತದಾರರು ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಎಂದು ಒತ್ತಾಯಿಸಿದರು.

'ಹರ್ ಹಾಥ್ ಮೇ ತಿರಂಗಾ, ಹರ್ ಗಲಿ ಮೇ ಜಂತರ್ ಮಂತರ್' ಎಂಬ ಘೋಷಣೆಯೊಂದಿಗೆ ಜನರನ್ನು ಸಂಘಟಿಸಿ, ಪ್ರಜಾಪ್ರಭುತ್ವದ

> **ದೇಶದ ಭವಿಷ್ಯ ಯುವಜನರ ಕೈಯಲ್ಲಿದ್ದು, ಪ್ರಜಾಪ್ರಭುತ್ವವನ್ನು ಮರಳಿ ಪಡೆಯುವ ಹೋರಾಟದಲ್ಲಿ ಎಲ್ಲರೂ ಕೈಜೋಡಿಸಬೇಕು. ಎಸ್‌ಐಆರ್ ರದ್ದತಿಗಾಗಿ ಒಗ್ಗಟ್ಟಿನಿಂದ ಧ್ವನಿ ಎತ್ತಬೇಕು ಹಾಗೂ ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಪ್ರಶ್ನಿಸಬೇಕು ಎಂದು ಕರೆ ನೀಡಿದರು.** -ಸಂಯುಕ್ತ ಕಿಸಾನ್ ಮೋರ್ಚಾ

ಮೌಲ್ಯಗಳನ್ನು ರಕ್ಷಿಸಲು ಸಾಮೂಹಿಕ ಹೋರಾಟ ರೂಪಿಸುವ ಅಗತ್ಯವಿದೆ. ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ ಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಿ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಪಕ್ಷಪಾತರಹಿತ ಪ್ರಕ್ರಿಯೆಯ ಮೂಲಕ ಹೊಸ ಚುನಾವಣಾ ಆಯೋಗವನ್ನು ನೇಮಿಸಬೇಕು. ಮತದಾರರ

> ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಿ, ಮತದಾರರ ಪಟ್ಟಿಯಿಂದ ಅಳಿಸಲಾಗಿರುವ ಅರ್ಹ ಮತದಾರರ ಹೆಸರುಗಳನ್ನು ಮರುಸ್ಥಾಪಿಸಬೇಕು. ಚುನಾವಣಾ ಆಯುಕ್ತರ ನೇಮಕಾತಿ ಕಾಯ್ದೆ-2023ಕ್ಕೆ ಮಾಡಲಾದ ತಿದ್ದುಪಡಿಗಳನ್ನು ರದ್ದುಗೊಳಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪಟ್ಟಿಯನ್ನು ನ್ಯಾಯಸಮ್ಮತವಾಗಿ ಪರಿಷ್ಕರಿಸಬೇಕು. ಇವಿಎಂಗಳ ಬದಲಿಗೆ ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆಸುವ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ದೇಶದಲ್ಲಿ ಸಂವಿಧಾನ ಉಳಿದರೆ ಮಾತ್ರ ಪ್ರಜಾಪ್ರಭುತ್ವ ಉಳಿಯಲು ಸಾಧ್ಯ. ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆ ಹಾಗೂ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮುಂದುವರಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮುಹಮ್ಮದ್ ನಿಜಾಮುದ್ದೀನ್, ಬಾಬುರಾವ್ ಹೊನ್ನಾ, ಮಾರುತಿ ಬೌದ್ಧೆ, ಓಂಪ್ರಕಾಶ ರೊಟ್ಟೆ, ವಿಠಲದಾಸ ಪ್ಯಾಗೆ, ಡಾ. ಮಕ್ಸೂದ್ ಚಂದಾ, ಡಾ. ದೇವಿದಾಸ ತುಮಕುಂಟೆ, ರೇಷ್ಮಾ ಹಂಸರಾಜ್, ಮುಹಮ್ಮದ್ ಆಷಿಫುದ್ದೀನ್, ಎಂ.ಡಿ. ಶಫಾಯತ್ ಅಲಿ, ಗುರುನಾಥ ಗಡ್ಡೆ, ನಜೀರ್ ಸಾಬ್, ಡಾ. ಜಿಯಾವುಲ್ ಇಸ್ಲಾಂ, ಮುಹಮ್ಮದ್ ಇಸೂಫ್, ಮುಬಾಸೀರ್ ಸಿಂಧೆ, ಅರುಣ ಪಟೇಲ್, ಸೈಯದ್ ಮನ್ಸೂರ್ ಖಾದ್ರಿ, ಸಂತೋಷಕುಮಾರ ಜೋಳದಾಬಕೆ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಕೇಂಪುಮಣ್ಣು ಗಣಿಗಾರಿಕೆ ನೀರಿನ ಹೊಂಡದಲ್ಲಿ ಇಬ್ಬರು ಯುವಕರ ಸಾವು

• **ಉದಯವಾಹಿನಿ,ಚಿಂಚೋಳಿ**

ತಾಲ್ಲೂಕಿನ ಕುಂಚಾವರಂ ಗಡಿಪ್ರದೇಶಕ್ಕೆ ಹೊಂದಿಕೊಂಡಿರುವ ಬೋಪನಾವರಂ ಗ್ರಾಮದ ಕೇಂಪುಮಣ್ಣು ಗಣಿಗಾರಿಕೆಯ ತಗ್ಗಿನಲ್ಲಿ ನಿಂತ ನೀರಿನಲ್ಲಿ ಇಬ್ಬರು ಬಾಲಕರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಜರುಗಿದೆ.

ತಾಲ್ಲೂಕಿನ ಕುಂಚಾವರಂ ಗ್ರಾಮದ ಮೃತಪಟ್ಟ ಬಾಲಕರು ಅಜಯ ಬಕ್ಕಪ್ಪ (16),ಸುರೇಂದ್ರಕುಮಾರ ಶಾಂತಪ್ಪ (16) ಎಂದು ಗುರುತಿಸಲಾಗಿದ್ದು,ಕುಂಚಾವರಂ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು ಎಃದು ತಿಳಿದು ಬಂದಿದೆ. ಶಾಲೆಗೆ ರಜೆವಿದ್ದ ಕಾರಣ ಗೆಳೆಯರೊಂದಿಗೆ ಮಧ್ಯಾಹ್ನ ಈಜಲು ತೆರಳಿದ್ದಾರೆ,ಗೆಳೆಯರೊಂದಿಗೆ ಈಜಾಡಲು ತೆಗ್ಗಿನಲ್ಲಿ ನಿಂತ ನೀರಿನಲ್ಲಿ ಈಜಲು ಇಳಿದಾಗ ಈಜು ಬಾರದ ಕಾರಣ ಅಜಯ್ ಮತ್ತು ಸುರೇಂದ್ರಕುಮಾರ ನೀರಲ್ಲಿ

ಉದಯವಾಹಿನಿ ಚಿತ್ರ

ಮುಳುಗಿ ಮೃತಪಟ್ಟ ಘಟನೆ ಪ್ರಾಥಮಿಕ ತನಿಖೆಯಿಂದ ದುರ್ಘಟನೆ ಆಗಿರಬಹುದೆಂದು ತಿಳಿದುಬಂದಿದೆ.

ಮಕ್ಕಳ ಚೀರಾಟ ಕೇಳಿದ ಗ್ರಾಮಸ್ಥರು ಓಡಿಬಂದು ಮಕ್ಕಳ ಜೀವ ರಕ್ಷಣೆ ಮಾಡುವಷ್ಟರಲ್ಲಿ ಬಾಲಕರು ನೀರಲ್ಲಿ ಮುಳುಗಿ ಮೃತಪಟ್ಟಿದ್ದರು,ತೆಲಂಗಾಣ ರಾಜ್ಯದ ಬಂಟ್ವಾರ ಗ್ರಾಮದ ಪೊಲೀಸರು ಸ್ಥಳಕ್ಕೆ ಭೇಟಿನೀಡಿ ಪರಿಶೀಲಿಸಿ ಮೃತಪಟ್ಟ ಯುವಕರ ಶವವನ್ನು ಹೊರ ತೆಗೆದಿದ್ದಾರೆ.

ಕುಂಚಾವರಂ ಗ್ರಾಮದ ದಲಿತ ವರ್ಗದ ಮಕ್ಕಳು ಗ್ರಾಮದ ಓಣಿಯಲ್ಲಿ ದುಃಖದ ಛಾಯೆ ಮೂಡಿದೆ.

ಕರವೇ ಆಗ್ರಹ: ತೆಲಂಗಾಣ ರಾಜ್ಯದ ಬೋಪನಾವರಂ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಅಕ್ರಮವಾಗಿ ಕೆಂಪು ಮಣ್ಣು ಅಗೆದು ತೆಗ್ಗುಗುಂಡಿಗಳು ಹಾಕಿ ಮಣ್ಣು ಮಾರಾಟ ಮಾಡಲಾಗುತ್ತಿದೆ,ಆದರೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ತಡೆಗಟ್ಟಬೇಕು,ನಿಯಮಗಳು ಸಂಪೂರ್ಣವಾಗಿ ಉಲ್ಲಂಘಿಸಿ ಅಕ್ರಮವಾಗಿ ಗಣಿಗಾರಿಕೆ ಮಾಡಿದ್ದರಿಂದ ಮಕ್ಕಳು ಜೀವ ಕಳೆದುಕೊಳ್ಳಬೇಕಾಯಿತು ಮಣ್ಣು ಅಗೆಯುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಮತ್ತು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮಕ್ಕೈಗೊಂಡು ಮೃತ ಬಾಲಕರಿಗೆ ಕನಿಷ್ಠ 01 ಕೋಟಿ ರೂ.ಪರಿಹಾರ ಧನ ನೀಡಬೇಕು ಎಂದು ಕರವೇ ಸ್ವಾಭಿಮಾನ ಸೇನೆ ಅಧ್ಯಕ್ಷ ಲಿಂಬಾಜೀ ಚವ್ಹಾಣ ಆಗ್ರಹಿಸಿದ್ದಾರೆ.

ವೀರವನಿತೆ ಚೆನ್ನಮ್ಮ ಅವರ ಧೈರ್ಯ, ಸಾಹಸ ಯುವಜನತೆಗೆ ಪ್ರೇರಣೆ

• **ಉದಯವಾಹಿನಿ ಕೊಲ್ಹಾರ:**

ಕನ್ನಡ ನಾಡಿನ ವೀರವನಿತೆ, ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ಸ್ವಾತಂತ್ರ್ಯ ಹೋರಾಟದ ಮುಂಚೂಣಿ ನಾಯಕಿ ಕಿತ್ತೂರು ರಾಣಿ ಚೆನ್ನಮ್ಮ ಅವರ ಜಯಂತ್ಯುತ್ಸವವನ್ನು ಪಟ್ಟಣದ ಶ್ರೀ ರಾಣಿ ಚೆನ್ನಮ್ಮ ವೃತ್ತದಲ್ಲಿ ಬೆಂಕಿ ಬಾಯ್ಸ್ ವತಿಯಿಂದ ಭಕ್ತಿಭಾವ ಹಾಗೂ ಗೌರವದೊಂದಿಗೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ರಾಣಿ ಚೆನ್ನಮ್ಮ ಅವರ ಭಾವಚಿತ್ರಕ್ಕೆ ಗೌರವ ಸಲ್ಲಿಸಿ, ಅವರ ಸಾಹಸ, ಧೈರ್ಯ, ದೇಶಪ್ರೇಮ ಹಾಗೂ ನಾಡಿನ ಸ್ವಾಭಿಮಾನವನ್ನು ಸ್ಮರಿಸಲಾಯಿತು.

ಬ್ರಿಟಿಷರ ಆಡಳಿತದ ವಿರುದ್ಧ ಹೋರಾಡಿ, ನಾಡಿನ ಸ್ವಾತಂತ್ರ್ಯ ಮತ್ತು ಗೌರವಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ರಾಣಿ ಚೆನ್ನಮ್ಮ ಅವರ ಆದರ್ಶಗಳು ಇಂದಿನ ಯುವಜನತೆಗೆ ಸದಾ ಪ್ರೇರಣೆಯಾಗಿವೆ. ಅನ್ಯಾಯದ ವಿರುದ್ಧ ಹೋರಾಡುವ ಮನೋಭಾವ, ಆತ್ಮವಿಶ್ವಾಸ ಮತ್ತು ನಾಡಿನ ಬಗ್ಗೆ ಅಭಿಮಾನ ಬೆಳೆಸಿಕೊಳ್ಳುವುದು ಇಂದಿನ ಪೀಳಿಗೆಯ ಕರ್ತವ್ಯವಾಗಿದೆ ಎಂಬ ಸಂದೇಶವನ್ನು ಈ ಜಯಂತ್ಯುತ್ಸವ ಸಾರಿತು.

ಕಿತ್ತೂರು ರಾಣಿ ಚೆನ್ನಮ್ಮ ಅವರು ಕನ್ನಡ ನಾಡಿನ ಇತಿಹಾಸದಲ್ಲಿ ಅಚ್ಚಳಿಯದ ಛಾಪು ಮೂಡಿಸಿದ ವೀರ ಮಹಿಳೆಯಾಗಿದ್ದು, ಅವರ

ಉದಯವಾಹಿನಿ ಚಿತ್ರ

ಹೋರಾಟದ ಬದುಕು ಮಹಿಳಾ ಶಕ್ತಿ ಹಾಗೂ ಸ್ವಾಭಿಮಾನದ ಪ್ರತೀಕವಾಗಿದೆ.

ಇಂತಹ ಮಹನೀಯರ ಜಯಂತಿಗಳನ್ನು ಆಚರಿಸುವುದರಿಂದ ಮುಂದಿನ ಪೀಳಿಗೆಗೆ ನಾಡಿನ ಇತಿಹಾಸ, ಸಂಸ್ಕೃತಿ ಮತ್ತು ಸ್ವಾತಂತ್ರ್ಯ ಹೋರಾಟದ ಮಹತ್ವವನ್ನು ಪರಿಚಯಿಸಲು ಸಾಧ್ಯವಾಗುತ್ತದೆ.

ಈ ಕಾರ್ಯಕ್ರಮದಲ್ಲಿ ಪಟ್ಟಣದ ಬಿಜೆಪಿ ಮುಖಂಡರು ಹಾಗೂ ಉದ್ಯಮಿಗಳಾದ ಶ್ರೀ ಹನಮಂತ ಕಲ್ಲಪ್ಪ ಬೆಳ್ಳುಬ್ಬಿ, ಎಂ.ಎಸ್. ಲಿಂಬಿಕಾಯಿ, ರಾಮಣ್ಣ ಬಾಟಿ, ಶ್ರೀಶೈಲ ಕುಳಗೇರಿ, ಈರಣ್ಣ ಗಡ್ಡಿ ಪೂಜಾರಿ, ಶಿವಾನಂದ ಪತಂಗಿ, ಕಿಟ್ಟು ಕರಣೆ, ಚಂದ್ರು ಇಂಡಿಕರ, ಉಮೇಶ ಗಣಿ ಹಾಗೂ ರಾಜು ಮಂಕಣಿ ಸೇರಿದಂತೆ ಶ್ರೀ ರಾಣಿ ಚೆನ್ನಮ್ಮ ಗಜಾನನ ಯುವಕ ಮಂಡಳಿ ಮತ್ತು ಬೆಂಕಿ ಬಾಯ್ಸ್ ಸಂಘಟನೆಯ ಯುವಕರು ಹಿರಿಯರು ಉಪಸ್ಥಿತರಿದ್ದರು

ಚೆನ್ನಮ್ಮಳ ಧೈರ್ಯ ಶೌರ್ಯ ದೇಶಪ್ರೇಮ ಯುವ ಪೀಳಿಗೆಗೆ ಪ್ರೇರಣೆ

• **ಉದಯವಾಹಿನಿ, ಅಥಣಿ :**

ನಮ್ಮ ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ಮಹನೀಯರು ಹೋರಾಟ ಮಾಡಿದ್ದಾರೆ. ಅವರಲ್ಲಿ ಕನ್ನಡ ನಾಡಿನ ಮೊಟ್ಟಮೊದಲ ಮಹಿಳೆ ಕಿತ್ತೂರು ಸಂಸ್ಥಾನದ ವೀರರಾಣಿ ಚೆನ್ನಮ್ಮ. ಬ್ರಿಟಿಷ್ ಅಧಿಕಾರಿ ಠಾಕ್ರೆ ವಿರುದ್ಧ ಹೋರಾಟ ಮಾಡಿದ ದಿಟ್ಟ ವೀರ ಮಹಿಳೆ ಅವರ ಧೈರ್ಯ ಸಾಹಸ ಇಂದಿನ ಯುವ ಪೀಳಿಗೆಗೆ ಪ್ರೇರಣೆ. ಆದ್ದರಿಂದ ಅವರನ್ನ ಸ್ವಾತಂತ್ರ್ಯ ಹೋರಾಟದ ಬೆಳ್ಳಿ ಚುಕ್ಕಿ ಎಂದು ಕರೆಯಲಾಗುತ್ತದೆ. ಎಂದು ತಹಸಿಲ್ದಾರ ಸಿದರಾಯ ಬೋಸಗಿ ಹೇಳಿದರು.

ಉದಯವಾಹಿನಿ ಚಿತ್ರ

> **ಅದಕ್ಕಾಗಿ ಶಾಲಾ, ಕಾಲೇಜಿನ ಮಕ್ಕಳಿಗೆ ಭಾಷಣ ಸ್ಪರ್ಧೆ, ರಸಪ್ರಶ್ನೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ನಡೆಸುವುದು ಅಗತ್ಯ. ಅವರ ಜೀವನದ ಆದರ್ಶಗಳು ಇಂದಿನ ಯುವಕರಿಗೆ, ಮಹಿಳೆಯರಿಗೆ ಸ್ಫೂರ್ತಿಯ ಸೆಲೆಯಾಗಿವೆ ಎಂದರು.**

ಅವರು ಇಲ್ಲಿನ ಮಿನಿವಿಧಾನಸೌಧ ಹಾಗೂ ಪಟ್ಟಣದ ಚೆನ್ನಮ್ಮ ವೃತ್ತದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮಳ ಜಯಂತಿ ಕಾರ್ಯಕ್ರಮದ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ಕಿತ್ತೂರಿನ ರಾಣಿ ಚೆನ್ನಮ್ಮನ ಧೈರ್ಯ, ಶೌರ್ಯ ಮತ್ತು ದೇಶಪ್ರೇಮ ನಮ್ಮೆಲ್ಲರಿಗೆ ಪ್ರೇರಣೆ ಮತ್ತು ಸ್ಫೂರ್ತಿದಾಯಕವಾಗಿದೆ

ಅವರ ಜಯಂತಿ ಕಾರ್ಯಕ್ರಮ ಕೇವಲ ಭಾವಚಿತ್ರ ಪೂಜೆಗೆ ಸೀಮಿತವಾಗಬಾರದು, ಅವರ ಧೈರ್ಯ, ಸಾಹಸ ಮತ್ತು ದೇಶಪ್ರೇಮ ಇಂದಿನ ಯುವ ಜನಾಂಗಕ್ಕೆ ಮತ್ತು ಯುವತಿಯರಿಗೆ ಪ್ರೇರಣೆಯಾಗಬೇಕು ಎಂದರು. ಕನ್ನಡಪರ ಹೋರಾಟಗಾರ ಅಣ್ಣಾಸಾಬ ತೆಲಸಂಗ ಮಾತನಾಡಿ ಕಿತ್ತೂರು ರಾಣಿ ಚನ್ನಮ್ಮನ ಇತಿಹಾಸವು ಕೇವಲ ಪಠ್ಯಪುಸ್ತಕದ ಕಥೆಯಲ್ಲ, ಅದು ಯುವಜನರ ರಕ್ತದಲ್ಲಿ ದೇಶಪ್ರೇಮ, ಸ್ವಾಭಿಮಾನ ಮತ್ತು ಅದಮ್ಯ ಚೇತನವನ್ನು ತುಂಬುವ ದಿವ್ಯ ಮಂತ್ರವಾಗಿದೆ. ಅವರ ಸಾಹಸಮಯ ಜೀವನದ ಯಶೋಗಾಥೆಯನ್ನು ಮುಂದಿನ ಜನಾಂಗಕ್ಕೆ ತಿಳಿಸಿಕೊಡುವುದು ಅಗತ್ಯ.

ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ವೀರ ವನಿತೆಗೆ ನಮನ

• **ಉದಯವಾಹಿನಿ ಬೀದರ,:**

ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ದೃಢವಾಗಿ ಹೋರಾಡಿ, ಕಿತ್ತೂರು ಸಂಸ್ಥಾನದ ಸ್ವಾಭಿಮಾನವನ್ನು ಕಾಪಾಡಿದ ರಾಣಿ ಚೆನ್ನಮ್ಮನವರ ಶೌರ್ಯ, ಸಾಹಸ ಹಾಗೂ ತ್ಯಾಗವನ್ನು ಸ್ಮರಿಸಲಾಯಿತು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹೇಳಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕನ್ನಡಿಗರ ಹೆಮ್ಮೆಯ ವೀರವನಿತೆ ಕಿತ್ತೂರು ರಾಣಿ ಚೆನ್ನಮ್ಮಾಜಿಯವರ ಜನ್ಮದಿನದ ಅಂಗವಾಗಿ ಅವರು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ಭವಾನಿ ಬಿಜಲಗಾಂವ ಸಪ್ತಾಹದಲ್ಲಿ ಶಾಸಕ ಚವ್ಹಾಣ ಭಾಗಿ

• **ಉದಯವಾಹಿನಿ ಕಮಲನಗರ :**

ತಾಲ್ಲೂಕಿನ ಭವಾನಿ ಬಿಜಲಗಾಂವ ಗ್ರಾಮದ ಭವಾನಿ ದೇಗುಲದಲ್ಲಿ ನಡೆಯುತ್ತಿರುವ ಅಖಂಡ ಹರಿನಾಮ ಸಪ್ತಾಹ ಕಾರ್ಯಕ್ರಮದಲ್ಲಿ ಶಾಸಕ ಪ್ರಭು ಬಿ.ಚವ್ಹಾಣ ಅವರು ಭಾಗವಹಿಸಿದರು.

ದೇವಿಯ ದರ್ಶನ ಪಡೆದು ರೈತರು ಮತ್ತು ನಾಡಿನ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಇದೇ ವೇಳೆ ಕೀರ್ತನಕಾರರೊಂದಿಗೆ ಹೆಜ್ಜೆ ಹಾಕಿ ಭಕ್ತರ ಗಮನ ಸೆಳೆದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭವಾನಿ ಮಾತೆಯ ಪರಮ ಭಕ್ತನಾಗಿರುವ ನನಗೆ ಈ ದೇವಸ್ಥಾನಕ್ಕೆ ಭೇಟಿ ನೀಡಿದಾಗಲೆಲ್ಲ ಅಪಾರ ಆನಂದ ಹಾಗೂ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಭವಾನಿ ಮಾತೆಯ ಆಶೀರ್ವಾದದಿಂದಲೇ ಜನರ ಸೇವೆ ಮಾಡಲು ಶಕ್ತಿ ಮತ್ತು ಪ್ರೇರಣೆ ದೊರೆಯುತ್ತಿದೆ. ಜನರ ಸೇವೆಯನ್ನು ದೇವರ ಸೇವೆಯೆಂದು ಭಾವಿಸಿ, ಕ್ಷೇತ್ರದ ಜನರ ಸುಖ-ದುಃಖಗಳಲ್ಲಿ ಭಾಗಿಯಾಗುತ್ತಾ ಬಂದಿದ್ದೇನೆ ಎಂದರು.

ಈ ಬಾರಿ ಬರಗಾಲದ ಪರಿಸ್ಥಿತಿಯಿಂದ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ರೈತರ ಬದುಕಿನಲ್ಲಿ ಮತ್ತೆ ಆಶಾಕಿರಣ ಮೂಡಲಿ, ಶೀಘ್ರ ಉತ್ತಮ ಮಳೆಯಾಗಿ ಒಣಗುತ್ತಿರುವ ಬೆಳೆಗಳಿಗೆ ಜೀವಕಳೆ ಬರಲಿ, ಕೆರೆ-ಕಟ್ಟೆಗಳು ತುಂಬಿ ರೈತರ ಬಾಳು ಹಸನಾಗಲಿ ಎಂದು ಭವಾನಿ ಮಾತೆಯಲ್ಲಿ ಪ್ರಾರ್ಥಿಸಿದ್ದೇನೆ.

ಬಿಜಲಗಾಂವ ಗ್ರಾಮವು ವಾರಕಾರಿ ಸಂಪ್ರದಾಯವನ್ನು ಶ್ರದ್ಧಾಭಕ್ತಿಯಿಂದ ಪಾಲಿಸಿಕೊಂಡು ಬರುತ್ತಿರುವ ಸುಂದರ ಗ್ರಾಮವಾಗಿದೆ. ಅಖಂಡ ಹರಿನಾಮ ಸಪ್ತಾಹ ಆಯೋಜಿಸುವ ಮೂಲಕ ಭಕ್ತಿಯನ್ನು ಅನಾವರಣಗೊಳಿಸುವುದರ ಜೊತೆಗೆ ನಮ್ಮ

ಉದಯವಾಹಿನಿ ಚಿತ್ರ

> **ರೈತರು ಸಂಕಷ್ಟದಿಂದ ಹೊರಬಂದು ನೆಮ್ಮದಿಯ ಬದುಕು ಕಟ್ಟಿಕೊಳ್ಳುವಂತಾಗಲಿ ಎಂದು ದೇವಿಗೆ ಬೇಡಿಕೊಂಡಿದ್ದೇನೆ. ಶೀಘ್ರದಲ್ಲಿ ಮಳೆಯಾಗುತ್ತದೆ ಎಂಬ ವಿಶ್ವಾಸವಿದೆ ಎಂದರು.**

ನಾಡಿನ ಸಂಸ್ಕೃತಿ, ಸಂಪ್ರದಾಯ ಹಾಗೂ ಆಧ್ಯಾತ್ಮಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುತ್ತಿರುವುದು ಅತ್ಯಂತ ಸಂತೋಷದ ಸಂಗತಿ. ಇಂತಹ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಭಕ್ತಿ, ಸೌಹಾರ್ದತೆ ಮತ್ತು ಪರಸ್ಪರ ಪ್ರೀತಿಯನ್ನು ಬೆಳೆಸುತ್ತವೆ ಎಂದು ಹೇಳಿದರು.

ಭೂಮಿ ಪೂಜೆ ಗುಣಮಟ್ಟದ ಕಾಮಗಾರಿಗೆ ಆದ್ಯತೆ

• **ಉದಯವಾಹಿನಿ ಅಥಣಿ :**

ಪುರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಾರ್ಡುಗಳ ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಪುರಸಭೆ ಬದ್ಧವಾಗಿದೆ.17ನೇ ವಾರ್ಡಿನಲ್ಲಿ ಬರುವ ಎಪಿಎಂಸಿ ಗವಿಸಿದ್ದಮಡ್ಡಿ ರಸ್ತೆ ಹದಗೆಟ್ಟಿದ್ದರಿಂದ ಸಾರ್ವಜನಿಕರ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿತ್ತು. ಸಾರ್ವಜನಿಕರ ಬಹುದಿನಗಳ ಬೇಡಿಕೆಯನ್ನು ಪರಿಗಣಿಸಿ ಪುರಸಭೆಯ 10 ಲಕ್ಷ ಅನುದಾನದಲ್ಲಿ ಸಿಸಿ ರಸ್ತೆ ನಿರ್ಮಾಣ ಕೈಗೊಳ್ಳಲಾಗಿದೆ. ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಂಡು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು ಎಂದು ಪುರಸಭೆ ಅಧ್ಯಕ್ಷೆ ಶಿವಲೀಲಾ ಬುಟಾಳಿ ಹೇಳಿದರು ಪಟ್ಟಣದ ಎಪಿಎಂಸಿ 17ನೇ ವಾರ್ಡಿನಲ್ಲಿ ಪುರಸಭೆಯ ಅನುದಾನದಡಿ 10 ಲಕ್ಷ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಪುರಸಭೆ ಅಧ್ಯಕ್ಷೆ ಶಿವಲೀಲಾ ಬುಟಾಳಿ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು. ಈ ವೇಳೆ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ್ ಮಾತನಾಡಿ, ಅಥಣಿ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಪುರಸಭೆ ನಿರಂತರವಾಗಿ ಶ್ರಮಿಸುತ್ತಿದೆ. ಈ ವಾರ್ಡ ಜನರ ಬಹುದಿನಗಳ ಬೇಡಿಕೆ ಈಡೇರಿದ್ದು, ಕಾಮಗಾರಿಯ ಗುಣಮಟ್ಟಕ್ಕೆ ಆದ್ಯತೆ ನೀಡಲಾಗುವುದು. ವಾರ್ಡನ ಇತರ ಸಮಸ್ಯೆಗಳನ್ನು ಕೂಡ ಹಂತ ಹಂತವಾಗಿ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವದಾಗಿ ಹೇಳಿದರು.

ಹೋಂ ಸ್ಟೇಗಳ ನೋಂದಣಿ ಕಡ್ಡಾಯ ನೋಂದಾಯಿಸದಿದ್ದರೆ ಶಾಶ್ವತ ಬಂದ್

• **ಉದಯವಾಹಿನಿ ಹೊಸಪೇಟೆ.**

ಉದಯವಾಹಿನಿ ಚಿತ್ರ

ವಿಶ್ವಪಾರಂಪರಿಕ ತಾಣವಾದ ಹಂಪಿ, ಕಮಲಾಪುರ ಸೇರಿದಂತೆ ವಿಜಯನಗರ ಜಿಲ್ಲೆಯ ವಿವಿಧೆಡೆ ಪ್ರವಾಸಿಗರಿಗೆ ವಸತಿ ಸೌಲಭ್ಯ ಕಲ್ಪಿಸುವ ಹೋಂ ಸ್ಟೇ ಮಾಲೀಕರು ಕಡ್ಡಾಯವಾಗಿ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಕೊಂಡು, ಅಗತ್ಯ ಅನುಮೋದನೆ ಪಡೆಯಬೇಕು. ನೋಂದಣಿ ಪ್ರಮಾಣಪತ್ರ ಪಡೆಯದೆ ಅನಧಿಕೃತವಾಗಿ ಹೋಂ ಸ್ಟೇ ನಡೆಸುವವರ ವಿರುದ್ಧ ಕೆ.ಟಿ.ಟಿ.ಎಫ್-2015 ಕಾಯ್ದೆಯಡಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನಿಕೇರಿ ಎಚ್ಚರಿಕೆ ನೀಡಿದ್ದಾರೆ.

ಪ್ರವಾಸಿಗರ ಅನುಕೂಲಕ್ಕಾಗಿ ಹೋಂ ಸ್ಟೇ ಪ್ರಾರಂಭಿಸಲು ಅಥವಾ ಸ್ಥಾಪಿಸಲು ನಿಯಮಾನುಸಾರ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಈ ಹಿನ್ನೆಲೆಯಲ್ಲಿ ಹಂಪಿ, ಕಮಲಾಪುರ ಹಾಗೂ ಜಿಲ್ಲೆಯ ಇತರೆ ಪ್ರದೇಶಗಳಲ್ಲಿ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಹೋಂ ಸ್ಟೇ ಮಾಲೀಕರು, ತಮ್ಮ ವಸತಿ ಸೌಲಭ್ಯಗಳನ್ನು ಕಾನೂನುಬದ್ಧವಾಗಿ ಮುಂದುವರಿಸಲು ಅಗತ್ಯ ದಾಖಲೆಗಳೊಂದಿಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯಬೇಕು.

ಚಿಕ್ಕಮಗಳೂರಿನಲ್ಲಿ ಭರ್ಜರಿ ಮಳೆ: ತಂಪಾದ ಇಳೆ

ಮುಳ್ಳಯ್ಯನಗಿರಿ, ಬಾಬಾ ಬುಡನ್‌ಗಿರಿ ಭಾಗದಲ್ಲೂ ಧಾರಾಕಾರವಾಗಿ ಮಳೆ ಸುರಿಯಿತು. ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು

• **ಉದಯವಾಹಿನಿ ಚಿಕ್ಕಮಗಳೂರು:**

ನಗರ ಸೇರಿ ಸುತ್ತಮುತ್ತ ಭರ್ಜರಿ ಮಳೆ ಯಾಗಿದ್ದು, ಮಳೆಗಾಲದ ವಾತಾವರಣ ನಿರ್ಮಾಣವಾಯಿತು. ಮಳೆಗಾಲದಲ್ಲೂ ಬಿರು ಬಿಸಿಲು ಕಂಡಿದ್ದ ಜನ ನಿರಂತರ ಸುರಿದ ಮಳೆ ಕಂಡು ಸಂತಸಪಟ್ಟರು. ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣ ನಿರ್ಮಾಣವಾಗಿತ್ತು. ಮಧ್ಯಾಹ್ನ

1 : ನಿರಂತರ ಸುರಿದ ಮಳೆ ಕಂಡು ಸಂತಸಪಟ್ಟರು
2 : ಮಳೆಗಾಲದಲ್ಲೂ ಬಿರು ಬಿಸಿಲು ಕಂಡಿದ್ದ ಜನ
3 : ಸುರಿದ ಮಳೆಯಿಂದ ಪ್ರವಾಸಿಗರು ಪರದಾಡಿದರು

1 ಗಂಟೆ ವೇಳೆಗೆ ಆರಂಭವಾದ ಮಳೆ ಮೊದಲಿಗೆ ಸಣ್ಣದಾಗಿತ್ತು. ನಂತರ ಬಿರುಸು ಪಡೆದುಕೊಂಡು 3.30ರ ತನಕ ನಿರಂತರವಾಗಿ ಸುರಿಯಿತು. ಬಿಟ್ಟೂ ಬಿಡದೆ ಸುರಿದ ಮಳೆಯಿಂದ ನಗರದ ಚರಂಡಿಗಳು ತುಂಬಿ ರಸ್ತೆಗಳಲ್ಲಿ ನೀರು ಹರಿಯಿತು. ಹರಿಯುವ ನೀರಿನ ನಡುವೆ ವಾಹನಗಳ ಸಂಚರಿಸಿದವು. ಮುಳ್ಳಯ್ಯನಗಿರಿ, ಬಾಬಾ ಬುಡನ್‌ಗಿರಿ ಭಾಗದಲ್ಲೂ ಧಾರಾಕಾರವಾಗಿ

ಉದಯವಾಹಿನಿ ಚಿತ್ರ

ಮಳೆ ಸುರಿಯಿತು. ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು. ಬೆಳಿಗ್ಗೆ ಮೋಡ ಕವಿದ ವಾತಾವರಣದ ಜತೆಗೆ ಆಹ್ಲಾದಕರ ವಾತಾವರಣ ಇತ್ತು. ನಂತರ ನಿರಂತರವಾಗಿ ಸುರಿದ ಮಳೆಯಿಂದ ಪ್ರವಾಸಿಗರು ಪರದಾಡಿದರು. ಜೂನ್‌ನಿಂದಲೂ ಮಳೆಗಾಲದ ವಾತಾವರಣ ಇಲ್ಲದೆ ಬಿಸಿಲಿನ ವಾತಾವರಣ ಕಂಡು ಜನ ಬೇಸರಗೊಂಡಿದ್ದರು. ಇದ್ದಕ್ಕಿದ್ದಂತೆ ಸುರಿದ ಮಳೆಯಿಂದ ಜನ ಸಂತಸಗೊಂಡರು. ನಗರದ ಹೊರ ವಲಯದ ಗ್ರಾಮೀಣ ಪ್ರದೇಶಗಳಲ್ಲಿ ಹೊಲ, ಗದ್ದೆ ಮತ್ತು ತೋಟಗಳಲ್ಲಿ ನೀರು ನಿಲ್ಲುವಷ್ಟು ಮಳೆ ಸುರಿಯಿತು. ಸಂಜೆ ಬಳಿಕವೂ ಸೋನೆ ಮಳೆಯಂತೆ ಜಿಟಿಜಿಟಿ ಮಳೆ ಸುರಿದು ಇಳೆಯನ್ನು ಸಂಪೂರ್ಣ ತಂಪಾಗಿಸಿತು.

> **ಗೊಬ್ಬರ ಹಾಕಿ ಬೇಸಾಯ ಮಾಡಿದ ಅಡಿಕೆ ತೋಟಕ್ಕೆ ಮಳೆಯಿಂದ ಅನುಕೂಲವಾಗಿದೆ. ದೀಪಾವಳಿ ಹಬ್ಬಕ್ಕೂ ಮೊದಲು ಒಂದು ಕೊಯಿಲು ಅಡಿಕೆಗೊನೆ ತೆಗೆಯಲು ತಯಾರಿ ನಡೆಸಿದ್ದ ಕೃಷಿಕರಿಗೆ ಆತಂಕ ಎದುರಾಗಿದೆ. ಕಾಫಿ ಕಾಯಿಗಳು ಬಲಿತಿದ್ದು, ಹಣ್ಣು ಕೊಯಿಲು ಮಾಡಿ ಒಣಗಿಸಲು ಸಮಸ್ಯೆ ತಂದೊಡ್ಡಿದೆ.** -ರೈತರು

ಹಿಂಗಾರು ಬೆಳೆಗಳಾದ ಜೋಳ, ಕಡಲೆ ಮತ್ತು ಹುರುಳಿ ಕಾಳು ಬಿತ್ತನೆಗೆ ಅನುಕೂಲವಾಗಿದೆ. ಈಗಾಗಲೇ ರಾಗಿ ಬಿತ್ತನೆ ಮಾಡಿ ಮಳೆಗಾಗಿ ಕಾದಿದ್ದ ರೈತರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಮುಂದುವರೆದ ತುಂತುರು ಮಳೆ: ನರಸಿಂಹರಾಜಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಶುಕ್ರವಾರ ಸಾಧಾರಣದಿಂದ ತುಂತುರು ಮಳೆ ಸುರಿಯಿತು. ಬೆಳಿಗ್ಗೆಯಿಂದಲೇ ಮೋಡಕವಿದ ವಾತಾವರಣವಿತ್ತು. ಮಧ್ಯಾಹ್ನದ ವೇಳೆಗೆ ತುಂತುರು ಮಳೆ ಸುರಿಯಿತು. ಸಂಜೆ 4ರ ವೇಳೆಗೂ ತುಂತುರು ಮಳೆ ಸುರಿಯಿತು. ಸಂಜೆ 6ರ ನಂತರ ಆರಂಭವಾದ ಮಳೆ ಹಾಗೆಯೇ ಮುಂದುವರೆದಿತ್ತು.

ಗುರುವಾರದಿಂದ ಬೆಳಿಗ್ಗೆವರೆಗೆ ನರಸಿಂಹರಾಜಪುರದಲ್ಲಿ 1.90 ಸೆಂ.ಮೀ, ಬಾಳೆಹೊನ್ನೂರಿನಲ್ಲಿ 1.10 ಸೆಂ.ಮೀ ಮಳೆಯಾಗಿತ್ತು.

> ಅಡಿಕೆ ತೋಟದಲ್ಲಿ ಯಂತ್ರದ ಮೂಲಕ ಕಳೆ ತೆಗೆಯುವ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರಿಗೆ ಮಳೆ ಅಡ್ಡಿಯುಂಟು ಮಾಡಿದೆ. ಅಡಿಕೆ ಗೊನೆ ತೆಗೆಯುವುದು ತಡವಾದರೆ ಗೋಟು ಅಡಿಕೆಯಾಗಿ ಉದುರಿ ಆದಾಯ ನಷ್ಟವಾಗಬಹುದೆಂಬ ಚಿಂತೆ ಕೃಷಿಕರಿಗೆ

ಬಿರುಸಿನ ಮಳೆ: ಮೂಡಿಗೆರೆ ತಾಲ್ಲೂಕಿನ ಹಲವು ಭಾಗಗಳಲ್ಲಿ ಬಿರುಸಿನ ಮಳೆಯಾಯಿತು.

ಪಟ್ಟಣ ಸೇರಿದಂತೆ ಬಿಳಗುಳ, ಮಾಡ್ಕಲ್, ಹ್ಯಾಂಡ್ ಪೋಸ್ಟ್, ಬಿದರಹಳ್ಳಿ, ಹಾಂದಿ, ಆಲ್ದೂರು, ಹೊರಟ್ಟಿ, ಸಬ್ಬೇನಹಳ್ಳಿ, ಮೂಲರಹಳ್ಳಿ, ದೇವರುಂದ, ಹಂತೂರು, ದೇವರಮನೆ, ಕುಂದೂರು, ಸಾರಗೋಡು ಭಾಗಗಳಲ್ಲಿ ಉತ್ತಮ ಮಳೆಯಾಯಿತು. ಮಧ್ಯಾಹ್ನ 12ಕ್ಕೆ ಪ್ರಾರಂಭವಾದ ಮಳೆಯು ಸಂಜೆ 4ರವರೆಗೂ ಎಡೆಬಿಡದೇ ಸುರಿಯಿತು. ಸೊರಗಿ ಹೋಗಿದ್ದ ಹೇಮಾವತಿ ಸೇರಿದಂತೆ ಎಲ್ಲಾ ನದಿಗಳಲ್ಲೂ ಸಂಜೆ ವೇಳೆಗೆ ನೀರಿನ ಹರಿಯುವ ಮಟ್ಟದಲ್ಲಿ ಸಲ್ಪ ಪ್ರಮಾಣದಲ್ಲಿ ಏರಿಕೆ ಕಂಡಿತು. ಮಳೆಯಿಲ್ಲದೇ ಕಂಗಾಲಾಗಿದ್ದ ಭತ್ತದ ಬೆಳೆಗಾರರಿಗೆ ಮಳೆಯು ಖುಷಿ ನೀಡಿದರೆ, ಗೊಬ್ಬರ ಹರಡಲು ಮಳೆಗಾಗಿ ಪರಿತಪಿಸುತ್ತಿದ್ದ ಕಾಫಿ ಬೆಳೆಗಾರರಿಗೆ ಸಂತಸ ಉಂಟಾಯಿತು.

ಮಿನಿ ನ್ಯೂಸ್

ಆವಿಷ್ಕಾರಗಳಿಂದ ವಿಕಸಿತ ಭಾರತಕ್ಕೆ ಕೊಡುಗೆ ನೀಡಬೇಕು

• **ಉದಯವಾಹಿನಿ ಕಲಬುರಗಿ.:**

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಕಾನೂನು ಅಧ್ಯಯನ ವಿಭಾಗವು ಆಂತರಿಕ ಗುಣಮಟ್ಟ ಭರವಸೆ ಕೋಶದ ಸಹಯೋಗದಲ್ಲಿ ವಿ.ವಿ.ಯ ಸಭಾಂಗಣದಲ್ಲಿ ಬೌದ್ಧಿಕ ಆಸ್ತಿ ಮತ್ತು ನೈತಿಕತೆ ಕುರಿತು ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಿತು. ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಸಿಯುಕೆ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು, ವಿದ್ಯಾರ್ಥಿಗಳು ತಮ್ಮ ಆಲೋಚನೆಗಳ ಆವಿಷ್ಕಾರಗಳನ್ನು ಪೇಟೆಂಟ್‌ಗಳು, ನವೀನ ಉತ್ಪನ್ನಗಳು ಮತ್ತು ಸ್ಟಾರ್ಟ್‌ಅಪ್‌ಗಳಾಗಿ ಪರಿವರ್ತಿಸಿ ವಿಕಸಿತ ಭಾರತ 2047ರ ಗುರಿ ಸಾಧನೆಗೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು. ಮೂಲ ಆಲೋಚನೆಗಳ ರಕ್ಷಣೆ ಮತ್ತು ನಾವೀನ್ಯತೆಯ ಉತ್ತೇಜನದಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳ ಮಹತ್ವವನ್ನು ವಿವರಿಸಿದ ಅವರು, ಸಂಶೋಧನೆ, ನಾವೀನ್ಯತೆ ಹಾಗೂ ನೈತಿಕ ಸಂಶೋಧನಾ ಪದ್ಧತಿಗಳಿಗೆ ಆದ್ಯತೆ ನೀಡಿ ರಾಷ್ಟ್ರೀಯ ಅಭಿವೃದ್ಧಿ ಮತ್ತು ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳು ಹಾಗೂ ಸಂಶೋಧಕರಿಗೆ ಸಲಹೆ ನೀಡಿದರು. ಮುಖ್ಯ ಭಾಷಣ ಮಾಡಿದ ನವದೆಹಲಿಯ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ಹಿರಿಯ ಪ್ರಧಾನ ವಿಜ್ಞಾನಿ ಡಾ. ಕನಿಕಾ ಮಲಿಕ್ ಅವರು, ತಾಂತ್ರಿಕ ಪ್ರಗತಿ, ಕಾನೂನು ರಕ್ಷಣೆ ಮತ್ತು ವಾಣಿಜ್ಯೀಕರಣದಲ್ಲಿ ಪೇಟೆಂಟ್‌ಗಳ ಮಹತ್ವವನ್ನು ವಿವರಿಸಿದರು. ಪೇಟೆಂಟ್ ಕರಡು ರಚನೆ, ಪರವಾನಗಿ ಮತ್ತು ಬೌದ್ಧಿಕ ಆಸ್ತಿ ನಿರ್ವಹಣೆಯ ಕುರಿತು ಅರಿವು ಬೆಳೆಸಿಕೊಳ್ಳುವಂತೆ ವಿದ್ಯಾರ್ಥಿಗಳು ಹಾಗೂ ಸಂಶೋಧಕರಿಗೆ ಕರೆ ನೀಡಿದರು. ವೈಜ್ಞಾನಿಕ ಸಂಶೋಧನೆಗಳನ್ನು ನವೀನ ಪರಿಹಾರಗಳಾಗಿ ಪರಿವರ್ತಿಸುವ ಮೂಲಕ ರಾಷ್ಟ್ರೀಯ ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡಬೇಕು ಎಂದು ಹೇಳಿದರು.

ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ದಲಿತ ಸೇನೆ ಆಕ್ರೋಶ

• **ಉದಯವಾಹಿನಿ ಕಲಬುರಗಿ,**

ಕಲ್ಲಹಂಗರಗಾ ಗ್ರಾಮದಿಂದ ಕಲಬುರಗಿ ನಗರಕ್ಕೆ ಆಗಮಿಸುವ ಮುಖ್ಯ ರಸ್ತೆಯ ಮಧ್ಯೆ ಬರುವ ಜಂಬಗಾ ಕ್ರಾಸ್ ಹತ್ತಿರದ ದೊಡ್ಡ ಸೇತುವೆಯ ಮೇಲೆ ಬೃಹತ್ ಗಾತ್ರದ ಗುಂಡಿಗಳು ಬಿದ್ದಿದ್ದು, ವಾಹನ ಸವಾರರು ಹಾಗೂ ಸಾರ್ವಜನಿಕರು ಪ್ರತಿನಿತ್ಯ ತೀವ್ರ ತೊಂದರೆ ಅನುಭವಿಸುವಂತಾಗಿದೆ. ಈ ರಸ್ತೆಯು ಸಾರ್ವಜನಿಕರು ಹಾಗೂ ವಾಹನ ಸವಾರರು ಸಂಚರಿಸುವ ಪ್ರಮುಖ ರಸ್ತೆಯಾಗಿದ್ದು, ಸೇತುವೆಯ ಮೇಲೆ ಬಿದ್ದಿರುವ ದೊಡ್ಡ ಗುಂಡಿಗಳಿಂದ ಅಪಘಾತ ಸಂಭವಿಸುವ ಆತಂಕ ಎದುರಾಗಿದೆ. ವಿಶೇಷವಾಗಿ ದ್ವಿಚಕ್ರ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ ನೀಡಬೇಕಾಗಿದೆ. ಆದರೆ, ಇಂತಹ ಗಂಭೀರ ಸಮಸ್ಯೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಶಾಸಕರು ತಕ್ಷಣ ಸ್ಪಂದಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದಲಿತ ಸೇನೆಯ ವಿಭಾಗೀಯ ಅಧ್ಯಕ್ಷರಾದ ಕಪಿಲ ಜೆ. ವಾಲಿ ಅವರು ಆಗ್ರಹಿಸಿದ್ದಾರೆ. ಸಾರ್ವಜನಿಕರ ಜೀವಕ್ಕೆ ಅಪಾಯ ಉಂಟುಮಾಡುವ ಈ ಸಮಸ್ಯೆಯನ್ನು ಇನ್ನೂ ವಿಳಂಬ ಮಾಡದೆ, ಸೇತುವೆಯ ಮೇಲಿರುವ ದೊಡ್ಡ ಗುಂಡಿಗಳನ್ನು ಕೂಡಲೇ ಮುಚ್ಚಿ, ರಸ್ತೆಯನ್ನು ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ದುರಸ್ತಿ ಮಾಡಬೇಕು. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಶಾಶ್ವತ ಪರಿಹಾರ ಒದಗಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕಾಂಗ್ರೇಸ್ ಮುಖಂಡರಿಂದ ಮತಗಟ್ಟೆ ಪ್ರವೇಶ : ಬಿಜೆಪಿ ದೂರು

ಉದಯವಾಹಿನಿ ಚಿತ್ರ

• **ಉದಯವಾಹಿನಿ ಹೊಸಪೇಟೆ.**

ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಶುಕ್ರವಾರ ಜರುಗಿದ ಚುನಾವಣೆಯಲ್ಲಿ ಕಾಂಗ್ರೇಸ್ ಮುಖಂಡರು ಮತದಾನ ಕೇಂದ್ರಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದಾರೆ ಎಂದು ಬಿಜೆಪಿ ದೂರಿದೆ.

ಈ ಕುರಿತಂತೆ ಶುಕ್ರವಾರ ರಾತ್ರಿ, ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ ಅವರಿಗೆ ಸ್ಥಳೀಯ ಬಿಜೆಪಿ ಮುಖಂಡರು ದೂರು ಸಲ್ಲಿಸಿದ್ದಾರೆ. ಹೊಸಪೇಟೆ ನಗರದ ಚಿತ್ತವಾಡ್ಗಿಯ ಪಿ.ಬಿ.ಎಸ್. ಶಾಲೆಯ ಮತಗಟ್ಟೆ ಸಂಖ್ಯೆ 15 ರಲ್ಲಿ ಘಟನೆ ನಡೆದಿದೆ ಎಂದು ಆರೋಪಿಸಿರುವ ಬಿಜೆಪಿ ಮುಖಂಡರು, ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾನದ ವೇಳೆ ಕಾಂಗ್ರೇಸ್ ಮುಖಂಡರಾದ ರಾಣಿ ಸಂಯುಕ್ತ ಹಾಗೂ ಅವರ ಅಂಗರಕ್ಷಕರು ಮತ್ತು ಕೆಲ ಕಾಂಗ್ರೇಸ್ ಮುಖಂಡರು ನಿಯಮಬಾಹಿರವಾಗಿ ಮತಗಟ್ಟೆ ಪ್ರವೇಶ ಮಾಡಿದ್ದಾರೆ, ಇದರಿಂದ ಮತದಾನದ ಗೌಪ್ಯತೆಗೆ ಧಕ್ಕೆ ಉಂಟಾಗಿದೆ. ಅಲ್ಲದೆ ಈ ಸಂದರ್ಭದಲ್ಲಿ ಮತದಾರರ ಮೇಲೆ ಪ್ರಭಾವ ಬೀರಲು ಯತ್ನಿಸಲಾಗಿದೆ. ಅಲ್ಲದೆ ಇದು ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆಗೆ ವಿರುದ್ದವಾಗಿದೆ ಎಂದು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಈ ಹಿನ್ನಲೆಯಲ್ಲಿ ಮತಗಟ್ಟೆಯ ಸಿಸಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿ, ಆರೋಪಗಳ ಸತ್ಯಾಸತ್ಯತೆಯನ್ನು ದೃಢಪಡಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಿದರು ಬಿಜೆಪಿ ಮುಖಂಡರು, ನಿಯಮ ಉಲ್ಲಂಘನೆ ದೃಢಪಟ್ಟಲ್ಲಿ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

28 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು

• **ಉದಯವಾಹಿನಿ ಕಲಬುರಗಿ,**

ಅಶೋಕ ನಗರ ಮತ್ತು ವಿಶ್ವವಿದ್ಯಾಲಯ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಎರಡು ಪ್ರತ್ಯೇಕ ಮನೆ ಕಳ್ಳತನ ಪ್ರಕರಣಗಳು ನಡೆದಿದ್ದು, ಮನೆಗಳ ಬೀಗ ಮುರಿದು ಕಳ್ಳರು 28 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿದ್ದಾರೆ. ಅಶೋಕ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಹೈಕೋರ್ಟ್ ಎದುರುಗಡೆಯ ಅಕ್ಕಮಹಾದೇವಿ ಕಾಲೋನಿಯಲ್ಲಿ ಸಂದೀಪ್ ಮೈನಾಳ್ ಎಂಬುವವರ ಮನೆ ಬೀಗ ಮುರಿದು ಕಳ್ಳರು 15 ಲಕ್ಷ ರೂ.ಮೌಲ್ಯದ 110 ಗ್ರಾಂ. ಬಂಗಾರದ ಆಭರಣ, 1 ಕೆಜಿ 330 ಗ್ರಾಂ.ಬೆಳ್ಳಿ ಸಾಮಾನುಗಳು ಮತ್ತು 2 ಲಕ್ಷ ರೂ.ನಗದು ಸೇರಿ 20 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿದ್ದಾರೆ. ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯ ಓಝಾ ಲೇಔಟ್‌ನಲ್ಲಿ ಬಸವಂತಪ್ಪ ಇಮಡಿ ಎಂಬುವವರ ಮನೆ ಬೀಗ ಮುರಿದು ಕಳ್ಳರು 8.40 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿದ್ದಾರೆ. ಅಶೋಕ ನಗರ ಮತ್ತು ವಿಶ್ವವಿದ್ಯಾಲಯ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

ದಿನ ಭವಿಷ್ಯ

ರಾಹುಕಾಲ	ಸಂಜೆ	04:30 ರಿಂದ 06:00
ಗುಳಿಕ ಕಾಲ	ಮಧ್ಯಾಹ್ನ	03:00 ರಿಂದ 04:30
ಯಮಗಂಡ ಕಾಲ	ಮಧ್ಯಾಹ್ನ	12:00 ರಿಂದ 01:30

ಮೇಷ: ಒಬ್ಬ ಸಂತನಿಂದ ಆಧ್ಯಾತ್ಮಿಕ ಜ್ಞಾನ ಸಾಂತ್ವನ ಮತ್ತು ಆರಾಮವನ್ನು ಒದಗಿಸುತ್ತದೆ. ನಿಮ್ಮ ಅವಾಸ್ತವಿಕ ಯೋಜನೆ ಹಣದ ಕೊರತೆಗೆ ಕಾರಣವಾಗುತ್ತದೆ. ಕುಟುಂಬದ ಸದಸ್ಯರು ಅಥವಾ ಸಂಗಾತಿ ಕೆಲವು ಉತ್ತಕರಗಳನ್ನು ಉಂಟುಮಾಡುತ್ತಾರೆ. ರಹಸ್ಯ ಪ್ರಣಯಗಳು ನಿಮ್ಮ ಖ್ಯಾತಿಯನ್ನು ನಾಶಮಾಡಬಹುದು.

ವೃಷಭ: ನಿಮ್ಮ ಭರವಸೆ ಒಂದು ಸುಮಧುರ ಸೂಕ್ಷ್ಮ ಪರಿಮಳಯುಕ್ತ ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ. ಕುಟುಂಬದ ಸದಸ್ಯರ ಖುಷಿಯ ಸ್ವಭಾವ ಮನೆಯಲ್ಲಿನ ವಾತಾವರಣವನ್ನು ಹಗುರಗೊಳಿಸುತ್ತದೆ.

ಮಿಥುನ: ಇಂದು, ನೀವು ಒಬ್ಬ ಅದ್ಭುತ ಜೀವನ ಸಂಗಾತಿಯನ್ನು ಪಡೆಯುವುದೆಂದರೇನು ಎಂದು ತಿಳಿದುಕೊಳ್ಳುತ್ತೀರಿ. ಈ ದಿನ ತುಂಬಾ ಅದ್ಭುತವಾಗಬಹುದು – ಸ್ನೇಹಿತರು ಅಥವಾ ಸಮಬಂಧಿಗಳೊಂದಿಗೆ ಹೊರಗಡೆ ಹೋಗಿ ಚಲನಚಿತ್ರವನ್ನು ನೋಡಲು ಸಹ ಯೋಜಿಸಬಹುದು.

ಕಟಕ: ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಧೃತಿಗೆಡಬೇಡಿ ಹಾಗೂ ನಿರೀಕ್ಷಿತ ಫಲಿತಾಂಶ ಪಡೆಯಲು ಕಠಿಣ ಪರಿಶ್ರಮಪಡಿ. ಈ ಹಿನ್ನಡೆಗಳು ನಿಮ್ಮ ಯಶಸ್ಸಿನ ಸೋಪಾನಗಳಾಗಲಿವೆ. ಬಿಕ್ಕಟ್ಟಿನ ಸಮಯದಲ್ಲಿ ಸಂಬಂಧಿಗಳು ಸಹಾಯ ಮಾಡುತ್ತಾರೆ. ನೀವು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ

ಸಿಂಹ: ಮಕ್ಕಳೊಂದಿಗೆ ಆಟವಾಡುವುದು ನಿಮಗೆ ಯಾವತ್ತೂ ಅದ್ಭುತ ಚಿಕಿತ್ಸೆಯ ಅನುಭವ ನೀಡುತ್ತದೆ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸಾಕಷ್ಟು ಹಣ ಉಳಿಸಲು ಸಾಧ್ಯವಾಗುತ್ತದೆ. ನಿಮ್ಮ ಜೀವನ ಸಂಗಾತಿಯ ನಿರ್ಲಕ್ಷ್ಯತೆ ಸಂಬಂಧಗಳನ್ನು ಹಾಳು ಮಾಡಬಹುದು.

ಕನ್ಯಾ: ಇಂದು ಹಿಂದಿನ ಕೆಟ್ಟ ನಿರ್ಧಾರಗಳು ಹತಾಶೆ ಮತ್ತು ಮಾನಸಿಕ ಪ್ರಕ್ಷುಬ್ಧತೆಗೆ ಕಾರಣವಾಗುತ್ತದೆ – ನೀವು ಮುಂದೇನು ಮಾಡಬೇಕೆಂದು ನಿರ್ಧರಿಸಲಾಗದೆ ಸಿಲುಕಿಕೊಂಡಿರುತ್ತೀರಿ. ಇತರರಿಂದ ಸಹಾಯ ಪಡೆಯಿರಿ ಆರ್ಥಿಕ ದೃಷ್ಟಿಯಿಂದ ಇಂದಿನ ದಿನ ಮಿಶ್ರವಾಗಿ ಉಳಿಯುತ್ತದೆ.

ತುಲಾ: ಒಟ್ಟಾರೆ ಒಂದು ಲಾಭದಾಯಕ ದಿನವಾದರೂ ನೀವು ನಿರಾಶೆ ಭರವಸೆಯಿಡುತ್ತಿರುವ ಯಾರಾದರೂ ನಿಮ್ಮನ್ನು ನಿರಾಶೆಗೊಳಿಸುತ್ತಾರೆ. ಪ್ರೀತಿ ಮಿತಿಯಿಲ್ಲದ್ದಾಗಿದೆ, ಅಪಾರವಾಗಿದೆ; ನೀವು ಈ ಮುಂಚೆ ಈ ವಿಷಯಗಳನ್ನು ಕೇಳಿರಬಹುದು. ಆದರೆ ಇಂದು, ನೀವು ಇದನ್ನು ಅನುಭವಿಸುತ್ತೀರಿ.

ವೃಶ್ಚಿಕ: ನಿಮ್ಮ ಬಲವಾದ ದೃಢತೆ ಮತ್ತು ನಿರ್ಭಯತೆ ನಿಮ್ಮ ಮಾನಸಿಕ ಶಕ್ತಿ ವರ್ಧಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇದು ನಿಮಗೆ ಯಾವುದೇ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಉತ್ತೇಜಿಸುವುದರಿಂದ ಇದನ್ನು ಕಾಯ್ದುಕೊಳ್ಳಿ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಸಮೃದ್ಧಿ ತರುತ್ತದೆ.

ಧನಸ್ಸು: ನಿಮ್ಮ ಆರೋಗ್ಯದ ಬಗ್ಗೆ ವಿಶೇಷವಾಗಿ ರಕ್ತದೊತ್ತಡ ರೋಗಿಗಳ ಬಗ್ಗೆ ಸ್ವಲ್ಪ ಜಾಗ್ರತೆಯಿಂದಿರಿ. ನೀವು ಇಂದು ಹಣ ಉಳಿಸುವುದು ಕಷ್ಟ ನೀವು ಇಂದು ಅತಿಯಾಗಿ ಖರ್ಚು ಮಾಡುವ ಅಥವಾ ನಿಮ್ಮ ಪರ್ಸ್ ಕಳೆದುಕೊಳ್ಳುವ ಸಾಧ್ಯತೆಗಳಿವೆ ನಿರ್ಲಕ್ಷ್ಯತನದಿಂದ ಕೆಲವು ಸಮಸ್ಯೆಗಳು ಉಂಟಾಗಬಹುದು.

ಮಕರ: ಕೈಗೊಂಡ ಧರ್ಮಾರ್ಥ ಕಾರ್ಯವು ಮಾನಸಿಕ ಶಾಂತಿ ಮತ್ತು ಆರಾಮ ತರುತ್ತದೆ. ಮನೆಯ ಅಗತ್ಯವಾದ ವಸ್ತುಗಳ ಮೇಲೆ ಹಣವನ್ನು ಖರ್ಚು ಮಾಡುವುದು ಖಂಡಿತವಾಗಿಯೂ ನಿಮಗೆ ಆರ್ಥಿಕ ತೊಂದರೆಗಳನ್ನು ನೀಡುತ್ತದೆ ಆದರೆ ಇದರಿಂದ ನೀವು ಭವಿಷ್ಯದ ಅನೇಕ ತೊಂದರೆಗಳಿಂದ ತಪ್ಪಿಸಿಕೊಳ್ಳಬಹುದು.

ಕುಂಭ: ಸಂಬಂಧಿಗಳಲ್ಲಿ ಸಣ್ಣ ಪ್ರಯಾಣ ನಿಮ್ಮ ದೈನಂದಿನ ಒತ್ತಡದ ಜೀವನದಿಂದ ನಿಮಗೆ ಸುಖ ಮತ್ತು ವಿಶ್ರಾಂತಿಯನ್ನು ತರುತ್ತದೆ ಪ್ರೇಮ ಧನಾತ್ಮಕ ಸಂಕೇತಗಳನ್ನು ತೋರಿಸುತ್ತದೆ ನಿಮ್ಮ ಗತಕಾಲದ ಯಾರೋ ನಿಮ್ಮನ್ನು ಸಂಪರ್ಕಿಸಬಹುದು ಮತ್ತು ಇದನ್ನು ಒಂದು ಸ್ಮರಣೀಯ ದಿನವಾಗಿಸಬಹುದು.

ಮೀನ: ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ನಿಮ್ಮ ತೂಕದ ಮೇಲೆ ಹಿಡಿತ ಹೊಂದಿರಿ. ಇಂದು ನಿಮ್ಮ ಸಹೋದರ ಸಹೋದರಿಯರು ನಿಮ್ಮಿಂದ ಆರ್ಥಿಕ ಬೆಂಬಲವನ್ನು ಕೇಳಬಹುದು ಮತ್ತು ಅವರಿಗೆ ಸಹಾಯ ಮಾಡಿ ನೀವು ಸ್ವತಃ ಆರ್ಥಿಕ ಒತ್ತಡಕ್ಕೆ ಬರಬಹುದು. ಆದಾಗ್ಯೂ ಪರಿಸ್ಥಿತಿ ಬೇಗ ಸುಧಾರಿಸುತ್ತದೆ.

ರೈತರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ವಿಷ ಕೊಡಿ ಇಲ್ಲವೇ ಜನಸ್ನೇಹಿ ಪೊಲೀಸರಿಂದ ಗುಂಡಿಟ್ಟು ಕೊಲ್ಲಿ

• ಉದಯವಾಹಿನಿ, ಕುಕನೂರು :

ತಾಲ್ಲೂಕಿನ ರಾವಣಕಿ ಗ್ರಾಮದ ಹೈ ಟೆನ್ಶನ್ ಟವರ್ ವಿದ್ಯುತ್ ಸ್ಥಾವರ ಹಾಗೂ ಲೈನ್ ಎಳೆಯುವಲ್ಲಿ ರೈತರನ್ನು ವಂಚಿಸುತ್ತಿರುವ ಕಂಪನಿಗಳ ವಿರುದ್ಧ ಸ್ಥಳೀಯ ಶಾಸಕ ಹಾಗೂ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿಯವರು ರೈತರಿಗೆ ಸೂಕ್ತ ಪರಿಹಾರ ವಿತರಿಸುವಲ್ಲಿ ವಿಫಲರಾಗಿದ್ದು ರೈತರಿಗೆ ವಿಷ ಕೊಡಿ ಇಲ್ಲವೇ ನಿಮ್ಮ ಜನ ಸ್ನೇಹಿತ ಪೊಲೀಸರಿಂದ ರೈತರನ್ನು ಗುಂಡಿಟ್ಟು ಕೊಲ್ಲಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ವಿದ್ಯುತ್ ಸ್ಥಾವರ ನಿರ್ಮಾಣ ಕಂಪನಿಗಳು ಮುಗ್ಧ ರೈತರನ್ನು ವಂಚಿಸಿ ಖಾಲಿ ಬಾಂಡ್ ಮೇಲೆ ರೈತರನ್ನು ಎದುರಿಸಿ ಬೆದರಿಸಿ ಸಹಿ ಮಾಡಿಸಿಕೊಂಡಿದ್ದು ನಮ್ಮ ಕೆಲಸಕ್ಕೆ ಅಡಚಣೆ ಉಂಟು ಮಾಡಿದರೆ ನಿಮ್ಮನ್ನು ಒದ್ದು ಒಳಗೆ ಹಾಕಿಸುತ್ತೇನೆ ಎನ್ನುವ ದರ್ಪದ ಮಾತುಗಳು ರೈತರನ್ನು ಕೆರಳಿಸಿದೆ.

ರೈತರ ಬಗ್ಗೆ ಕಂಪನಿಗಳ ಗುಂಡಾವರ್ತನೆ ಅದಕ್ಕೆ ಅಧಿಕಾರಿಗಳ ಬೆಂಬಲ ರೈತರನ್ನು ಆತಂಕಕ್ಕೀಡು ಮಾಡಿದ್ದು ಸ್ಥಳೀಯ ಶಾಸಕರ ಮೌನ ಪರೋಕ್ಷ ಸಮ್ಮತಿಯಂತಿದೆ ಎಂದು ಹರಿಹಾಯ್ದರು.

ಈ ವಿಷಯವಾಗಿ ಕೇಂದ್ರ ಸಚಿವರಾದ ಶ್ರೀ ಎಚ್ ಡಿ ಕುಮಾರಸ್ವಾಮಿಯವರು ರೈತರೊಂದಿಗೆ ಮಾತನಾಡಿದ್ದು ನಿಮ್ಮೊಂದಿಗೆ ನಾನಿದ್ದೇನೆ ಯಾವ ರೈತರು ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಬೆಂಬಲ ವ್ಯಕ್ತಪಡಿಸಿ ಕೊಪ್ಪಳ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ರೈತರನ್ನು ಎದುರಿಸಿ ಬೆದರಿಸಿ ಒಪ್ಪಿಸದೆ ರೈತರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಕಾರ್ಯನಿರ್ವಹಿಸಲು ಸೂಚಿಸಿರುವದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಶ್ರೀ ಬಸವರಾಜ ಗೌರ ರವರು ರೈತ ಜಾಗೃತರಾಗದಿದ್ದರೆ ಇಂತಹ ಕಂಪನಿಗಳ ಅಟ್ಟಹಾಸ ಹೆಚ್ಚಾಗುತ್ತದೆ. ಕ್ಷೇತ್ರದ ಶಾಸಕ ಹಾಗೂ ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರೆಡ್ಡಿಯವರು ರೈತರ ಪರವಾಗಿ ಕಾರ್ಯನಿರ್ವಹಿಸಲು ಆಗ್ರಹಿಸಿದರು.

ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಅಶೋಕ್ ತೋಟದ ಮಾತನಾಡಿ ರೈತರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಸೂಕ್ತ ಪರಿಹಾರ ನೀಡಲು ವಿನಂತಿಸುತ್ತೇನೆ ಎಂದರು. ಮಾಜಿ ತಾಲ್ಲೂಕು ಪಂಚಾಯತ್ ಉಪಾಧ್ಯಕ್ಷ ಕಳಕಪ್ಪ ಕಂಬಳಿ, ಯಲಬುರ್ಗಾ ಬಿಜೆಪಿ ಮಂಡಲ ಅಧ್ಯಕ್ಷ ಮಾರುತಿ ಹೊಸಮನಿ, ತಾಲ್ಲೂಕು ಪಂಚಾಯತ್ ಮಾಜಿ ಅಧ್ಯಕ್ಷ ಶಿವಕುಮಾರ್ ನಾಗಲಪುರಮಠ ಮಾತನಾಡಿದರು. ಈ ಸಂದರ್ಭದಲ್ಲಿ ರೈತರದ ಕರಿಯಪ್ಪ ಚೆನ್ನದಾಸರ್, ಮಂಜುನಾಥ ತಮ್ಮಣ್ಣವರ್, ನಾಗರಾಜ ಬಿರುಗಣ್ಣನವರ್, ಈರಣ್ಣ ಮಂಗಳಾಪುರ, ಶರಣಪ್ಪ ತಮ್ಮಣ್ಣವರ್, ಹನುಮಪ್ಪ ತಳವಾರ್, ವೀರೇಶ್ ದೊಡ್ಡಮನಿ, ಯಮನಪ್ಪ ವಾಲ್ಮೀಕಿ, ಮಾರುತಿ ಚನ್ನಾದಾಸರ ಹಾಗೂ ಇತರರು ಇದ್ದರು

ಮಾಂಜಾ ದಾರ ಮಾರುವವರ ವಿರುದ್ಧ ಕಠಿಣ ಕ್ರಮ

ಮಾಂಜಾ ದಾರದಿಂದಾಗಿ ಬೈಕ್ ಸವಾರರು ಪ್ರಾಣ ಕಳೆದುಕೊಳ್ಳುತ್ತಿರುವ ಹಾಗೂ ಗಂಭೀರವಾಗಿ ಗಾಯಗೊಳ್ಳುತ್ತಿರುವ ಘಟನೆಗಳು ಆತಂಕ ಮೂಡಿಸಿವೆ

• ಉದಯವಾಹಿನಿ, ಹುಬ್ಬಳ್ಳಿ:

ಹಳೇಹುಬ್ಬಳ್ಳಿಯ ಕಾರವಾರ ರಸ್ತೆಯಲ್ಲಿ ಮಾಂಜಾ ದಾರ ಕೊರಳಿಗೆ ಸಿಲುಕಿ ಮಹಿಳೆಯೊಬ್ಬರು ಮೃತಪಟ್ಟ ಹಿನ್ನೆಲೆಯಲ್ಲಿ, ಸ್ಥಳೀಯ ಜನಪ್ರತಿನಿಧಿಗಳು ಅವುಗಳ ಮಾರಾಟ ಮತ್ತು ಬಳಕೆಗೆ ಸಂಪೂರ್ಣ ನಿಷೇಧ ಹೇರುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಅವುಗಳ ಸ್ಥಳೀಯವಾಗಿ ಸಿದ್ಧಪಡಿಸುವ, ಮಾರಾಟ ಮಾಡುವ ಹಾಗೂ ಬಳಕೆ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವಂತೆಯೂ ಆಗ್ರಹಿಸಿದ್ದಾರೆ.

1 : ಮಾರಾಟ ಮತ್ತು ಬಳಕೆಗೆ ಸಂಪೂರ್ಣ ನಿಷೇಧ
2 : ಎಲ್ಲಿ ತಯಾರಾಗುತ್ತದೆ ಎಂದು ಮಾಹಿತಿ ಸಂಗ್ರಹ
3 : ಪೋಷಕರು ಮಕ್ಕಳಿಗೆ ಸುರಕ್ಷತೆ ಮಹತ್ವ ತಿಳಿಸಿ

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, 'ಮಾಂಜಾ ದಾರ ಎಲ್ಲಿಂದ ಬರುತ್ತದೆ, ಎಲ್ಲಿ ತಯಾರಾಗುತ್ತದೆ ಎಂದು ಮಾಹಿತಿ ಸಂಗ್ರಹಿಸಲು ಪೊಲೀಸ್ ಕಮಿಷನರ್‌ಗೆ ತಿಳಿಸಿದ್ದೇನೆ. ಮಾಂಜಾ ಮಾರಾಟ ಮಾಡುವವರ ವಿರುದ್ಧ ಕಟ್ಟುನಿಟ್ಟಿ ಕ್ರಮ ಕೈಗೊಂಡು, ಎರಡು ತಿಂಗಳು ಜೈಲಿಗೆ ಹಾಕಬೇಕು' ಎಂದು ಹೇಳಿದರು.

ಆತಂಕಕಾರಿ ಘಟನೆ: 'ಮಾಂಜಾ ದಾರದಿಂದಾಗಿ ಬೈಕ್ ಸವಾರರು ಪ್ರಾಣ ಕಳೆದುಕೊಳ್ಳುತ್ತಿರುವ ಹಾಗೂ ಗಂಭೀರವಾಗಿ ಗಾಯಗೊಳ್ಳುತ್ತಿರುವ ಘಟನೆಗಳು ಆತಂಕ ಮೂಡಿಸಿವೆ.

ಉದಯವಾಹಿನಿ ಚಿತ್ರ

ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿ ಶಾಸಕ ಮಹೇಶ ಟೆಂಗಿನಕಾಯಿ, 'ಸ್ಥಳೀಯವಾಗಿಯೂ ಮಾಂಜಾ ದಾರ ತಯಾರಿಸುವ ಮಾಹಿತಿಯಿದ್ದು, ಪೊಲೀಸರು ಪತ್ತೆ ಹಚ್ಚಬೇಕು. ಜೀವ ತೆಗೆಯುವ ಅಪಾಕಾರಿ ವಸ್ತುಗಳ ಬಳಕೆಗೆ ಯಾವುದೇ ಕಾರಣಕ್ಕೂ ಅವಕಾಶ ನೀಡಬಾರದು' ಎಂದರು.

ಕಾರ್ಯಾಚರಣೆ: ಮಾಂಜಾ ದಾರಾ ಮಾರಾಟ ಮಾಡುತ್ತಿದ್ದವರ ವಿರುದ್ಧ ಪೊಲೀಸರು ಗುರುವಾರ ಮತ್ತು ಶುಕ್ರವಾರ ಕಾರ್ಯಾಚರಣೆ ನಡೆಸಿ 12 ಮಂದಿ ವಿರುದ್ಧ 11 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಾಂಜಾ ದಾರ ಮಾರಾಟ ಮಾಡುತ್ತಿದ್ದವರ ವಿರುದ್ಧ ಒಂಬತ್ತು, ಅದನ್ನು ಬಳಸಿ ಗಾಳಿಪಟ ಹಾರಿಸುತ್ತಿದ್ದವರ ವಿರುದ್ಧ ಹಾಗೂ ಮಕ್ಕಳಿಗೆ ಮಾಂಜಾ ದಾರ ನೀಡಿದ ಗಣೇಶಪೇಟೆಯ ಪಾಲಕರೊಬ್ಬರ ವಿರುದ್ಧ ಪ್ರತ್ಯೇಕ ಒಂದೊಂದು ಪ್ರಕರಣ ದಾಖಲಿಸಿಕೊಂಡು ಎಚ್ಚರಿಕೆ ನೀಡಿದ್ದಾರೆ.

'ಗಾಳಿಪಟ ಹಾರಿಸುವ ಸಂಭ್ರಮದಿಂದ ಯಾರೊಬ್ಬರ ಜೀವಕ್ಕೂ ಅಪಾಯವಾಗಬಾರದು. ಈ ನಿಟ್ಟಿನಲ್ಲಿ ಅಪಾಯಕಾರಿ ಮಾಂಜಾ ದಾರ ಮಾರಾಟ ಮತ್ತು ಬಳಕೆಯನ್ನು ತಡೆಗಟ್ಟಲು ಸಂಬಂಧಪಟ್ಟ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದ್ದಾರೆ. -ಶಾಸಕ ಪ್ರಸಾದ ಅಬ್ಬಯ್ಯ

'ಗಾಳಿಪಟ ಹಾರಿಸಲು ಬಳಸುವ ಅಪಾಯಕಾರಿ ಮಾಂಜಾ ದಾರವನ್ನು ಸಂಪೂರ್ಣವಾಗಿ ನಿಷೇಧಿಸಬೇಕು' ಎಂದು ವಿಧಾನ ಪರಿಷತ್ ಸದಸ್ಯ, ಬಸವರಾಜ ಹೊರಟ್ಟಿ ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಶುಕ್ರವಾರ ಪತ್ರ ಬರೆದಿರುವ ಅವರು, ಹುಬ್ಬಳ್ಳಿಯಲ್ಲಿ ಮಹಿಳೆಯೊಬ್ಬರು ಮಾಂಜಾ ದಾರಕ್ಕೆ ಸಿಲುಕಿ ಮೃತಪಟ್ಟಿರುವ ಘಟನೆಯನ್ನು ಉಲ್ಲೇಖಿಸಿ, ಅವುಗಳ ಮಾರಾಟ, ಬಳಕೆ ಹಾಗೂ ಮಾರಾಟಗಾರರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. 'ಮಾಂಜಾ ದಾರವನ್ನು ಹತ್ತಿಯ ದಾರಕ್ಕೆ ನುಣ್ಣಗೆ ಪುಡಿಮಾಡಿದ ಗಾಜು, ಲೋಹದ ದೂಳು ಮತ್ತು ಅಂಟು ಮಿಶ್ರಣ ಮಾಡಿ ತಯಾರಿಸಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಕೇವಲ ಗಾಜಿನ ಲೇಪನವಷ್ಟೇ ಅಲ್ಲದೆ, ನೈಲಾನ್ ಮಾಂಜಾ ದಾರಗಳೂ ಬಳಕೆ ಮಾಡಲಾಗುತ್ತಿದೆ. ಅದು ಅತ್ಯಂತ ತೀಕ್ಷ್ಣವಾಗಿರುವುದರಿಂದ, ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವವರ ಕುತ್ತಿಗೆಗೆ ಅಥವಾ ಮುಖಕ್ಕೆ ಸಿಲುಕಿ ಗಂಭೀರ ಗಾಯಗಳಾಗಿ, ಕೆಲವೊಮ್ಮೆ ಜೀವಹಾನಿಯೂ ಆಗುತ್ತದೆ. ಮಾಂಜಾ ದಾರಗಳು ನೈಸರ್ಗಿಕವಾಗಿ ಕೊಳೆಯದ ಕಾರಣ, ಪಕ್ಷಿಗಳ ಜೀವಕ್ಕೂ ಅಪಾಯಕಾರಿಯಾಗಿದೆ. ಈ ದಾರ ನಿಷೇಧವಿದ್ದರೂ ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ' ಎಂದು ತಿಳಿಸಿದ್ದಾರೆ.



'ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಶಾಲಾ-ಕಾಲೇಜುಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಜಾಗೃತಿ ಮೂಡಿಸಬೇಕು. ಪೋಷಕರು ಕೂಡ ಮಕ್ಕಳಿಗೆ ಸುರಕ್ಷತೆಯ ಮಹತ್ವ ತಿಳಿಸಬೇಕು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. -ಶಾಸಕ ಮಹೇಶ ಟೆಂಗಿನಕಾಯಿ

ಮಾಂಜಾ ದಾರ ಬಳಸದಂತೆ ಪಾಲಿಕೆಯ ಸ್ವಚ್ಛತಾ ವಾಹನದಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಆರೋಗ್ಯ ನಿರೀಕ್ಷಕರು ಅಂಗಡಿಗಳನ್ನು ತಪಾಸಣೆ ನಡೆಸುತ್ತಿದ್ದಾರೆ. ಎಲ್ಲಿಯಾದರೂ ಮಾಂಜಾ ದಾರ ಸಿದ್ಧಪಡಿಸುವುದು ಕಂಡು ಬಂದರೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು.

ವಿಧಾನ ಪರಿಷತ್ ಚುನಾವಣೆ; ನಾಲ್ಕೂ ಕ್ಷೇತ್ರದಲ್ಲಿ ಎನ್‌ಡಿಎ ಗೆಲುವು

• ಉದಯವಾಹಿನಿ, ಹುಬ್ಬಳ್ಳಿ:

ಉದಯವಾಹಿನಿ ಚಿತ್ರ

'ರಾಜ್ಯದಲ್ಲಿ ನಡೆಯುತ್ತಿರುವ ಪದವೀಧರ ಮತ್ತು ಶಿಕ್ಷಕರ ನಾಲ್ಕು ಕ್ಷೇತ್ರಗಳ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ನಾಲ್ಕೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಿದೆ' ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ವಿಶ್ವಾಸ ವ್ಯಕ್ತಪಡಿಸಿದರು.

ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ನಗರದ ಫಾತಿಮಾ ಪ್ರೌಢಶಾಲೆಯ ಮತಗಟ್ಟೆಯಲ್ಲಿ ಶುಕ್ರವಾರ ಮತದಾನ ಮಾಡಿ ಮಾಧ್ಯಮದ ಜೊತೆ ಅವರು ಮಾತನಾಡಿದರು. 'ಈ ಚುನಾವಣೆ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆಯಾಗಲಿದೆ. ಜನರು ಕಾಂಗ್ರೆಸ್‌ನ ಆಡಳಿತದ ವೈಖರಿ ತಿರಸ್ಕರಿಸುತ್ತಿದ್ದು, ಎನ್‌ಡಿಎ ಮೇಲೆ ವಿಶ್ವಾಸ ಹೊಂದಿದ್ದಾರೆ' ಎಂದು ಹೇಳಿದರು. 'ಸರ್ಕಾರದ ಯೋಜನೆಗಳಿಗೆ ಹಣ ಬಿಡುಗಡೆ ಮಾಡಲು ಸಾಧ್ಯವಾಗದ ಕಾಂಗ್ರೆಸ್ ಸರ್ಕಾರ, ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ಶಿಕ್ಷಕರು ಮತ್ತು ಪದವೀಧರರಿಗೆ ಹಣ ಹಂಚುವ ಕೆಲಸ ಮಾಡುತ್ತಿದೆ. ಸರ್ಕಾರದ ಆಡಳಿತ ವೈಫಲ್ಯ, ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಶಿಕ್ಷಕರಲ್ಲಿ ಆಕ್ರೋಶವಿದೆ. ಈ ಚುನಾವಣೆಯಲ್ಲಿ ಅವರು ಕಾಂಗ್ರೆಸ್‌ಗೆ ಪಾಠ ಕಲಿಸಲಿದ್ದಾರೆ' ಎಂದರು. 'ರಾಜ್ಯದಲ್ಲಿ ಬರಗಾಲವಿದ್ದರೂ ರೈತರಿಗೆ ಬರ ಪರಿಹಾರದ ಹಣ ಬಿಡುಗಡೆ ಮಾಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ರೈತರಿಗೆ ಪ್ರತಿ ಹೆಕ್ಟೇರ್‌ಗೆ 13 ಸಾವಿರ ಪರಿಹಾರ ನೀಡಲಾಗಿತ್ತು. ಆದರೆ ಈಗ ಕನಿಷ್ಠ 2,500 ನೀಡಲೂ ಹಣವಿಲ್ಲ ಎಂದು ಸರ್ಕಾರ ಹೇಳುತ್ತಿದೆ. ರಾಜ್ಯ ಸರ್ಕಾರ ಆರ್ಥಿಕ ದಿವಾಳಿಯತ್ತ ಸಾಗುತ್ತಿದೆ' ಎಂದು ಟೀಕಿಸಿದರು

ಕೆಆರ್‌ಐಡಿಎಲ್ AEE 40 ದಿನಗಳ ಬಳಿಕ ಮುಂಬೈನಲ್ಲಿ ಪತ್ತೆ!

• ಉದಯವಾಹಿನಿ, ಗದಗ:

ಸೆಪ್ಟೆಂಬರ್ 14ರಂದು ನಾಪತ್ತೆಯಾಗಿದ್ದ ಇಲ್ಲಿನ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದ (ಕೆಆರ್‌ಡಿಐಎಲ್) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಫರ್ವೀಜ್ ಧಾರವಾಡ, ಅಕ್ಟೋಬರ್ 22ರಂದು ಮುಂಬೈನಲ್ಲಿ ಪತ್ತೆಯಾಗಿದ್ದಾರೆ.

ಸರ್ಕಾರದಿಂದ ಅನುದಾನ ಬಿಡುಗಡೆಯಾಗದೆ, ಗುತ್ತಿಗೆದಾರರ ಒತ್ತಡಕ್ಕೆ ಬೇಸತ್ತು ನಾಲ್ಕು ಪುಟಗಳ ಡೆತ್‌ನೋಟ್ ಬರೆದಿಟ್ಟು ನಿಗೂಢವಾಗಿ ನಾಪತ್ತೆಯಾಗಿದ್ದ ಗದಗ ಕೆಆರ್‌ಐಡಿಎಲ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪರ್ವೇಜ್ ಧಾರವಾಡ ನಾಪತ್ತೆ ಪ್ರಕರಣಕ್ಕೆ ಕೊನೆಗೂ ಮಹತ್ವದ ಅಂತ್ಯ ಸಿಕ್ಕಿದೆ.

ಬರೋಬ್ಬರಿ 40 ದಿನಗಳ ಕಾಲ ಪೊಲೀಸರ ಕಣ್ಣಿಗೆ ಬೀಳದೆ ಐದು ರಾಜ್ಯಗಳಲ್ಲಿ ಅಲೆದಾಡುತ್ತಿದ್ದ ಅಧಿಕಾರಿಯನ್ನು ರಾಜ್ಯ ಪೊಲೀಸ್ ತಂಡ ಮಹಾರಾಷ್ಟ್ರದ ಮುಂಬೈನಲ್ಲಿ ಪತ್ತೆಹಚ್ಚಿ ವಶಕ್ಕೆ ಪಡೆದಿದೆ.

ಉದಯವಾಹಿನಿ ಚಿತ್ರ

ಪೊಲೀಸರು ತಮ್ಮ ಲೊಕೇಶನ್ ಪತ್ತೆಹಚ್ಚಬಾರದು ಎಂಬ ಉದ್ದೇಶದಿಂದ ಅಧಿಕಾರಿ ಪರ್ವೇಜ್ ಮೊಬೈಲ್ ಫೋನ್ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದರು. ಯಾವುದೇ ಎಟಿಎಂ ಅಥವಾ ಡಿಜಿಟಲ್ ಪಾವತಿಗಳನ್ನು ಬಳಸದೆ ನಗದು ಹಣದಲ್ಲೇ ಬದುಕು ಸಾಗಿಸುತ್ತಿದ್ದರು. ಇದು ತನಿಖಾ ತಂಡಕ್ಕೆ ಜಾಡು ಹಿಡಿಯಲು ಭಾರೀ ಸವಾಲಾಗಿ ಪರಿಣಮಿಸಿತ್ತು.

ಮರುದಿನ (ಸೆ.13) ಬೆಂಗಳೂರಿನಲ್ಲಿ ಮೀಟಿಂಗ್ ಇದೆ ಎಂದು ಕುಟುಂಬಸ್ಥರಿಗೆ ಹೇಳಿ ಗದಗದಿಂದ ರೈಲು ಹತ್ತಿದ್ದ ಅಧಿಕಾರಿ, ಎರಡು ದಿನಗಳ ಬಳಿಕ ಮೊಬೈಲ್ ಸ್ವಿಚ್ ಆಫ್ ಮಾಡಿ ಕಣ್ಮರೆಯಾಗಿದ್ದರು. ಸೆಪ್ಟೆಂಬರ್ 16ರಂದು ಗದಗ ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಸೆಪ್ಟೆಂಬರ್ 12ರಂದು ಬೆಂಗಳೂರಿನ ಕೆಆರ್‌ಐಡಿಎಲ್ ಎಂಡಿ ಅವರಿಗೆ ಪತ್ರ ಬರೆದಿದ್ದ ಪರ್ವೇಜ್, "ಸರ್ಕಾರ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುತ್ತಿಲ್ಲ. ಕೆಲಸ ಮುಗಿಸಿದ ಗುತ್ತಿಗೆದಾರರ ಕಿರುಕುಳದಿಂದ ತೀವ್ರ ಮಾನಸಿಕ ಹಿಂಸೆಯಾಗಿದೆ. ನನ್ನ ಸಾವಿಗೆ ನಾನೇ ಕಾರಣ" ಎಂದು 4 ಪುಟಗಳ ಡೆತ್‌ನೋಟ್ ಬರೆದಿಟ್ಟಿದ್ದರು.

ರಾಣಿ ಚನ್ನಮ್ಮ ದಿಟ್ಟತನ ಪ್ರತಿಯೊಬ್ಬರಿಗೂ ಪ್ರೇರಣೆ

• ಉದಯವಾಹಿನಿ, ಚಿತ್ರದುರ್ಗ:

'ಸಿಪಾಯಿ ದಂಗೆಗಿಂತಲೂ ಮೊದಲೇ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯದ ಕಹಳೆ ಊದಿ, ನಾಡಿನ ರಕ್ಷಣೆಗಾಗಿ ಹೋರಾಡಿದ ಕೀರ್ತಿ ಕಿತ್ತೂರು ರಾಣಿ ಚನ್ನಮ್ಮ ಅವರಿಗೆ ಸಲ್ಲುತ್ತದೆ. ಅವರ ದಿಟ್ಟತನ ಪ್ರತಿಯೊಬ್ಬರಿಗೂ ಪ್ರೇರಣೆ ಆಗಬೇಕು' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಹೇಳಿದರು. ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದ್ದ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಕಾರ್ಯಕ್ರಮದಲ್ಲಿ ಚನ್ನಮ್ಮ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, 'ಚನ್ನಮ್ಮ ಅವರ ಶೌರ್ಯ ಮತ್ತು ಸಾಹಸ ಪ್ರತಿಯೊಬ್ಬರಿಗೂ ಹಾಗೂ ವಿಶೇಷವಾಗಿ ಈ ನೆಲದ ಹೆಣ್ಣುಮಕ್ಕಳಿಗೆ ಸ್ವಾವಲಂಬನೆ ಮತ್ತು ದೇಶಪ್ರೇಮದ ದೊಡ್ಡ ಪ್ರೇರಣೆಯಾಗಿದೆ' ಎಂದರು.

'ಬ್ರಿಟಿಷರ ವಿರುದ್ಧ ದಿಟ್ಟತನದಿಂದ ಹೋರಾಡಿದ ಚನ್ನಮ್ಮನವರು, ತಮ್ಮ ಬಲಗೈ ಬಂಟ ಸಂಗೊಳ್ಳಿ ರಾಯಣ್ಣನಂತಹ ವೀರರನ್ನು ಉರಿದುಂಬಿಸಿ ನಾಡು-ನುಡಿಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಚನ್ನಮ್ಮನವರ ಶೌರ್ಯ ಸ್ಮರಿಸುವ ನಿಟ್ಟಿನಲ್ಲಿ ಕಿತ್ತೂರು ಉತ್ಸವ ಅತ್ಯಂತ ಪ್ರಸಿದ್ಧಿ ಪಡೆದುಕೊಂಡಿದೆ' ಎಂದರು.

ರಿಪ್ಪನ್‌ಪೇಟೆ ಮೆಸ್ಕಾಂ ಕಚೇರಿಗೆ ಬೀಗ ಹಾಕಿ ರೈತರಿಂದ ಪ್ರತಿಭಟನೆ

• ಉದಯವಾಹಿನಿ, ರಿಪ್ಪನ್‌ಪೇಟೆ:

ಕೆರೆಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಸಮರ್ಪಕ ವಿದ್ಯುತ್ ಪೂರೈಕೆಯಾಗದಿರುವುದನ್ನು ಖಂಡಿಸಿ ಇಲ್ಲಿನ ಮೆಸ್ಕಾಂ ಕಚೇರಿಗೆ ಬೀಗ ಜಡಿದು, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಹರತಾಳು ಹಾಲಪ್ಪ ನೇತೃತ್ವದಲ್ಲಿ ರೈತರು ಪ್ರತಿಭಟನೆ ನಡೆಸಿದರು.

ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಯದಿಂದ ಬೆಳೆಗಳಿಗೆ ಸಕಾಲದಲ್ಲಿ ನೀರುಣಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕೃಷಿ ಕಾರ್ಯಗಳಿಗೆ ಅಡಚಣೆಯಾಗಿದೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. 'ಕಡಿಮೆ ವೋಲ್ವೇಜ್ ಹಾಗೂ ಸತತ ವಿದ್ಯುತ್ ಕಡಿತ ಸಮಸ್ಯೆಗಳಿಂದ ಕೃಷಿ ಯಂತ್ರೋಪಕರಣಗಳಿಗೆ ಹಾನಿಯಾಗುತ್ತಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಹಾಲಪ್ಪ ದೂರಿದರು.

ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಬೇಕು. ವಿದ್ಯುತ್ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ಜತೆಗೆ ರೈತರ ಅಹವಾಲುಗಳಿಗೆ ಅಧಿಕಾರಿಗಳು ತಕ್ಷಣವೇ ಸ್ಪಂದಿಸಬೇಕು ಎಂದು ಆಗ್ರಹಿಸಿದ ಅವರು, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡುವಂತೆ ಪಟ್ಟು ಹಿಡಿದರು. ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ವೀರೇಶ್ ಆಲವಳ್ಳಿ ಮಾತನಾಡಿ, 'ಅರಸಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸವಾಪುರ, ಹಾರೋಹಿತ್ತಲು, ಕೊಳವಂಕ ಮಾರ್ಗದಲ್ಲಿ ಗತಕಾಲದ ವಿದ್ಯುತ್ ತಂತಿಗಳು ಎಲ್ಲೆಂದರಲ್ಲಿ ತುಂಡಾಗಿ ಬೀಳುತ್ತಿವೆ. ಗ್ರಾಮೀಣ ಭಾಗದ ಮಕ್ಕಳು ಜೀವಭಯದಲ್ಲಿ ಓಡಾಡುವಂತಾಗಿದೆ. ದುರಸ್ತಿಗೊಂಡ ಟಿ.ಸಿ.ತರಲು ರೈತರೇ ವಾಹನ ಮಾಡಿಕೊಂಡು ಹೋಗುವ ದುಃಸ್ಥಿತಿ ಎದುರಾಗಿದೆ' ಎಂದರು.



ಉದಯವಾಹಿನಿ ಚಿತ್ರ

ಇದಕ್ಕೂ ಮುನ್ನ ಸಿದ್ಧಿವಿನಾಯಕ ದೇವಸ್ಥಾನದಿಂದ ಹೊರಟ ಪ್ರತಿಭಟನಾ ಮೆರವಣಿಗೆಯಲ್ಲಿ ಮೆಸ್ಕಾಂ ಅಧಿಕಾರಿಗಳು ಮತ್ತು ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಲಾಯಿತು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಮೆಸ್ಕಾಂ ಎಸ್‌ಒ ಜಯದೇವಪ್ಪ ಅವರು ಪ್ರತಿಭಟನಾ ನಿರತರ ಮನವಿ ಸ್ವೀಕರಿಸಿದರು.

ಸೌತಡ್ಕ ಮಹಾಗಣಪತಿ ದೇವಸ್ಥಾನದ ಜಾಗಕ್ಕಾಗಿ ಹೋರಾಟದ ಎಚ್ಚರಿಕೆ

• ಉದಯವಾಹಿನಿ, ಪುತ್ತೂರು:

'ಸೌತಡ್ಕ ಮಹಾಗಣಪತಿ ದೇವಸ್ಥಾನದ ಬಳಕೆಗೆ ಕಾಯ್ದಿರಿಸಲಾದ ಜಾಗ ಹಾಗೂ ಭಕ್ತರ ಸಹಕಾರದಿಂದ ಖರೀದಿಸಿದ ಜಾಗವು ಪ್ರಸ್ತುತ ಖಾಸಗಿ ಟ್ರಸ್ಟ್ ಒಂದರ ಸ್ವಾಧೀನದಲ್ಲಿದ್ದು, ಅದನ್ನು ದೇವಸ್ಥಾನದ ಸ್ವಾಧೀನಕ್ಕೆ ಪಡೆದುಕೊಳ್ಳಲು ಮುಜರಾಯಿ ಇಲಾಖೆ ಹಾಗೂ ಕಂದಾಯ ಇಲಾಖೆ ಕ್ರಮಕೈಗೊಳ್ಳಬೇಕು' ಎಂದು ಸೌತಡ್ಕ ಮಹಾಗಣಪತಿ ದೇವಸ್ಥಾನ ಸಂರಕ್ಷಣಾ ವೇದಿಕೆಯ ಅಧ್ಯಕ್ಷ ಪ್ರಶಾಂತ ರೈ ಆಗ್ರಹಿಸಿದರು.

ಈ ವಿಷಯದಲ್ಲಿ ಸಂಬಂಧಪಟ್ಟ ಇಲಾಖೆಗಳು ಮತ್ತೊಮ್ಮೆ ನಿರ್ಲಕ್ಷ್ಯ ವಹಿಸಿದರೆ ದೇವಸ್ಥಾನಕ್ಕೆ ನ್ಯಾಯ ಸಿಗುವ ತನಕ ಹೋರಾಟ ಮಾಡಲಾಗುವುದು ಎಂದು ಅವರು ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಎಚ್ಚರಿಸಿದರು.

ಸೌತಡ್ಕ ಮಹಾಗಣಪತಿ ದೇವಸ್ಥಾನವು ರಾಜ್ಯ ಮುಜರಾಯಿ ಇಲಾಖೆಯ ಅಧೀನದ 'ಎ' ಗ್ರೇಡ್ ದೇವಸ್ಥಾನವಾಗಿದ್ದು, ಕ್ಷೇತ್ರಕ್ಕೆ ಹೆಚ್ಚಿನ ಭಕ್ತರು ಬರುತ್ತಿದ್ದಾರೆ. ಕೊಕ್ಕಡ ಗ್ರಾಮದ ಸರ್ವೆ ನಂಬರ್ 215/1ರಲ್ಲಿ ದೇವಸ್ಥಾನಕ್ಕೆ ಸೇರಿದ 1.29 ಎಕರೆ ಜಮೀನಿದೆ. ಇದೇ ಸರ್ವೆ ನಂಬರ್‌ನ ಹೆಚ್ಚುವರಿ 1.99 ಎಕರೆ ಜಮೀನನ್ನು ದೇವಸ್ಥಾನದ ಬಳಕೆಗಾಗಿ 1993ರಲ್ಲಿ ಅಂದಿನ ಉಪ ವಿಭಾಗಾಧಿಕಾರಿ ಆಯುಕ್ತರು ಕಾಯ್ದಿರಿಸಿದ್ದರು. ಈ ಜಮೀನು ದೇವಸ್ಥಾನದ ಮುಂಭಾಗದಲ್ಲಿದೆ. ಆದರೆ, ದೇವಸ್ಥಾನದ ಹೆಸರಿನಲ್ಲಿ ಕಾನೂನುಬಾಹಿರವಾಗಿ ಕಾರ್ಯಾಚರಿಸುತ್ತಿರುವ ಖಾಸಗಿ ಟ್ರಸ್ಟ್ ಒಂದು ದೇವಸ್ಥಾನದ ಬಳಕೆಗಾಗಿ 1993ರಲ್ಲಿ ಕಾಯ್ದಿರಿಸಿದ್ದ ಜಮೀನಿನ ಒಂದು ಭಾಗವನ್ನು ಅತಿಕ್ರಮಿಸಿಕೊಂಡು ಅಂಗಡಿ ಕಟ್ಟಡಗಳನ್ನು ನಿರ್ಮಿಸಿ ಬಾಡಿಗೆಗೆ ನೀಡುವ ಮೂಲಕ ಅನಧಿಕೃತವಾಗಿ ಆದಾಯ ಗಳಿಸುತ್ತಿದೆ ಎಂದು ಅವರು ಆರೋಪಿಸಿದರು.

ಉದಯವಾಹಿನಿ ಚಿತ್ರ

ದೇವಸ್ಥಾನಕ್ಕೆ ಸೇರಿದ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳುವಂತೆ ಆಗ್ರಹಿಸಿ ಎರಡು ವರ್ಷಗಳ ಹಿಂದೆ ಸಂರಕ್ಷಣಾ ವೇದಿಕೆ ವತಿಯಿಂದ ಎರಡು ದಿನ ನಡೆಸಿದ ಪ್ರತಿಭಟನೆಯ ವೇಳೆ ಪುತ್ತೂರು ಉಪವಿಭಾಗಾಧಿಕಾರಿ ದೇವಸ್ಥಾನದ ಜಮೀನನ್ನು ಮರಳಿ ಹಸ್ತಾಂತರಿಸುವ ಭರವಸೆ ನೀಡಿದ್ದರೂ ಕ್ರಮ ಕೈಗೊಂಡಿಲ್ಲ.

ದೇವಸ್ಥಾನದ ಮುಂದಿನ ಭಾಗದ ಜಾಗವು ದೇವಸ್ಥಾನದ ಸ್ವಾಧೀನದಲ್ಲಿ ಇಲ್ಲದ ಕಾರಣ ಅಂಗಡಿ ಕೋಣೆಗಳ ಬಾಡಿಗೆ ದೇವಸ್ಥಾನಕ್ಕೆ ಬರುತ್ತಿಲ್ಲ.

ಪ್ರಕ್ಷುಬ್ಧ ಕಾಲದಲ್ಲಿ ಕಾವ್ಯದ ಅನಿವಾರ್ಯ ಹೆಚ್ಚಿದೆ

• ಉದಯವಾಹಿನಿ, ಹಾಸನ:

ಉದಯವಾಹಿನಿ ಚಿತ್ರ

ನಮ್ಮೊಳಗಿನ ಉತ್ಕಟತನ, ಭಾವ ತೀವ್ರತೆಯನ್ನು ಅದುಮಿಟ್ಟುಕೊಳ್ಳಲಾಗದ ಹಾಗೂ ಅನಿವಾರ್ಯ ಎಂದಾಗ ಮಾತ್ರ ಕಾವ್ಯವಾಗಿ ಹೊರಹೊಮ್ಮಿದರೆ ಒಳ್ಳೆಯ ಕವಿತೆ ಹುಟ್ಟಲು ಸಾಧ್ಯ. ಪ್ರಕ್ಷುಬ್ಧ ಕಾಲಘಟ್ಟದಲ್ಲಿ ಕಾವ್ಯದ ಅನಿವಾರ್ಯ ಹೆಚ್ಚಿದೆ ಎಂದು ಕವಯತ್ರಿ ಜ.ನಾ. ತೇಜಶ್ರೀ ಅಭಿಪ್ರಾಯಪಟ್ಟರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಹಾಸನ ಜಿಲ್ಲಾ ಘಟಕದ ವತಿಯಿಂದ ಚಿಕ್ಕಕೊಂಡಗೊಳದ ಎಚ್.ಎಸ್. ಭಾನುಮತಿಯವರ ನಿವಾಸದಲ್ಲಿ ಹಮ್ಮಿಕೊಂಡಿದ್ದ ಹಾಸನ ಜಿಲ್ಲಾ ದಸರಾ ಕವಿಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.

ದ್ವೇಷ, ರಾಜಕಾರಣ, ಅಧಿಕಾರ ಎಲ್ಲವೂ ಮೇಲಾಟ ಆಡುತ್ತ, ಬದುಕು ಕಗ್ಗಂಟಾಗಿರುವ ಪ್ರಕ್ಷುಬ್ಧ ಕಾಲಘಟ್ಟದಲ್ಲಿ ಕವಿತೆಯ ಕೈಹಿಡಿದು ಸಮಾಜಕ್ಕೆ ಏನನ್ನಾದರೂ ಕೊಡಬೇಕು ಎನ್ನುವ ಕವಿ ವಾಂಛಲ್ಯವನ್ನು ಬೆನ್ನು ತಟ್ಟಲೇಬೇಕು. ಮನಸ್ಸಿನಲ್ಲಿ ಹುಟ್ಟಿದ ಒಂದು ಸ್ವರ ಅಥವಾ ರಾಗ ಕೈಗೆ ಹರಿಯಬೇಕು. ಕೈ ಅದನ್ನು ಅನುವಾದಿಸಬೇಕು. ಬೆರಳು ಸ್ಪಂದಿಸಬೇಕು. ಈ ಎಲ್ಲವೂ ಒಟ್ಟಿಗೆ ಆಗಬೇಕು. ಯಾವುದೋ ಒಂದು ಕ್ಷಣ ದೇಹವು ಮನಸ್ಸಿನ ಜೊತೆ ಕೂಡಿದಾಗ ರಾಗ ಮಿಡಿಯುತ್ತದೆ. ಅದನ್ನೇ ಸೃಜನಶೀಲತೆ ಎನ್ನುವರು ಎಂದು ತಿಳಿಸಿದರು. ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದ ಸಾಹಿತಿ ತಿರುಪತಿಹಳ್ಳಿ ಶಿವಶಂಕರಪ್ಪ ಮಾತನಾಡಿ, ಕಾವ್ಯ ಕೇವಲ ಭಾವಾಭಿವ್ಯಕ್ತಿಯಾಗದೇ ಸಮಾಜ ವಿಕಸನಕ್ಕೆ ನಾಂದಿ ಹಾಡಬೇಕು. ಸಮಾಜದ ಕಟ್ಟಕಡೆಯ ತಲ್ಲಣಗಳಿಗೂ ಧ್ವನಿಯಾಗಬೇಕು. ಈ ನಿಟ್ಟಿನಲ್ಲಿ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ನೂರಾರು ಹೊಸ ಕವಿಗಳಿಗೆ ವೇದಿಕೆ ನೀಡಿ ಪ್ರೋತ್ಸಾಹಿಸುತ್ತ ಬರುತ್ತಿದೆ ಎಂದರು.

ಮುಳುಗಿದ ಭತ್ತದ ಗದ್ದೆ ಫಸಲು ನಾಶ

ಉದ್ದು, ಹೆಸರು ಮತ್ತು ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದವರು ಕಿಂಡಿ ಅಣೆಕಟ್ಟೆಯ ಕಾರಣದಿಂದಾಗಿ ಭತ್ತದ ಕೃಷಿ ಮಾತ್ರ ಮಾಡುತ್ತಿದ್ದಾರೆ

• ಉದಯವಾಹಿನಿ, ಬ್ರಹ್ಮಾವರ:

ಈಚೆಗೆ ಸುರಿದ ಮಳೆಯಿಂದಾಗಿ ಭತ್ತದ ಗದ್ದೆಗಳು ಜಲಾವೃತವಾಗಿ ಉತ್ತಮ ಇಳುವರಿಯ ನಿರೀಕ್ಷೆಯಲ್ಲಿದ್ದ ಹೇರೂರಿನ ರೈತರಿಗೆ ಸಂಕಷ್ಟ ಎದುರಾಗಿದೆ.

ಬೈಕಾಡಿಯಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟೆಗೆ ಹಲಗೆ ಹಾಕಿದ ಬಳಿಕ ಸುರಿದ ಭಾರಿ ಮಳೆಗೆ ಹೇರೂರು, ಹೆರಂಜೆ, ಉಪ್ಪರು, ಬೈಕಾಡಿಯ ಸುಮಾರು 100 ಎಕರೆಗೂ ಅಧಿಕ ಪ್ರದೇಶದ ಭತ್ತದ ಗದ್ದೆಗಳು ಜಲಾವೃತಗೊಂಡಿವೆ.

1 : ಸುಮಾರು 100 ಎಕರೆಗೂ ಅಧಿಕ ಪ್ರದೇಶ
2 : ಮಳೆ ಇಲ್ಲ ಭತ್ತದ ಇಳುವರಿಯಲ್ಲಿ ಕುಸಿತ
3 : ಮೇಲಿನ ಆದೇಶ ಎಂದು ಹಲಗೆ ಹಾಕಿದ್ದರು

ಹಲವೆಡೆ ಕಟಾವು ಮಾಡಿದ ಭತ್ತದ ತೆನೆಗಳು ನೀರಿನಲ್ಲಿ ತೇಲಿ ಹೋದರೆ ಇನ್ನು ಕೆಲವೆಡೆ ಭತ್ತದ ತೆನೆ ಮುಳುಗಿವೆ. ಬೈಕಾಡಿಯಲ್ಲಿ ಸೀತಾ ನದಿಗೆ ನಾಲ್ಕು ವರ್ಷಗಳ ಹಿಂದೆ ನಿರ್ಮಾಣ ಮಾಡಲಾದ ಕಿಂಡಿ ಅಣೆಕಟ್ಟೆ ಹೆರಂಜೆ, ಹೇರೂರು, ಉಪ್ಪರು ಭಾಗದ ಜನರಿಗೆ ಸಮಸ್ಯೆ ತಂದೊಡ್ಡುತ್ತಿದೆ.

ಉದಯವಾಹಿನಿ ಚಿತ್ರ

'ಕೂಡಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿದರೆ ಅವರೆಲ್ಲರೂ ವರ್ಗವಾಗಿದ್ದರು. ಸ್ಥಳೀಯ ಜನಪ್ರತಿನಿಧಿಗಳ ಮೂಲಕ ಅಧಿಕಾರಿಗಳನ್ನು ಸಂಪರ್ಕಿಸಿದರೆ ಹಲಗೆ ಎತ್ತುವುದಕ್ಕೆ ಸಮರ್ಪಕ ವ್ಯವಸ್ಥೆ ಇರಲಿಲ್ಲ. ಕೆಲಸಗಾರರನ್ನು ಸೇರಿಸಿ ಹಲಗೆ ವಾಪಸ್ ಎತ್ತುವಾಗ ತಡವಾಗಿತ್ತು. ಸದ್ಯ ನೀರು ಸ್ವಲ್ಪ ಇಳಿದಿದೆ. ಆದರೆ, ನೀರು ನಿಂತ ಪರಿಣಾಮ ಅರ್ಧಕ್ಕರ್ಧ ಭತ್ತದ ತೆನೆಗಳು ಉದುರಿ ಹೋಗಿವೆ. ಅಲ್ಲದೆ ಹುಲ್ಲು ಕೂಡ ಸಿಗುವುದಿಲ್ಲ' ಎಂದರು.

'ಕಟಾವು ಕೆಲಸ ಮುಗಿಯಲಿ; ಆ ಬಳಿಕ ಹಲಗೆಯನ್ನು ಹಾಕಿ ಎಂದು ನಾವು ಅಣೆಕಟ್ಟೆಗೆ ಹಲಗೆ ಹಾಕುವ ಮುನ್ನ ಕೆಲಸಗಾರರಿಗೆ ಹೇಳಿದ್ದೆವು. ಆದರೆ, ಮೇಲಿನ ಆದೇಶ ಎಂದು ಹಲಗೆ ಹಾಕಿದ್ದರು. ಈಚೆಗೆ ಸುರಿದ ಮಳೆಗೆ ನೀರು ಉಕ್ಕಿ ಬಂದಿದ್ದು ಗದ್ದೆಗಳಲ್ಲಿ ತೆನೆ ಮುಳುಗಿಹೋಗಿದೆ' ಎಂದು ತಿಳಿಸಿದರು. -ರೈತ ರಾಮಣ್ಣ ಪೂಜಾರಿ

ರಘುಪತಿ ಭಟ್ ಅವರು ಶಾಸಕರಾಗಿದ್ದ ಅವಧಿಯಲ್ಲಿ ಉಪ್ಪು ನೀರು ತಡೆಯುವ ಉದ್ದೇಶದಿಂದ ಈ ಕಿಂಡಿ ಅಣೆಕಟ್ಟೆ ನಿರ್ಮಾಣ ಮಾಡಲಾಗಿತ್ತು. ಆದರೆ, ಈ ಅಣೆಕಟ್ಟೆ ನಿರ್ಮಾಣ ಸರಿಯಾಗಿ ಆಗದ ಕಾರಣ ಉಪ್ಪು ನೀರು ತಡೆಯುತ್ತಿಲ್ಲ. ಕಿಂಡಿ ಅಣೆಕಟ್ಟೆಗೆ ಹಲಗೆ ಜೋಡಿಸಿದ ಮೇಲೂ ಉಪ್ಪು ನೀರು ಹಿನ್ನೀರಿಗೆ ನುಗ್ಗುತ್ತಿದೆ. ಅದರ ಪರಿಣಾಮವಾಗಿ ನದಿ ಪಾತ್ರದ ಹಲವರ ಮನೆಯ ಬಾವಿಗಳ ನೀರು ಉಪ್ಪಾಗಿದೆ. ನದಿ ನೀರನ್ನು ಬಳಸಿಯೂ ಕೃಷಿ ಮಾಡಲು ಸಾಧ್ಯವಾಗುತ್ತಿಲ್ಲ. ಬಾವಿಯ ನೀರು ಉಪ್ಪಾಗಿರುವುದರಿಂದ ಆ ನೀರನ್ನೂ ಬಳಸಿ ಕೃಷಿ ಮಾಡಲಾಗುತ್ತಿಲ್ಲ ಎಂದು ರೈತರು ಅಳಲು ತೊಡಿಕೊಳ್ಳುತ್ತಾರೆ. ಕೃಷಿಯಿಂದ ಹಾಕಿದ ಬಂಡವಾಳ ಬಾರದಿದ್ದರೂ ಬೆಳೆ ಮನೆಗೆ ಬರುವ ತೃಪ್ತಿ ಇತ್ತು. ಕಿಂಡಿ ಅಣೆಕಟ್ಟೆ ಆದ ಮೇಲೆ ಆ ಆಸೆಯೂ ಹೋಗಿದೆ.

ಉದ್ದು, ಹೆಸರು ಮತ್ತು ತರಕಾರಿ ಬೆಳೆಗಳನ್ನು ಬೆಳೆಯುತ್ತಿದ್ದವರು ಕಿಂಡಿ ಅಣೆಕಟ್ಟೆಯ ಕಾರಣದಿಂದಾಗಿ ಭತ್ತದ ಕೃಷಿ ಮಾತ್ರ ಮಾಡುತ್ತಿದ್ದಾರೆ. ಎಲ್ಲಾ ಕಡೆ ಮಳೆ ಇಲ್ಲದೆ ಭತ್ತದ ಇಳುವರಿಯಲ್ಲಿ ಕುಸಿತ ಕಂಡಿದ್ದರೂ ಇಲ್ಲಿ ಉತ್ತಮ ಬೆಳೆಯಾಗಿತ್ತು. ಆದರೆ, ಮಳೆಯಿಂದ ಸಮಸ್ಯೆಯಾಗಿದೆ ಎನ್ನುತ್ತಾರೆ ರೈತರು.

ಮೂರು ವರ್ಷಗಳಿಂದ ಕೃಷಿ ಕಾಯಕದಿಂದ ಹಿಂದೆ ಸರಿದಿದ್ದೇವೆ ಜೇಮ್ಸ್ ರಾಡ್ರಿಗಸ್ ಕೃಷಿಕ, ಹೇರೂರುಮಳೆ ಬಂದು ಗದ್ದೆಗಳಲ್ಲಿ ನೀರು ತುಂಬಿದಾಗ ಹಲಗೆ ತೆಗೆಯಿರಿ ಎಂದು ಹೇಳಿದರೆ ಕೆಲಸಗಾರರು ಇಲ್ಲ ಯಂತ್ರಗಳು ಇಲ್ಲ ಎನ್ನುತ್ತಾರೆ ಅಧಿಕಾರಿಗಳು.

ಮಳೆಗೆ ಮನೆಗಳು ಮುಳುಗಿದರೆ ಗತಿ ಏನು? -ಕುಮಾರ್ ಬೈಕಾಡಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ, ಸಂಬಂಧಪಟ್ಟವರು ಸಮಸ್ಯೆ ಇರುವಲ್ಲಿ ತಡೆಗೋಡೆ ನಿರ್ಮಾಣ ಮಾಡಿ, ನೀರು ಒಳ ನುಗ್ಗದಂತೆ ವ್ಯವಸ್ಥೆ ಮಾಡಬೇಕು. ಕಿಂಡಿ ಅಣೆಕಟ್ಟೆಯನ್ನೂ ಪರಿಶೀಲಿಸಿ ಉಪ್ಪು ನೀರು ಹಿನ್ನೀರಿಗೆ ನುಗ್ಗುವ ಕಾರಣವನ್ನು ಕಂಡು ಹಿಡಿದು ಸಮಸ್ಯೆಗೆ ಪರಿಹರಿಸಬೇಕು -ಉದಯ್ ಕುಮಾರ್ ಹೆಗ್ಡೆ, ಗ್ರಾಮಪಂಚಾಯಿತಿ ಮಾಜಿ ಸದಸ್ಯ.